
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

16 ನವೆಂಬರ್ 2016 ಪುಟ 20 ರೂ. 15/-

ಮೈಸೂರಿಗೆ ಅಂತಾರಾಷ್ಟ್ರೀಯ ಸ್ಥಾನದಕ್ಕಿಸಿದ ಟಿಪ್ಪೂ




ಟಿಪ್ಪೂ ತ್ಯಾಗಕ್ಕೂ ಬ್ರಾಗಳ ಮಸಿ

ಕೊಪ್ಪಳ ಜೆಡಿಎಸ್‌ಗೆ ಯೌವ್ವನದ 'ಲೇಹ್ಯ'?

ಮಂಡ್ಯ
ಕೆಬ್ಬಳ್ಳಿ ಆನಂದನ
'ಕೋಟಿಲೂಟಿ'



ಂಧನೂರು:
ಂಪನಗೌಡನ
ಫ್ಯೂಡಲ್
ಾಜಕಾರಣ




ಕೊಡಗು:
ನರೇಶ್ ಶೆಣೈ
ರಕ್ಷಣೆಗೆ ಸುಲಿಗೆ





ಕೊಲ್ಲೂರು ದೇವಳ:
ಕಳ್ಳ ಕಂಟ್ರಾಕ್ಟರ್‌ಗಳ ಟ್ರಸ್ಟಿ ಮಾಡಲು
ಶಾಸಕ ಪೂಜಾರಿ ಸಂಚು!

ಪೇಜೂ ಪುಟ್ಟನಿಗೆ ಅಣ್ಣನ ಪಾ



ಉಡುಪಿಯ ಪೇಜಾವರಶ್ರೀಗಳ ಕಾವಿ ಉಡುಗೆಯಲ್ಲಿ ಆರೆಸ್ಸೆಸ್‌ನ ಕಾಕಿ ಚೆಡ್ಡಿ ಇದೆಯೆಂದೇ ನನ್ನ ನೇರ ಆರೋಪ. ಆರೆಸ್ಸೆಸ್ ತನ್ನ ಹಿಂದೂತ್ವದ ಮತ್ತು ಅಖಂಡ ಹಿಂದೂ ಸಾಮ್ರಾಜ್ಯದ ಹಾಗೂ ನೇರ ಮುಸ್ಲಿಂ ವಿರೋಧಿಯ ಯಾವುದೇ ಅಜೆಂಡಾ ಇಟ್ಟುಕೊಂಡಿದ್ದರೂ ಕೂಡ ಪೇಜಾವರಶ್ರೀಗಳ ಕಾಲಿಗೆರವುದಕ್ಕೆ ನನ್ನದೇನು ಅಭ್ಯಂತರ? ಕಾಷಾಯ ತೊಟ್ಟವನು ಕಾಮ ಬಿಟ್ಟವನು ಎಲ್ಲರಿಗೂ ಸಲ್ಲುವವನೇ. ಕಾವಿಧಾರಿ ಬೇಕಾಗಿರುವುದೇ ಅಹಂಕಾರಿಗಳಿಗೆ, ಪಾಪಿಗಳಿಗೆ, ದುರಾತ್ಮರಿಗೆ ಮತ್ತು ಅಜ್ಞಾನಿಗಳಿಗೆ. ಇನ್ನು ಪುಣ್ಯಾತ್ಮರಿಗೆ, ಜ್ಞಾನಿಗಳಿಗೆ, ಸರಳ ಸಜ್ಜನರಿಗೆ ಯಾವ ಸ್ವಾಮೀಜಿಯ ಬಳಿಗೆ ಹೋಗಿ ಆಗಬೇಕಾದುದೇನಿದೆ? ಅವರಿಗೆ ಅವರ ಜೀವನ ದರ್ಶನ ಸ್ಪಷ್ಟವಾಗಿರುತ್ತದೆ. ತಮ್ಮ ದಾರಿ ಮತ್ತು ಗುರಿ ನೇರವಾಗಿರುತ್ತದೆ.

ದುಷ್ಟ ವಿದ್ಯಾರ್ಥಿಗಳಿಗೇ ಗುರುವಿನ ಅನುಗ್ರಹ ಆಗಬೇಕಾಗಿರುವುದು. ಜಾಣ ಅಥವಾ ಅರಿವೇ ಗುರುವಾಗಿರುವವನಿಗೆ ಯಾವ ಕಾವಿಧಾರಿಯಿಂದ ಆಗಬೇಕಾದುದ್ದೇನು? ಆದರೂ, ಜಾಣನಾದವನು, ತನ್ನ ಅರಿವೇ ಗುರುವಾಗಿ ಹೊಂದಿರುವವನೂ ಕೂಡ ಎಲ್ಲರ ಮಾತುಗಳಿಗೂ ಕಿವಿಯಾಗುತ್ತಾನೆ. ಆಲಿಸುತ್ತಾನೆ. ತನ್ನ ನಡೆ ನುಡಿ ದರ್ಶನ ಶ್ರವಣಗಳಲ್ಲಿ ಏನಾದರೂ ಲೋಪವಿದೆಯೋ ಎಂಬುದರ ವಿಮರ್ಶೆ ಮಾಡಿಕೊಳ್ಳುತ್ತಾನೆ. ಜ್ಞಾನಿಗಳೂ ಮತ್ತೊಬ್ಬ ಜ್ಞಾನಿಯನ್ನು ಗೌರವದಿಂದ ಸಂಧಿಸುವುದರ ಉದ್ದೇಶವೇ ಕೊಡುಕೊಳುವುದಕ್ಕೆ. ತನಗೆ ತಿಳಿಯದೇ ಇರುವುದನ್ನು ಅವರಿಂದ ತಿಳಿದುಕೊಳ್ಳುವುದಕ್ಕೆ. ತನ್ನ ತಪ್ಪು ಗ್ರಹಿಕೆಯೇನಾದರೂ ರೂಢಿಯಲ್ಲಿ ಒಪ್ಪಿತವಾಗಿಬಿಟ್ಟಿದ್ದ ಪಕ್ಷದಲ್ಲಿ ಅದರ ಬಗ್ಗೆ ತಿಳಿದುಕೊಂಡು ಅದನ್ನು ಸರಿ ಪಡಿಸಿಕೊಳ್ಳುವುದಕ್ಕೆ. ಯಶಸ್ವೀ ಮನುಷ್ಯನ ಮೊದಲ ಲಕ್ಷಣವೇ ತನ್ನ ಇತಿ ಮಿತಿಯನ್ನು ಅರಿತುಕೊಂಡು ಅದನ್ನು ದಾಟಿ ಹೋಗುವ ಯತ್ನವನ್ನು ಮಾಡುವುದು. ತನ್ನ ಇತಿ ಮಿತಿ ಮತ್ತು ದೌರ್ಬಲ್ಯವನ್ನೇ ಅರಿತುಕೊಳ್ಳದಿದ್ದರೆ ಇನ್ನು ಅದನ್ನು ದಾಟುವ ಬಗೆಯಾದರೂ ಹೇಗೆ?

ಜ್ಞಾನಿಗಳಿಗಾಗಲಿ, ಅಜ್ಞಾನಿಗಳಿಗಾಗಲಿ, ಮೂರ್ಖರಿಗಾಗಲಿ, ಮುಗ್ಧರಿಗಾಗಲಿ; ಯಾರಿಗೇ ಆಗಲಿ ಸಮಾಜದಲ್ಲಿರುವ ಸಂನ್ಯಾಸಿ ಎಂಬ ಆಧ್ಯಾತ್ಮ ಶಿಕ್ಷಕ ಸ್ವಯಂಸೇವಕನಾಗಿ ಕೆಲಸ ಮಾಡಬೇಕು. ಅವನಿಗೆ ರಾಷ್ಟ್ರವೆಂಬ ಗಡಿ ರೇಖೆಯಿಲ್ಲ, ಧರ್ಮದ ಚೌಕಟ್ಟಿಲ್ಲ, ಪಾಪ ಪುಣ್ಯಗಳ ಬಂಧನಗಳಿಲ್ಲ, ಮಾನ ಅಪಮಾನಗಳ ಅರಿಮೆಗಳಿಲ್ಲ. ಆತ್ಮವೆಂಬ ವ್ಯಕ್ತಿಯ ಚೈತನ್ಯವು ಪರಮಾತ್ಮ ಎಂಬ ಮಹಾಚೈತನ್ಯದೊಂದಿಗೆ ಕೂಡಿಸುವ ಮಾರ್ಗದರ್ಶಿಯಾಗುವಂತಹ ಅಪೂರ್ವ ಅವಕಾಶ ಈ ಸಂನ್ಯಾಸಿ ಎಂಬ ಶಿಕ್ಷಕನದು. ಆದರೆ ಪೇಜಾವರಶ್ರೀಯ ಸಮಸ್ಯೆ ಇರುವುದೇ ಇಲ್ಲಿ. ಅವರಿಗೆ ಹಿಂದೂ ಧರ್ಮದ ಬಂಧನವಿದೆ. ಅವರ ಧೋತಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕರ ಚೆಡ್ಡಿಯಿದೆ. ದೇವಸ್ಥಾನದಲ್ಲಿ ಪಾಪ ಪುಣ್ಯಗಳ ವ್ಯಾಪಾರ ವ್ಯವಹಾರವಿದೆ.

ಹಿಂದೂ ಸಂನ್ಯಾಸಿ, ಕ್ರೈಸ್ತ ಸಂನ್ಯಾಸಿ, ಇಸ್ಲಾಂ ಸಂನ್ಯಾಸಿ; ಹೀಗೆ ಯಾವುದೇ ಸಂನ್ಯಾಸಿಯಾದರೂ ಅವರಿಗೆ ಅವರವರ ಧರ್ಮವು ಬರಿಯ ದಾರಿ ಎಂಬ ಅರಿವಿದ್ದು ಏಕಂ ಸತ್ ವಿಪ್ರಾ ಬಹುದಾ ವದಂತಿ ಎಂಬಂತೆ ಒಂದೇ ಸತ್ಯವನ್ನು ಹಲವು ಹೆಸರುಗಳಿಂದ ಕರೆಯುವರು ಎಂದು ತಿಳಿದಿದ್ದು, ಹೆಸರು, ಧರ್ಮ, ಆಚಾರ, ಸಂಪ್ರದಾಯಗಳಿಂದ ಅತೀತವಾದ ಭಗವಂತನ ಸಾಕ್ಷಾತ್ಕಾರ ಅಥವಾ ಸತ್ಯದ ಸಾಕ್ಷಾತ್ಕಾರವೇ ಅವರ ಗುರಿಯಾಗಿರುತ್ತದೆ. ಅದರ ಕಡೆಗೆ ಇತರರನ್ನೂ ಕರೆದೊಯ್ಯುವುದು ಅವರ ಮೊದಲ ಮತ್ತು ಅಂತಿಮ ಉದ್ದೇಶವೂ ಕೂಡ. ಇದಕ್ಕೆ ಪೂರಕವಾಗಿಯೇ ಬದುಕಿನ ಇತರ ಆಗುಹೋಗುಗಳನ್ನು ನೋಡುವಂತೆ, ಕ್ರಿಯೆಗಳನ್ನು ಮಾಡುವಂತೆ ಹಾಗೂ ವರ್ತನೆಗಳನ್ನು ರೂಢಿಸಿಕೊಳ್ಳುವಂತೆ ತನ್ನ ಸಹಜೀವಿಗಳನ್ನು ಪ್ರೇರೇಪಿಸುವುದು ಯಾರೊಬ್ಬ ಸಂನ್ಯಾಸಿಯ ಕರ್ತವ್ಯವಾಗಿರುತ್ತದೆ.

ಹಾಗೆ ಮಾಡದೇ ಇರುವ ಯಾರೊಬ್ಬ ಸಂನ್ಯಾಸಿಯು ಕಾವಿ ವೇಷಧಾರಿಯಾಗಿದ್ದು ಆಧ್ಯಾತ್ಮ ಪರಂಪರೆಯನ್ನು ವಂಚಿಸುವ ಕಪಟಿಯಾಗಿರುತ್ತಾನೆ. ಸಂನ್ಯಾಸಿ ವೇಷದ ಸಂಸಾರಿಯಾಗಿರುತ್ತಾನೆ.

ಮಠ ದೇಗುಲವಲ್ಲ

ಮಠಗಳು ದೇವಸ್ಥಾನಗಳಲ್ಲ, ದೇವಸ್ಥಾನಗಳಾಗಕೂಡದು. ಏಕೆಂದರೆ, ಮಠವು ದೇವಸ್ಥಾನದ ಮಜಲನ್ನು ದಾಟಿರುವಂತಹ ಹಂತ. ಒಂದು ದೇವತಾ ವಿಗ್ರಹ, ಅದಕ್ಕೊಂದು ಅಭಿಷೇಕ, ಪೂಜೆ, ಷೋಡಶೋಪಚಾರ, ಅರ್ಚನೆ, ಆರಾಧನೆ, ಆರತಿ ಇವೆಲ್ಲವೂ ಕೂಡ ಭಕ್ತಿಮಾರ್ಗದಲ್ಲಿ ಬರಿಯ ಪ್ರಾಥಮಿಕ ಹಂತ. ಅಮೂರ್ತವಾಗಿರುವಂತಹ ಪರಮಾತ್ಮನನ್ನು ಬರಿದೇ ಶೂನ್ಯದಲ್ಲಿ ಗ್ರಹಿಸಲು ಸಾಧ್ಯವಾಗದೆಂದೇ ಮೊದಲು ಮೂರ್ತಿಯಿಂದ ಪ್ರಾರಂಭಿಸಿ ಅಮೂರ್ತಕ್ಕೆ ಕರೆದೊಯ್ಯುವುದು. ಸಾಕಾರದಿಂದ ನಿರಾಕಾರಕ್ಕೆ ಒಯ್ಯುವುದು. ಪ್ರತಿಯೊಬ್ಬ ಧಾರ್ಮಿಕ ಅಥವಾ ಆಧ್ಯಾತ್ಮ ವ್ಯಕ್ತಿಯ ಪ್ರಕ್ರಿಯೆಯು ಇರಬೇಕಾಗಿರುವುದೇ ಹೀಗೆ. ಆದರೆ ಉಡುಪಿಯ ಕೃಷ್ಣ ಮಠವು ಇಂತಹ ಅಧ್ಯಾತ್ಮಕ್ಕಿಂತಲೂ ದೇವಾಲಯದ ಕೃಷ್ಣನ ವಿಗ್ರಹದ ಸುತ್ತಲೂ ತಿರುಗುತ್ತಿರುವುದು ಆಧ್ಯಾತ್ಮಕ್ಕೆ ಒತ್ತುಕೊಡುವ ನನ್ನ ಅಥವಾ ನನ್ನಂತವರ ಪ್ರಶ್ನೆಗೆ ಆಹಾರವಾಗಿರುವುದು.

ದೇವತಾ ಪ್ರತಿಮೆಯು ಕರಗದೇ ಅಪ್ರತಿಮ ಅಕಳಂಕ ಚೈತನ್ಯವನ್ನು ಸೇರಲಾಗದು. ಅಧ್ಯಾತ್ಮದ ಮಹಾ ಸಾಗರದಲ್ಲಿ ದೇವರು ಅಥವಾ ದೇವತೆಗಳ ಪ್ರತಿಮೆ ಉಪ್ಪಿನದಾಗಿದ್ದು ಕರಗಿ ಹೋಗಬೇಕು. ಆದರೆ ಅದು ಬೆನ್ನಿಗೆ ಕಟ್ಟಿಕೊಂಡಿರುವ ಲೋಹ ಅಥವಾ ಕಲ್ಲಿನ ಘನವಾದ ಮತ್ತು ಭಾರದ ಪ್ರತಿಮೆಗಳಾಗಿದ್ದು ಬೇತಾಳವಾಗಿದೆ. ಇದರಿಂದ ಆ ಪ್ರತಿಮೆಗಳನ್ನು ಕಟ್ಟಿಕೊಂಡವನು ಆ ಭಾರಕ್ಕೆ ಮುಳುಗಿ ಹೋಗುತ್ತಿದ್ದಾನೆ.


ಅರ್ಚಕನಿಗೆ ದೇವತಾ ಪ್ರತಿಮೆಗಳು ಬೇಕು. ಅದನ್ನು ಮತ್ತೊಬ್ಬರ ಪರವಾಗಿ ಪೂಜಿಸುತ್ತಾ ತನ್ನ ಹೊಟ್ಟೆ ಹೊರೆದುಕೊಳ್ಳುವವನು. ಆದರೆ ಸಂನ್ಯಾಸಿಗಳಿಗೇಕೆ ಆ ವಿಗ್ರಹಗಳ ಉಸಾಬರಿ? ಅವರಿಗೇಕೆ ದೇಗುಲ? ಅವರು ಓಡಾಡುವ ಜಾಗವೆಲ್ಲಾ ದೇವಾಲಯಗಳಾಗುತ್ತವೆ. ಅವರು ಕಾಣುವ ಜೀವಿಗಳಲ್ಲೆಲ್ಲಾ ದೇವರನ್ನು ದರ್ಶಿಸುತ್ತಾರೆ. ಆದ್ದರಿಂದಲೇ ಬಸವಣ್ಣನವರು "ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಯ್ಯಾ ಬಡವನು. ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ" ಎಂದು ದೇಹವನ್ನು ದೇವಾಲಯವನ್ನಾಗಿಸಿಕೊಳ್ಳುವರು. ಉಳ್ಳವರಿಂದ ದೇವಸ್ಥಾನವನ್ನು ಮಾಡಿಸಿ, ಅದಕ್ಕೆ ಉಳ್ಳವರಿಂದ ದೇಣಿಗೆಗಳನ್ನು, ಕಾಣಿಕೆಗಳನ್ನು ಪಡೆಯುತ್ತಾ ಧರ್ಮ ಅರ್ಥ ಕಾಮ ಮೋಕ್ಷಗಳ ಮಾತಾಡುತ್ತಾ ಲೌಕಿಕದಲ್ಲಿಯೇ ಇರಿಸುವ ಮಠಗಳಲ್ಲಿರುವ ಯತಿಗಳಿಗೆ ಬಸವಣ್ಣ ಅರ್ಥವಾಗರು.

ಸಂನ್ಯಾಸಿಯ ಸಾಮಾಜಿಕ ಕೆಲಸ

ಸಂನ್ಯಾಸಿಯ ಕೆಲಸವೇ ಚೌಕಟ್ಟುಗಳನ್ನು ಒಡೆಯುವುದು, ಸೀಮಾರೇಖೆಗಳನ್ನು ಅಳಿಸುವುದು, ಎಲ್ಲದರ ಬಂಧನಗಳಿಂದ ಬಿಡಿಸಿ ಮುಕ್ತರಾಗಿ ಸಾಕ್ಷಾತ್ಕಾರವನ್ನು ಹೊಂದುವುದು, ಹಾಗೂ ಅದಕ್ಕೆ ಸಹಕರಿಸುವುದು. ಸಮಾಜದಲ್ಲಿರುವ ಕಾರಣದಿಂದ ಇದೇ ಮುಕ್ತ ಮತ್ತು ವಿಕಸಿತವಾದ ವಿಚಾರಗಳನ್ನು ಎಲ್ಲಾ ಕ್ರಿಯೆಗಳಿಗೂ ಅಳವಡಿಸುವುದು.

ಪಂಕ್ತಿ ಬೇಧ ಯಾಕ್ ಸ್ವಾಮೀ? ಅಂದರೆ, ಕೆಲವು ಕರ್ಮಠ ಅಥವಾ ಸಂಪ್ರದಾಯವಾದಿ ಬ್ರಾಹ್ಮಣರಿದ್ದಾರೆ. ಅವರು ಪ್ರತ್ಯೇಕ ಪಂಕ್ತಿಯನ್ನು ಬಯಸುತ್ತಾರೆ ಎಂದರೆ ಸಂನ್ಯಾಸಿಯ ಕೆಲಸವೇನು? ಅವರಿಗಿರುವ ಕರ್ಮಠ ಬಂಧನವನ್ನು ಬಿಡಿಸುವುದೋ ಅಥವಾ ಅದನ್ನು ಮತ್ತಷ್ಟು ಗಟ್ಟಿಗೊಳಿಸುವುದೋ?

ಇನ್ನೊಂದು ಸಂಗತಿ. ವ್ಯಕ್ತಿ ತನ್ನ ಬಾಲ್ಯದಲ್ಲಿ ಬಾಲಿಶವಾದಂತಹ ಹಟಗಳನ್ನು ಮಾಡುತ್ತಾನೆ. ಯೌವನದಲ್ಲಿ ಅಪ್ರಬುದ್ಧ ಛಲಗಳನ್ನು ಹೊಂದುತ್ತಾನೆ. ವಯಸ್ಕನಾದಲ್ಲಿ ತನ್ನ ಬದುಕಿನ ನಿರ್ವಹಣೆಗೆ ಸಫಲತೆ ಅಥವಾ ವಿಫಲತೆಯನ್ನು ಹೊಂದಬಹುದಾದ ನಾನಾ ರೀತಿಯ ಪ್ರಯೋಗಗಳನ್ನು ಮಾಡುತ್ತಿರುತ್ತಾನೆ. ವೃದ್ಧನಾಗುವ ಹೊತ್ತಿಗೆ ಮಾಗಿರುತ್ತಾನೆ, ಪಕ್ವವಾಗಿರುತ್ತಾನೆ, ತನ್ನದೇ ಬದುಕಿನ ಅನುಭವಗಳಿಂದ ಜ್ಞಾನಿಯಾಗಿರುತ್ತಾನೆ. ಅವನ ಪಕ್ವತೆಯು ಅವನ ಪ್ರಜ್ಞಾವಂತಿಕೆಯನ್ನು ಪ್ರಬುದ್ಧವಾಗಿರಿಸಿರುತ್ತದೆ. ಆಗ ಅವನು ಸಣ್ಣ ಮಗುವಿನಂತೆ ಬಾಲಿಶವಾದಂತಹ ಹಟಗಳನ್ನು ಮಾಡುವುದಿಲ್ಲ, ಯುವಕನಂತೆ ಪರಿಣಾಮಗಳ ಮುಂದಾಲೋಚನೆಯಿಲ್ಲದೆ ಬಿಸಿರಕ್ತದ ಆವೇಶದಲ್ಲಿ ಛಲದಿಂದ ತೊಡೆಗಳನ್ನು ತಟ್ಟುವುದಿಲ್ಲ, ವಯಸ್ಕನಂತೆ ಸಾಫಲ್ಯ ವೈಫಲ್ಯಗಳ ಅರಿವಿಲ್ಲದೇ ದುಡುಕುವುದಿಲ್ಲ, ಅವನ ಮಾಗಿದ ದೇಹದಲ್ಲಿ ಪ್ರಬುದ್ಧ ಪ್ರಜ್ಞೆಯು ಅತ್ಯಂತ ಮೌಲ್ಯಾಧಾರಿತ



ವಾಗಿರುತ್ತದೆ. ಇದು ಒಬ್ಬ ಸಾಮಾನ್ಯ ಮುದುಕನ ಲಕ್ಷಣವಾಗಿರಬೇಕು, ಪ್ರಕ್ರಿಯೆಗಳು ಸಹಜವಾಗಿದ್ದ ಪಕ್ಷದಲ್ಲಿ. ಇನ್ನು ಒಬ್ಬ ಸಂನ್ಯಾಸಿಯೇ ವೃದ್ಧನಾಗಿದ್ದಾನೆಂದರೆ!

"ಶಿವಭಕ್ತರಲ್ಲದವರೊಡನೆ ಊಟ ಮಾಡೆನು ಎಂದ ಬಸವಣ್ಣನವರ ತಲೆ ತೊಳಿಯುತ್ತೀರೇನು?" ಎಂದು ತಮ್ಮ ಪಂಕ್ತಿಬೇಧವನ್ನು ಸಮರ್ಥಿಸಿಕೊಳ್ಳಲು ಬಸವಣ್ಣನವರನ್ನು ಎಳೆದು ತಂದ ಪೇಜಾವರರಿಗೆ ಒಂದರ್ಥವಾಗಬೇಕಿದೆ.

"ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" ಎಂದು ತಾವು ಸಮಾಜದಲ್ಲಿ ಉತ್ತಮ ಕುಲದಲ್ಲಿ ಹುಟ್ಟಿದ್ದು ಅದು ಸಮಾಜದಲ್ಲಿ ಇತರರನ್ನು ಶೋಷಿಸುವುದರ ಬಗ್ಗೆ ಬೇಸರಗೊಂಡು ನೊಂದ ಬಸವಣ್ಣನವರು ತಮ್ಮ ಜೈವಿಕ ಹುಟ್ಟನ್ನು ಸಾಮಾಜಿಕ ಬದುಕಿಗೆ ರೂಪಾಂತರಿಸಿಕೊಂಡರು. "ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ, ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ ಎನ್ನನೇತಕ್ಕರಿಯಿರಿ, ಕೂಡಲಸಂಗಯ್ಯ."

ಇನ್ನು ಬಸವಣ್ಣನವರಲ್ಲಿದ್ದದ್ದು ಅತಿ ಮುಖ್ಯವಾದ ಗುಣವೆಂದರೆ ತಮ್ಮನ್ನು ತಾವೇ ವಿಮರ್ಶೆಗೆ ಒಳಪಡಿಸಿಕೊಳ್ಳುವುದು. "ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ, ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ, ನುಡಿಗೆ ತಕ್ಕ ನಡೆಯ ಕಂಡಡೆ, ಕೂಡಲಸಂಗಮದೇವನೊಳಗಿಪ್ಪನಯ್ಯಾ" ಹೀಗೆ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾ ತನ್ನ ಬದುಕಿನುದ್ದಕ್ಕೂ ತಾವು ಪ್ರಯೋಗಕ್ಕೆ ಒಳಪಡಿಸಿಕೊಂಡಂತಹ ವಿವಿಧ ಹಂತಗಳನ್ನು ದಾಖಲಿಸುತ್ತಾ ಹೋದರು. ಕೆಲವೊಂದು ವಿಷಯಗಳು ಪ್ರಾರಂಭಿಕವಾಗಿದ್ದು ಒಂದು ನಿಲುವಿನ ದೃಷ್ಟಿಯನ್ನು ಹೊಂದಿದ್ದರೆ, ತಾವು ಬೆಳೆಯುತ್ತಾ, ಅನುಭಾವಿಗಳೊಡನೆ ಬೆರೆಯುತ್ತಾ, ತಮ್ಮ ಅನುಭವ ಮಂಟಪದಲ್ಲಿ ನಡೆವ ವಿಚಾರ ಮಥನದಿಂದ ತಾವೇ ಅನುಭಾವಿಯಾಗುತ್ತಾ ತಮ್ಮ ಹಿಂದಿನ ಮಾತುಗಳನ್ನು ತಾವೇ ಮುರಿಯುತ್ತಾರೆ. ಅದು ನಿಜಕ್ಕೂ ಬೆಳೆಯುವುದರ ಮತ್ತು ಬೆಳಗುವುದರ ಲಕ್ಷಣ.

ವಚನ ಕ್ರೋನಾಲಜಿ

ಹಣೆಯಲ್ಲಿ ವಿಭೂತಿ ಇಡುವುದರ ಬಗ್ಗೆ ತಮ್ಮ ಒಂದು ವಚನದಲ್ಲಿ "ಅಡ್ಡ ವಿಭೂತಿಯಿಲ್ಲದವರ ಮುಖಹೊಲ್ಲ, ನೋಡಲಾಗದು. ಲಿಂಗದೇವನಿಲ್ಲದ ಠಾವು ನರವಿಂಧ್ಯ, ಹೋಗಲಾಗದು. ದೇವಭಕ್ತರಿಲ್ಲದೂರು ಸಿನೆ ಹಾಳು, ಕೂಡಲಸಂಗಮದೇವಾ" ಎಂದು ವಿಭೂತಿ ಇಲ್ಲದವನ ಮುಖವನ್ನು ನೋಡಲಾಗದು ಎಂದವರೇ, ಮುಂದೆ "ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಿಲ್ಲದನ್ನಕ್ಕ? ಮಣೀಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ? ನೂರನೋದಿ ಏವೆನಯ್ಯಾ, ನಮ್ಮ ಕೂಡಲಸಂಗಮದೇವರ ಮನಮುಟ್ಟದನ್ನಕ್ಕ?" ಎಂದು ಹೊರಗೆ ವಿಭೂತಿಯನ್ನು ಪೂಸಿದ್ದು ಒಳಗೆ ಶುದ್ಧವಿಲ್ಲದಿದ್ದರೆ ಪ್ರಯೋಜನವಿಲ್ಲ ಎಂದು ಸ್ಪಷ್ಟಗೊಳಿಸುತ್ತಾರೆ. ಒಂದೇ ಸಮನೆ, ಒಂದೇ ಕಡೆ ಕುಳಿತು ರಚಿಸಿರುವಂತದ್ದಲ್ಲ ಅಣ್ಣನ ವಚನಗಳು. ಸಮಯಾನುಸಾರ ಮತ್ತು ಸಂದರ್ಭಾನುಸಾರ ಅಣ್ಣನ ವಚನಗಳು ರೂಪುಗೊಂಡಿದ್ದು ಅವುಗಳ ರಚನೆಯ ಕಾಲಾನುಕ್ರಮಣಿಕೆಯಲ್ಲಿ ವ್ಯತ್ಯಾಸವಿರುತ್ತದೆ. ಅಂತೆಯೇ ಆಯಾ ಸನ್ನಿವೇಶದ ಅರಿವು ಇಲ್ಲದೇ ಹೋದರೆ ನಮಗೆ ವಚನಗಳ ಕಾರ್ಯ ಕಾರಣಗಳು ತಿಳಿಯವು.

ಆದರೆ ಯಾರೇ ಬಂದರೂ ಹಿರಿಯರು, ಕಿರಿಯರು, ಮೇಲ್‌ಸ್ತರದವರು, ಕೆಳವರ್ಗದವರು ಎಂದು ಭೇದಭಾವ ಮಾಡದೇ ಪರಿಗಣಿಸಬೇಕೆಂಬುದು ಅವರ ಜೀವನದ ಕ್ರಮವಾಗಿತ್ತು ಮತ್ತು ಉಪದೇಶವಾಗಿತ್ತು ಕೂಡ.

"ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು, ಭಕ್ತರೆಲ್ಲರೂ ಕೂರ್ತು ಹತ್ತಿರ ಕರೆವುತ್ತಿರಲು,

ಮತ್ತೆ ಕೆಲಕ್ಕೆ ಸಾರ್ದು, ಶರಣೆಂದು ಹಸ್ತ ಬಾಯನೆ ಮುಚ್ಚಿ ಕಿರಿದಾಗಿ ಭೃತ್ಯಾಚಾರವ ನುಡಿದು,

ವಿನಯ ತದ್ಭಾವ ಸವುಳ್ಳಡೆ ಎತ್ತಿಕೊ…
ಕೂಡಲಸಂಗಮದೇವ ಪ್ರಮಥರ ಮುಂದೆ."

ಎಲ್ಲಾ ಭಕ್ತರನ್ನೂ ಇಲ್ಲಿ ಬನ್ನಿ ಇಲ್ಲಿ ಬ…
ಕರೆದು ಹತ್ತಿರದಲ್ಲಿ ಕೂರಿಸಿಕೊಂಡು, ಕೆಲ…
ಮಾತ್ರ ಹೋಗಿ 'ಶರಣು' ಎಂದು ಬಾಯಿಗೆ ಕೈ…
ಹಿಡಿದುಕೊಂಡು ಉಪಚಾರ ಮಾ…
ವಿನಯವುಳ್ಳವನನ್ನು ಕೂಡಲಸಂಗಮದೇವ …
ಎಂದು ಪಂಕ್ತಿಬೇಧವನ್ನು ನೇರವಾಗಿ ಖಂಡಿಸು…
ಯಾರೇ ತಮ್ಮ ಬಳಿಗೆ ಬಂದರೆ "ಏನು…
ಹುದುಳಿದ್ದಿರೆ ಎಂದಡೆ ನಿಮ್ಮ ಸಿರಿ ಹಾರಿ …
ಕುಳ್ಳಿರೆಂದಡೆ ನೆಲ ಕುಳಿಹೋಹುದೆ? ಒಡನ…
ಸಿರ, ಹೊಟ್ಟೆಯೊಡೆವುದೆ? ಕೊಡಲಿದಿದ…
ಗುಣವಿಲ್ಲದಿದ್ದಡೆ ಮೂಗ ಕೊಯ್ವುದ…
ಕೂಡಲಸಂಗಮದೇವಯ್ಯ?" ಏನು ಸಮಚಾ…
ಬಂದ ವಿಷಯ ಎಂದು ವಿಚಾರಿಸಿಕೊಂಡು ಚಿ…
ಎಂದು ಕೇಳಿದರೆ ನಿಮ್ಮ ಐಶ್ವರ್ಯ…
ಹೋಗುತ್ತದೆಯೇ? ಕೂತ್ಕೊಳ್ಳಿ ಎಂದು ಗ…
ನೆಲ ತಗ್ಗಿ ಕುಸಿದು ಹೋಗುವುದೇ? ಮಾತಾಡಿಸಿ…
ಬಂಕ ಬಿಗುಮಾನಗಳಿಲ್ಲದೇ ಮಾತಾಡಿದರೆ ತ…
ಒಡೆದುಹೋಗುವುದೇ? ಎಂದು ಬಂಕ…
ಅಹಂಕಾರಿಗಳನ್ನು ಬಸವಣ್ಣ ನೇರವಾಗಿ ಖಂಡಿ…

ಓದಿದ ಪಂಡಿತರಿಗೊಂದು ಮಾನ್ಯತೆ, ಓದ…
ಇತರ ಕಸುಬುಗಳನ್ನು ಮಾಡುವ ತಳವರ್ಗದವ…
ವರ್ತನೆಯನ್ನು ತೋರುವವರನ್ನು ಅಣ್ಣಾ ಬ…
"ವೇದ, ಶಾಸ್ತ್ರ ಆಗಮಂಗಳನೋದಿದವರು …
ಕವಿ, ಗಮಕಿ, ವಾದಿ ವಾಗ್ಮಿಗಳು ಹಿರಿಯರ…
ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊ…
ಕಿರಿಯನೇ? ಹಿರಿಯತನವಾವುದೆಂದಡೆ;
ಆಚಾರಧರ್ಮ, ಕೂಡಲಸಂಗನ ಶರಣರು…
ಸಾಧನೆಯೆ ಹಿರಿಯತನ" ಎಂದು ನೇರವಾಗಿ …

ಅದರಂತೆಯೇ ತಮ್ಮ ಮಾರ್ಗದಲ್ಲಿ ಅಚ…
ವುದನ್ನೂ ದೃಢಪಡಿಸಿಕೊಳ್ಳುತ್ತಾರೆ. "ಸೂಳೆಗೆ…
ಕೂಸಿನಂತೆ ಆರನಾದಡೆಯೂ 'ಅಯ್ಯಾ ಅಯ್ಯಾ…
ಚೆನ್ನಯ್ಯನೆಮ್ಮಯ್ಯನು, ಚೆನ್ನಯ್ಯನ ಮ…
ಕೂಡಲಸಂಗನ ಮಹಾಮನೆಯಲಿ ಧರ್ಮಸಂತಾ…
ಬಸವಣ್ಣನು" ಶರಣ ಪರಂಪರೆಯ ವ…
ಕಟ್ಟಿಕೊಡುವ ಪ್ರಕ್ರಿಯೆಯಲ್ಲಿ ತನ್ನ ಮಿತಿಯನ್ನು…
ಕೈಡಲು ಅಂಜದೇ ತಾನು ತಳವರ್ಗದವರಲ್ಲಿರು…
ವನ್ನು ಗ್ರಹಿಸಿ ಗುಣಭಿಕ್ಷೆ ಬೇಡಲು ಹಿಂಜರಿ…

"ಭಕ್ತಿಯಿಲ್ಲದ ಬಡವ ನಾನಯ್ಯ ಕಕ್ಕಯ್ಯನ …
ಬೇಡಿದೆ, ಚೆನ್ನಯ್ಯನ ಮನೆಯಲ್ಲೂ ಬೇಡಿದೆ,
ಮನೆಯಲ್ಲೂ ಬೇಡಿದೆ. ಎಲ್ಲಾ ಪುರಾತನರು ನೆರೆ…
ವನ್ನಿಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗ…

ಹುಲ್ಲಾಗಿ ಬೆಟ್ಟದಡಿ ಮನೆಗೆ ಮಲ್ಲಿಗೆಯ…
ಕಷ್ಟಗಳ ಮಳೆಯ ವಿಧಿ ಸುರಿಯೆ ಬೆಲ್ಲಸಕ್ಕರ…
ದೀನದುರ್ಬಲರಿಂಗೆ ಎಲ್ಲರೊಳಗೊಂದಾಗುವ …
ನಂತೆ ಬದುಕುವ ಅಣ್ಣಾ ಸಮತೆ ಸಹಜತೆಗೆ …
ತಮ್ಮ ಬ್ರಾಹ್ಮಣ್ಯವನ್ನು ನಿರಾಕರಿಸುತ್ತಾರೆ. "ಸೆ…
ಸಿರಿಯಾಳನ? ಮಡಿವಾಳನೆಂಬೆನೆ ಮಾ…
ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ …
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗು…

ಬಸವಣ್ಣನವರದು ಬರಿಯ ಬಾಯುಪಚಾ…
ಬರಿಯ ಮಾತಿನಲ್ಲಿ ಸಮತೆಯನ್ನು ಸಾಧಿಸುವು…
"ಹಸಿದು ಬಂದ ಗಂಡಂಗೆ ಉಣಲಿಕ್ಕದೆ, ಬಡ…
ಮರುಗುವ ಸತಿಯ ಸ್ನೇಹದಂತೆ, ಬಂದುದ…
ಇದ್ದುದ ಸಮಸ್ತ, ದುಃಖವಿಲ್ಲದ ಆಕ್ಕೆ ಹರಗೆ…
ಕೂಡಲಸಂಗಮದೇವಾ" ಹಸಿದು ಬಂದಿರುವ…
ಊಟವಿಡದೇ ತೆಳ್ಳಗಾಗಿಬಿಟ್ಟ ಎಂದು …
ಪ್ರಯೋಜನವೇನು ಎಂದು ಬಸವಣ್ಣ …
ಎಲ್ಲರಲ್ಲೂ ಭಗವಂತನಿದ್ದಾನೆ ಎಂದು ಬಾಯಲ್ಲಿ
ಸಾಲದು. ಅದಂತೂ ಅವರ ವಚನದ…
"ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ
ತನುಮನಧನವ ಸವೆಸಲೇಬೇಕು. ನಮ್ಮ ಕೂ…
ಶರಣರಿಗೆ ಅಂಜಲೇ ಬೇಕು."

ಕೆಲಸ ಪ್ರೇಮದ ಸಾಕಾರ ರ…

ನಿನ್ನ ಪ್ರೇಮವನ್ನು ನೀನು ಮಾಡುವ …
ತೋರು ಎನ್ನುವ ಖಲೀಲ್ ಗಿಬ್ರಾನನ ಮ…
ನೆನಪಿಗೆ ತರುತ್ತದೆ. ದಲಿತರ, ದೀನರ ಅಥವಾ
ಬಗ್ಗೆ ಅಯ್ಯೋ ಅಯ್ಯೋ ಎಂದು …
ಮಾತುಗಳನ್ನಾಡಿದರೆ ಪ್ರಯೋಜನವಾಗದು. ಆ…
ಕೆಲಸ ಮಾಡುತ್ತಿರುವ, ಅವರನ್ನು ಹೇಗೆ ಗ…


ಮುಸಲ್ಮಾನರನ್ನು ಕೊಂದರೆ ಶಿಕ್ಷೆ ಇಲ್ಲ



• ಗೌರಿ ಲಂಕೇಶ್
editorlankesh@gmail.com

ಯಾವುದೇ ಸಂದರ್ಭದಲ್ಲಿ ತಮ್ಮ ಪ್ರಾಣಕ್ಕೆ ಅಪಾಯ ದೆ ಎಂದಾಗ ಮಾತ್ರ ಪೊಲೀಸರು ಗುಂಡು ಹಾರಿಸಬೇಕೆ ರತು ಸುಖಾಸುಮ್ಮನೆ ಹಾರಿಸಬಾರದು ಎಂದು ಪ್ರೀಂಕೋರ್ಟ್ ಮತ್ತು ರಾಷ್ಟ್ರೀಯ ಮಾನವ ಹಕ್ಕು ಯೋಗಗಳು ಸ್ಪಷ್ಟಪಡಿಸಿವೆ. ಮಾತ್ರವಲ್ಲ, ಯಾವುದೇ ನ್‌ಕೌಂಟರ್' ನಡೆದಾಗ ಮೊದಲು ಅದು ಅಸಲಿ ನ್‌ಕೌಂಟರೋ ಅಥವಾ ನಕಲಿ ಎನ್‌ಕೌಂಟರೋ ಎಂದು ಚಾರಣೆ ನಡೆಸಬೇಕು. ಅಂತಹ ವಿಚಾರಣೆಯು ಅದು ಸಲಿ ಎನ್‌ಕೌಂಟರ್ ಎಂದು ಸ್ಪಷ್ಟಪಡಿಸಿದರೆ ಮಾತ್ರ ದರಲ್ಲಿ ಭಾಗವಹಿಸಿದ ಪೊಲೀಸರಿಗೆ ಬಡ್ತಿ, ಪದಕ, ಮಾದಿಗಳನ್ನು ಕೊಡಬೇಕು ಎಂದೂ ಮಾನವ ಹಕ್ಕು ಯೋಗ ಹೇಳಿದೆ.

ಆದರೆ ಇಂತಹ ಯಾವ ನಿಯಮಗಳನ್ನೂ ನಮ್ಮ ಶದ ಪೊಲೀಸರು ಪಾಲಿಸುವುದೇ ಇಲ್ಲ. ಬದಲಾಗಿ ಯುಧರನ್ನೂ ಕೊಂದುಹಾಕಿ ತಾವು ಉಗ್ರರನ್ನೋ, ಲೆಗಡುಕರನ್ನೋ ಕೊಂದು ಹಾಕಿದ್ದೇವೆ ಎಂದು ಪೋಜು ಡುತ್ತಾರೆ. ತಮ್ಮ ನಕಲಿ ಎನ್‌ಕೌಂಟರ್‌ಗಳನ್ನು ಲಿಯಾಗಿಸಲು ಸುಳ್ಳುಗಳನ್ನು ಹೇಳುತ್ತಾರೆ, ಕಳ್ಳ ಸಾಕ್ಷಿಗಳನ್ನು ಸುತ್ತಾರೆ. ಅದಕ್ಕೆಲ್ಲ ಬೆಂಬಲವಾಗಿ ನಿಲ್ಲುವ ಸರ್ಕಾರಗಳು





ಅವರ ಬೆನ್ನುತಟ್ಟಿ ಆ ಕೊಲೆಗಡುಕರನ್ನು ರಕ್ಷಿಸುತ್ತವೆ. ತಹದ್ದಕ್ಕೆಲ್ಲ ಇತ್ತೀಚಿಗಿನ ಉದಾಹರಣೆ ಮಧ್ಯಪ್ರದೇಶದಲ್ಲಿ ನ್ನೆ ನಡೆದಿರುವ ಎಂಟು ಶಂಕಿತ ಉಗ್ರರ ಎನ್‌ಕೌಂಟರ್ ಗಳು.

ಪೊಲೀಸರ ಪ್ರಕಾರ ಭೋಪಾಲ್ ಸೆಂಟ್ರಲ್ ಜೈಲಿನಲ್ಲಿದ್ದ ಎಂಟು ಸಿಮಿ ಉಗ್ರರು ಟೂತ್‌ಬ್ರಶ್ ಮತ್ತು ಮಚಗಳನ್ನು ಕೀಲಿಕೈಗಳಂತೆ ರೂಪಿಸಿ ಜೈಲು ಕಡಿಗಳಿಂದ ತಪ್ಪಿಸಿಕೊಂಡಿದ್ದರು. ಅವರನ್ನು ತಡೆಯಲು ತ್ನಿಸಿದ ಜೈಲಿನ ಪೊಲೀಸ್ ಪೇದೆಯೊಬ್ಬನನ್ನು ಕೊಂದು ಕಿದರು. ಆನಂತರ ಬೆಡ್‌ಶೀಟ್‌ಗಳನ್ನು ಹಗ್ಗಗಳಂತೆ ಪಯೋಗಿಸಿ ಜೈಲಿನ ಗೋಡೆಯನ್ನು ಏರಿ ಹೋಗಿದ್ದರು. ಮಾರನೆ ದಿನ ಅವರ ಸುಳಿವು ಮುಸ್ಥರಿಂದ ದೊರಕಿದ ನಂತರ ಪೊಲೀಸರು ಅಲ್ಲಿಗೆ ಸಿದರು. ಆಗ ಉಗ್ರರು ಪೊಲೀಸರ ಮೇಲೆ ಗುಂಡು ಸಿದ್ದರಿಂದ ವಿಧಿ ಇಲ್ಲದೆ ಪೊಲೀಸರು ಅವರ ಮೇಲೆ ಡು ಹಾರಿಸಿ ಎಲ್ಲರನ್ನು ಕೊಂದು ಹಾಕಿದರು.

ಇಲ್ಲಿ ಈ ಇಡೀ ಪ್ರಕರಣದ ಬಗ್ಗೆ ಹಲವಾರು ಪ್ರಶ್ನೆಗಳು ತ್ತವೆ.

ಮೊದಲನೆಯದಾಗಿ ಭೋಪಾಲ್ ಹತ್ತಿರ ಇರುವ ಆ ಲ್ ಜೈಲು 'ಐಎಸ್‌ಒ' ಸರ್ಟಿಫಿಕೇಟ್ ಪಡೆದಿರುವ ಗೃಹ. ಅಂದರೆ ಅಲ್ಲಿ ಹೆಚ್ಚಿನ ಕಾವಲು ಇರುತ್ತದೆ. ನೆಯದಾಗಿ ಈ ಶಂಕಿತ ಸಿಮಿ ಉಗ್ರರನ್ನು ಬೇರೆಬೇರೆ ಡಿಗಳಲ್ಲಿ ಇಡಲಾಗಿತ್ತು ಎಂದೇ ಜೈಲಿನ ಅಧಿಕಾರಿಗಳು ದ್ದಾರೆ. ಹಾಗಾಗಿ ಅವರೆಲ್ಲ ಹೇಗೆ ಒಂದೇ ದಿನ, ಒಂದೇ ಷ್ಣದಲ್ಲಿ ಓಡಿಹೋಗಲು ಸಂಚು ರೂಪಿಸಿದರು? ಅಷ್ಟು ಟೂತ್‌ಬ್ರಶ್‌ಗಳನ್ನು ಹೇಗೆ ಕೀಲಿ ಕೈಗಳಾಗಿ ರೂಪಿಸಿದರು ವಾ ಅಂಥವುಗಳನ್ನು ಪಡೆದರು? ಅದು ಕೇಂದ್ರ ಗೃಹವಾದ್ದರಿಂದ ಅಲ್ಲಿನ ಬಾಗಿಲುಗಳ ಲಾಕ್‌ಗಳನ್ನು ಇಂತಹ ಕೀಲಿ ಕೈಗಳಿಂದ ತೆರೆಯಲು ಸಾಧ್ಯವೆ?

ತಮ್ಮ ಸೆಲ್‌ಗಳಿಂದ ಹೊರಬಂದ ನಂತರ ಅವರು ಸವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ ಆ ಕೇಂದ್ರ ಗೃಹದಲ್ಲಿ ಮೂರು ಹಂತಗಳ ಭದ್ರತೆ ಇರುತ್ತದೆ. ಸೆಲ್ ಸಾಗಿ ಆ ಮೂರು ಹಂತಗಳ ಭದ್ರತೆಯನ್ನೂ ಮುರಿದು ಬರುವುದು ಇನ್ನೂ ಕಷ್ಟ. ಅದು ಅವರೆಲ್ಲರಿಂದ ಹೇಗೆ ಸಾಯಿತು?

ಅವರನ್ನು ತಡೆಯಲು ಪ್ರಯತ್ನಿಸಿದ ಪೇದೆಯೊಬ್ಬನನ್ನು ದರು ಎಂದು ಪೊಲೀಸರು ಹೇಳಿದ್ದಾರೆ. ಎಂಟೂ ಜನರನ್ನು ಬೇರೆ ಕೊಠಡಿಯಲ್ಲಿಟ್ಟಿದ್ದರಿಂದ ಅವರೆಲ್ಲರ ಡಿಗಳನ್ನು ಕಾಯಲು ಕೇವಲ ಒಬ್ಬ ಪೇದೆ ಮಾತ್ರ ? ಉಳಿದ ಸಿಬ್ಬಂದಿ ಏನು ಮಾಡುತ್ತಿದ್ದರು? ಅವರೆಲ್ಲ ಈ ಶಂಕಿತ ಉಗ್ರರನ್ನು ತಡೆಯಲು ಹೋಗಲಿಲ್ಲ? ಶಂಕಿತ ಉಗ್ರರು ಬೆಡ್‌ಶೀಟ್‌ಗಳನ್ನು ಹಗ್ಗಗಳಂತೆ ಉಪಯೋಗಿಸಿ ಗೋಡೆಯನ್ನು ಏರಿದರು ಎಂದು ಹೇಳಲಾಗುತ್ತಿದೆ. ಆದರೆ ಆ ಜೈಲಿನ ಗೋಡೆಯ ಎತ್ತರವೇ 20 ಅಡಿಗಿಂತಲೂ ಹೆಚ್ಚು. ಹಾಗಾಗಿ ಅವರೆಲ್ಲ ಸುಲಭವಾಗಿ ಗೋಡೆಯನ್ನೇರಿ ಹೋದರು ಎಂಬುದೂ ಅಸಾಧ್ಯವಾದದ್ದು.

ಇನ್ನು ಸೆಂಟ್ರಲ್ ಜೈಲುಗಳಲ್ಲಿ ವಿವಿಧ ಕಡೆ ಕಾವಲುಗಾರರು ಮತ್ತು ಸಿಸಿ ಕ್ಯಾಮೆರಾಗಳು ಇರುತ್ತವೆ. ಅದು ಹೇಗೆ ಈ ಎಂಟು ಮಂದಿ ಕಾವಲುಗಾರರ ಮತ್ತು ಕ್ಯಾಮೆರಾಗಳ ಕಣ್ಣುಗಳಿಗೆ ಬೀಳದೆ ತಪ್ಪಿಸಿಕೊಂಡರು? ಅವರೆಲ್ಲ ತಪ್ಪಿಸಿಕೊಳ್ಳಲಿ ಎಂದೇ ಕ್ಯಾಮೆರಾಗಳನ್ನು ನಿಷ್ಕ್ರಿಯಗೊಳಿಸಲಾಗಿತ್ತೆ? ಬೇಕಂತಲೇ ಕಾವಲು ಪಡೆ ಕಣ್ಣುಮುಚ್ಚಿ ಕೂತಿದ್ದರೆ?

ಈ ಎನ್‌ಕೌಂಟರ್ ನಡೆದ ನಂತರ ಯಾರೋ ಒಬ್ಬರು ತಮ್ಮ ಫೋನ್ ಕ್ಯಾಮೆರಾದಲ್ಲಿ ಸೆರೆಹಿಡಿದಿರುವ ವೀಡಿಯೋ ನೋಡುಗರ ರಕ್ತಹೆಪ್ಪುಗಟ್ಟುವಂತೆ ಇದೆ. ಈಗಾಗಲೇ ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆ ಕ್ಲಿಪ್ಪಿಂಗ್‌ನಲ್ಲಿ ಎಂಟು ಜನರು ಒಂದು ಕಲ್ಲು ಬಂಡೆಯ ಮೇಲೆ ಬಿದ್ದಿದ್ದಾರೆ. ಅವರಲ್ಲಿ ಯಾರೋ ಒಬ್ಬ ಇನ್ನೂ ಜೀವಂತ ಇದ್ದಾನೆ ಎಂದು ಪೊಲೀಸರಿಗೆ ಅನ್ನಿಸುತ್ತದೆ. ಆಗ ಒಬ್ಬ "ನೋಡು, ಅವನು ಉಸಿರಾಡುತ್ತಿದ್ದಾನೆ. ಗುಂಡು ಹಾರಿಸು, ಸಾಯುತ್ತಾನೆ" ಎಂದು ಹೇಳುವುದು ಕೇಳಿಸುತ್ತದೆ. ಆಗ ಪೊಲೀಸ್ ಒಬ್ಬ ನೆಲಕ್ಕೆ ಬಿದ್ದಿರುವವನ ಮೇಲೆ ಗುಂಡು ಹಾರಿಸುತ್ತಾನೆ.

ಇನ್ನೂ ವಿಚಿತ್ರವೆಂದರೆ ಅವರ ಶವಗಳ ಹತ್ತಿರ ಯಾವ ಮಾರಕಾಸ್ತ್ರಗಳೂ ಕಾಣಿಸುವುದಿಲ್ಲ, ಬದಲಾಗಿ ಒಬ್ಬನ ಶರ್ಟ್ ಅಡಿಯಿಂದ ಒಬ್ಬ ಪೊಲೀಸ್ ಪ್ಲಾಸ್ಟಿಕ್ ಕವರ್‌ನಲ್ಲಿ ಸುತ್ತಿಟ್ಟಿರುವ ಒಂದು ದೊಡ್ಡ ಚಾಕುವನ್ನು ಹೊರತೆಗೆಯುವುದೂ ಕಾಣಿಸುತ್ತದೆ. ಅಲ್ಲಿ ಎಂಟು ಜನರು ಸತ್ತು ಬಿದ್ದಿದ್ದರೂ ಈ ಒಬ್ಬನ ಶರ್ಟ್ ಅಡಿ ಅಂತಹ ಚಾಕು ಇದೆ ಎಂಬುದು ಆ ಪೇದೆಗೆ ಅಷ್ಟು ಸ್ಪಷ್ಟವಾಗಿ ಹೇಗೆ ಗೊತ್ತಾಯಿತು?

ಕುತೂಹಲಕಾರಿಯಾದ ಇನ್ನೊಂದು ಅಂಶ ಯಾವುದೆಂದರೆ ಸತ್ತು ಬಿದ್ದಿರುವ ಎಲ್ಲರೂ ಹೊಸ ಪ್ಯಾಂಟು, ಶರ್ಟು ಮತ್ತು ಶೂಗಳನ್ನು ತೊಟ್ಟಿರುವುದು. ರಾತ್ರಿ ಸುಮಾರು ಹನ್ನೊಂದು ಗಂಟೆಗೆ ಜೈಲಿನಿಂದ ಎಸ್ಕೇಪ್ ಆದ ಅವರೆಲ್ಲ ಮಧ್ಯರಾತ್ರಿ ಅದ್ಯಾವ ಮಾಲ್‌ನಲ್ಲಿ ಈ ಹೊಸ ಬಟ್ಟೆಗಳನ್ನು ಖರೀದಿಸಿದರು? ಅದಕ್ಕೆ ಅವರಿಗೆ ಹಣ ಎಲ್ಲಿಂದ ಬಂತು?

ಇನ್ನು ಪೊಲೀಸರು ಅವರ ಹತ್ತಿರ ಆಯುಧಗಳಿದ್ದರಿಂದ ತಮ್ಮ ಪ್ರಾಣರಕ್ಷಣೆಗೆ ಅವರನ್ನೆಲ್ಲ ಕೊಂದು ಹಾಕಲಾಯಿತು ಎಂದಿದ್ದಾರೆ. ಈಗ ಲಭ್ಯವಿರುವ ವೀಡಿಯೋದಲ್ಲಿ ಯಾವ ಆಯುಧಗಳು ಕಂಡುಬಂದಿಲ್ಲದಿದ್ದರೂ ಪೊಲೀಸರು ಸತ್ಯವನ್ನೇ ಹೇಳುತ್ತಿದ್ದಾರೆ ಎಂದೇ ನಂಬೋಣ. ಹಾಗಾದರೆ ಜೈಲಿನಿಂದ ತಪ್ಪಿಸಿಕೊಂಡ ಅವರಿಗೆ ಆ ಆಯುಧಗಳನ್ನು ಕೊಟ್ಟವರು ಯಾರು? ಅವರಿಗೆ ಅವು ಎಲ್ಲಿ ಸಿಕ್ಕವು ಎಂಬ ಪ್ರಶ್ನೆ ಏಳುತ್ತದೆ.

ಆದರೆ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಈ ಯಾವ ಪ್ರಶ್ನೆಗಳಿಗೂ ಉತ್ತರ ಕೊಡುವ ಗೋಜಿಗೆ ಹೋಗಿಲ್ಲ. ಬದಲಾಗಿ ಇಂತಹ ಉಗ್ರರನ್ನು ಕೊಂದದ್ದಕ್ಕೆ ಜನ ಪೊಲೀಸರಿಗೆ ಶಹಭಾಷ್ ಹೇಳಬೇಕು ಎಂದಿದ್ದಾರೆ. ಇನ್ನು ಅವರ ಬೆಂಬಲಿಗರು ಮತ್ತು ಮೋದಿ ಭಕ್ತರು "ಅವರೆಲ್ಲ ಸಿಮಿ ಉಗ್ರರು. ಅವರನ್ನು ಪೊಲೀಸರು ಕೊಂದದ್ದು ಸರಿಯಾದ ಕ್ರಮ. ಇದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿರುವವರು ಮತ್ತು ಗುಮಾನಿಗಳನ್ನು ವ್ಯಕ್ತಪಡಿಸುತ್ತಿರುವವರು ದೇಶದ್ರೋಹಿಂಗಳು" ಎಂದು ಬೊಬ್ಬೆ ಹಾಕುತ್ತಿದ್ದಾರೆ.

ಇಲ್ಲೂ ಈ ಚಡ್ಡಿಗಳ ಷಡ್ಯಂತ್ರ ಎಂತಹದ್ದು ನೋಡಿ. ಕೊಲೆಗೀಡಾದ ಎಂಟೂ ಜನರು 'ಶಂಕಿತ' ಸಿಮಿ ಸದಸ್ಯರು ಅಷ್ಟೆ. ಅವರ ವಿರುದ್ಧದ ಕೇಸುಗಳು ಇನ್ನೂ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿದೆ. ಹಾಗಾಗಿ ಅವರೆಲ್ಲ ವಿಚಾರಣಾಧೀನ ಕೈದಿಗಳಾಗಿದ್ದರೆ ಹೊರತು ಅವರು 'ಉಗ್ರರು' ಎಂದು ಯಾವ ನ್ಯಾಯಾಲಯವೂ ತೀರ್ಪು ಕೊಟ್ಟಿಲ್ಲ.

ಹಾಗೊಮ್ಮೆ ಅವರು 'ಉಗ್ರರು' ಮತ್ತು ಕೊಲೆ ಇತ್ಯಾದಿ ಪಾತಕಗಳಲ್ಲಿ ಭಾಗವಹಿಸಿದ್ದರಿಂದ ಅವರಿಗೆ ಮರಣದಂಡನೆಯೇ ಶಿಕ್ಷೆ ಎಂದು ನ್ಯಾಯಾಲಯ ಹೇಳಿದ್ದರೆ ಅವರನ್ನು ಗಲ್ಲಿಗೇರಿಸುವ ಕೆಲಸ ಮಾಡಬೇಕಾದದ್ದು ಜೈಲು ಅಧಿಕಾರಿಗಳೇ ಹೊರತು ಅದು ಪೊಲೀಸರ ಕೆಲಸವೂ ಅಲ್ಲ, ಜವಾಬ್ದಾರಿಯೂ ಅಲ್ಲ. ಆದ್ದರಿಂದ ಅವರನ್ನೆಲ್ಲ ಕೊಲ್ಲುವ ಹಕ್ಕು ಪೊಲೀಸರಿಗಿಲ್ಲ.

ನನ್ನ ಪ್ರಕಾರ ಇದೊಂದು ಕೋಲ್ಡ್ ಬ್ಲಡೆಡ್ ಮರ್ಡರ್.

ಸಧ್ಯದಲ್ಲೇ ಉತ್ತರ ಪ್ರದೇಶದಲ್ಲಿ ಚುನಾವಣೆಗಳು ಎದುರಾಗಲಿವೆ. ಅಲ್ಲಿ ಹೇಗಿದ್ದರೂ ಮುಸಲ್ಮಾನರ ಓಟುಗಳು ಬಿಜೆಪಿಗೆ ಬೀಳುವುದಿಲ್ಲ, ಆದರೆ ಮುಸಲ್ಮಾನರೆಲ್ಲ ಸಿಮಿ ಎಂಬ ನಿಷೇಧಿತ ಸಂಘಟನೆಗೆ ಸೇರಿದ ಉಗ್ರರು ಎಂದೂ, ಅವರನ್ನೆಲ್ಲ ಕೊಲ್ಲುವುದೇ ಸೂಕ್ತವಾದ ಕ್ರಮ ಎಂದೂ ತೋರಿಸಿದರೆ ಹಿಂದೂಗಳ ಓಟುಗಳು ಬಿಜೆಪಿಗೆ ಬೀಳುತ್ತವೆ. ನೆನಪಿಡಿ, ಬಿಜೆಪಿ ಇಂತಹ ಕೃತ್ಯಗಳನ್ನು ಎಸಗುವುದರಲ್ಲಿ ಎತ್ತಿದ ಕೈ. ಹೇಗಿದ್ದರೂ ಮಧ್ಯಪ್ರದೇಶದಲ್ಲಿ ಈಗ ಬಿಜೆಪಿ ಅಧಿಕಾರದಲ್ಲಿರುವುದರಿಂದ ಈ ಕೃತ್ಯವನ್ನು ಎಸಗಲಾಗಿದೆ. ಸತ್ತಿರುವ ಎಂಟು ಮಂದಿ ಮುಸಲ್ಮಾನರಾಗಿದ್ದು ಶಂಕಿತ ಸಿಮಿ ಉಗ್ರರು ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದ್ದು ಇವರ ಕೆಲಸವನ್ನು ಸುಲಭವಾಗಿಸಿದೆ.

ನನ್ನ ಪ್ರಕಾರ ಜೈಲಿನಲ್ಲಿರುವ ಅಧಿಕಾರಿಗಳೇ ಈ ಎಂಟು ಜನರಿಗೆ ಎಂತೆಂತಹದ್ದೋ ಸಬೂಬು ಹೇಳಿ ಜೈಲಿನಿಂದ ಹೊರನಡೆಯಲು ಸಹಕರಿಸಿದ್ದಾರೆ. ಆದರೆ ಅವರೆಲ್ಲ ಸ್ವಯಂಪ್ರೇರಣೆಯಿಂದ ಇದನ್ನು ಮಾಡಿದ್ದಾರೆ ಎಂದು ತೋರಿಸಲು ಒಬ್ಬ ಪೇದೆಯನ್ನು ಬಲಿಕೊಟ್ಟಿದ್ದಾರೆ. ರಾತ್ರಿ ಅವರನ್ನೆಲ್ಲ ಎಲ್ಲೋ ಅಡಗಿಸಿಟ್ಟು ಮಾರನೆ ಮುಂಜಾನೆ ಕೊಂದು ಹಾಕಿದ್ದಾರೆ. ಇವತ್ತು ಹೊರಬಂದಿರುವ ಎರಡನೆ ವಿಡಿಯೋದಲ್ಲಿ ಆ ಎಂಟು ಜನರಲ್ಲಿ ಐವರು ಒಂದು ಬಂಡೆಯ ಮೇಲೆ ನಿಂತಿದ್ದು ತಾವು ಶರಣಾಗಲು ಸಿದ್ಧ ಎಂಬಂತೆ ಕೈ ಎತ್ತಿರುವುದು ಕಾಣಿಸುತ್ತದೆ. ಮತ್ತು ಅವರ ಹತ್ತಿರ ಯಾವ ಅಸ್ತ್ರಗಳೂ ಇರಲಿಲ್ಲ ಎಂಬುದೂ ಸ್ಪಷ್ಟವಾಗಿ ಕಾಣಿಸುತ್ತದೆ. ಆದರೂ ಅವರನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಕೊಂದುಹಾಕಲಾಗಿದೆ.

ಇದು ನಕಲಿ ಎನ್‌ಕೌಂಟರ್ ಎಂದು ಸತ್ತವರ ವಕೀಲ ತಹಾವ್ವುರ್ ಖಾನ್ ಅವರು ಆರೋಪಿಸಿದ್ದಾರೆ. "ನನ್ನ ಕಕ್ಷಿದಾರರು ನಿರಪರಾಧಿಗಳಾಗಿದ್ದರು. ಅವರ ವಿರುದ್ಧದ ಆರೋಪಗಳು ಕುರಿತಂತೆ ಇನ್ನು ಹದಿನೆಂಟು-ಇಪ್ಪತ್ತು ಜನ ಸಾಕ್ಷಿಗಳ ವಿಚಾರಣೆ ಮಾತ್ರ ಉಳಿದಿತ್ತು. ಅವರು ಸಧ್ಯದಲ್ಲೇ ಬಿಡುಗಡೆಗೊಳ್ಳಲಿದ್ದರು. ಹೀಗಿರುವಾಗ ಅವರು ಯಾಕೆ ಜೈಲಿನಿಂದ ತಪ್ಪಿಸಿಕೊಳ್ಳಲು ಹೋಗುತ್ತಿದ್ದರು? ಅಷ್ಟೇ ಮುಖ್ಯವಾಗಿ ಕಾನೂನಿನ ಪ್ರಕಾರ ಪೊಲೀಸರ ಪ್ರಾಣಕ್ಕೆ ಅಪಾಯ ಇದ್ದಿದ್ದರೆ ಅವರು ಆರೋಪಿಗಳ ಸೊಂಟದಿಂದ ಕೆಳಕ್ಕೆ ಮಾತ್ರ ಗುಂಡು ಹಾರಿಸಬೇಕೆಂಬ ನಿಯಮವಿದೆ. ಆದರೆ ಇಲ್ಲಿ ಎಲ್ಲರಿಗೂ ಸೊಂಟದ ಮೇಲೆ ಗುಂಡು ಹಾರಿಸುವ ಮೂಲಕ ಕೊಂದು ಹಾಕಲಾಗಿದೆ" ಎಂದು ಖಾನ್ ಹೇಳಿದ್ದಾರೆ.

ಸರಿಯಾದ ತನಿಖೆ ಆದರೆ ಮಾತ್ರ ಈ ಎನ್‌ಕೌಂಟರ್ ಹಿಂದಿನ ಸತ್ಯಗಳು ಹೊರಬರುತ್ತವೆ. ಆದರೆ ಈ ದೇಶ ಕಂಡ ಅತಿದೊಡ್ಡ 'ವ್ಯಾಪಂ' ಹಗರಣದ ರೂವಾರಿಯಾಗಿರುವ, ಆ ಹಗರಣಕ್ಕೆ ಸಂಬಂಧಪಟ್ಟಂತೆ ಹತ್ತಾರು ಸಾಕ್ಷಿದಾರರ ಕೊಲೆಗಳಾಗಿದ್ದರೂ ಏನೊಂದನ್ನೂ ಮಾಡದೆ ಈಗಲೂ ಅಧಿಕಾರ ಚಲಾಯಿಸುತ್ತಿರುವ ಚೌಹಾಣ್ ಮುಖ್ಯಮಂತ್ರಿಯಾಗಿರುವಾಗ ಈ ಬಡ ಮುಸಲ್ಮಾನರ ಕೊಲೆಗಡುಕರಿಗೆ ಶಿಕ್ಷೆಯಾಗುತ್ತದೆ ಎಂದೋ, ಇದರ ಹಿಂದಿರುವ ಅಸಲಿಯತ್ತು ಪತ್ತೆಯಾಗುತ್ತದೆ ಎಂದೋ ನಿರೀಕ್ಷಿಸುವುದು ಪೆದ್ದುತನದ ಪರಮಾವಧಿಯಾಗುತ್ತದೆಯಷ್ಟೇ.

* * *

ನವೆಂಬರ್ 10ರಂದು ರಾಜ್ಯದಲ್ಲಿ ಹತ್ತಾರು ಹೆಣಗಳನ್ನು ಉರುಳಿಸುವವರೆಗೂ ಚಡ್ಡಿಗಳಿಗೆ ಸಮಾಧಾನವಾಗುವುದಿಲ್ಲ ಎನಿಸುತ್ತಿದೆ. ಹೋದವರ್ಷ ಕೊಡಗಿನ ಕೊಡವರನ್ನು ಮತ್ತು ಮಂಗಳೂರಿನ ಕ್ರಿಶ್ಚಿಯನ್ನರನ್ನು ಟಿಪ್ಪು ವಿರುದ್ಧ ಎತ್ತಿಕಟ್ಟಿದ್ದ ಚಡ್ಡಿಗಳು ಈ ವರ್ಷ ನಾಯಕ ಮತ್ತು ಚಲವಾದಿ ಸಮುದಾಯಗಳನ್ನು ಟಿಪ್ಪು ವಿರುದ್ಧ ಎತ್ತಿ ಕಟ್ಟುವ ಮೂಲಕ ಆ ಸಮುದಾಯಗಳಲ್ಲೂ ಮುಸ್ಲಿಮ್ ವಿರೋಧಿ ಭಾವನೆಯನ್ನು ಸೃಷ್ಟಿಸಲು ಯತ್ನಿಸುತ್ತಿದ್ದಾರೆ.


ಇವತ್ತು ತಲೆಯಲ್ಲಿ ಮಿದುಳು ಎಂಬುದೇ ಇಲ್ಲದ ತಾರಾ ಎಂಬ ನಟಿ ಸೇರಿದಂತೆ ಹತ್ತಾರು ಮಹಿಳೆಯರನ್ನು ಒನಕೆ ಓಬವ್ವನ ಆತ್ಮಕ್ಕೆ ಶಾಂತಿ ಕೊಡಿಸುವ ನೆಪದಲ್ಲಿ ಮುಸಲ್ಮಾನರ ವಿರುದ್ಧ ಛೂ ಬಿಟ್ಟಿದ್ದಾರೆ. ಬರುವ ದಿನಗಳಲ್ಲಿ ಮದಕರಿ ನಾಯಕನ ಹೆಸರಲ್ಲಿ ನಾಯಕರನ್ನೂ ಛೂ ಬಿಡಲಿದ್ದಾರೆ. ಇದೆಲ್ಲದರ ಪರಿಣಾಮ ಮಾತ್ರ ಆ ಎರಡೂ ಸಮುದಾಯಗಳ ಕೆಲವು ಕುಟುಂಬಗಳು ಕಣ್ಣೀರಿನಲ್ಲಿ ಕೈತೊಳೆಯುವ ಸಾಧ್ಯತೆಯೇ ಹೆಚ್ಚು. ಯಾಕೆಂದರೆ ಹೋದವರ್ಷವೂ ಸತ್ತದ್ದು ಕೊಡವ ಸಮುದಾಯದ ಕುಟ್ಟಪ್ಪ ಎಂಬುವವನೇ ಹೊರತು ಯಾವ ಮೇಲುಜಾತಿಯ ನಾಯಕನಲ್ಲ.

ಅಸಲಿಗೆ ಚಿತ್ರದುರ್ಗದ ಇತಿಹಾಸಕ್ಕೂ ಟಿಪ್ಪೂಗೂ ಯಾವ ಸಂಬಂಧವೂ ಇಲ್ಲ. ಚಿತ್ರದುರ್ಗದ ಮದಕರಿ ನಾಯಕನ ವಿರುದ್ಧ ಯುದ್ಧ ಸಾರಿದ್ದು ಹೈದರ್ ಅಲಿ. ಅದೂ ಮೈಸೂರಿನ ಒಡೆಯರ್ ರಾಜರ ಪರವಾಗಿ. ಹೀಗಿರುವಾಗ ಟಿಪ್ಪು ಜಯಂತಿಯನ್ನು ಚಿತ್ರದುರ್ಗದ ನಾಯಕರಾಗಲಿ, ಚಲವಾದಿಗಳಾಗಲಿ ವಿರೋಧಿಸುವುದರಲ್ಲಿ ಯಾವ ಅರ್ಥವೂ ಇಲ್ಲ.

ಚಡ್ಡಿಗಳು ಹಿಂದಿನ ಕಾಲದಲ್ಲಿ ನಡೆದದ್ದು ಏನು ಎಂಬುದನ್ನು ಬೇಕಂತಲೇ ಮರೆಮಾಚಿ ತಾವು ತಿರುಚಿರುವ ನಕಲಿ ಇತಿಹಾಸವೇ ಸತ್ಯವಾಗಿ ನಡೆದದ್ದು ಎಂದು ಬಿಂಬಿಸುವುದರಲ್ಲಿ ಎತ್ತಿದ ಕೈಗಳು. ಸಿ.ಟಿ.ರವಿ ಎಂಬ ಚಡ್ಡಿ ಚತುರನಿಗೆ ಹೈದರ್ ಅಲಿ ಇಲ್ಲಿ ನೆಲೆಸಿದ್ದ ಮೂರನೆ ತಲೆಮಾರಿನವನು ಎಂಬುದೂ ಗೊತ್ತಿಲ್ಲ. ಆತ ಹುಟ್ಟಿದ್ದು ಈಗ ಕೋಲಾರ ಜಿಲ್ಲೆಯಲ್ಲಿರುವ ಬೂದಿಕೋಟೆ ಎಂಬ ಗ್ರಾಮದಲ್ಲಿ ಎಂದೂ ಅರಿವಿಲ್ಲ. ಆದ್ದರಿಂದಲೇ ಆತ "ಹೈದರ್ ಪರ್ಷಿಯಾ ದೇಶದವನು" ಎಂದು ವಾದಿಸುತ್ತಾನೆ. ಶೋಭಾ ಕರಂದ್ಲಾಜೆ ಎಂಬ ಅಜ್ಞಾನಿ "ಟಿಪ್ಪು ಹುಟ್ಟಿ ಶತಮಾನಗಳೇ ಆದವು, ಆತ ಸತ್ತು ದಶಕಗಳೇ ಆಗಿದೆ" ಎಂದೆಲ್ಲ ತಲೆಬುಡವಿಲ್ಲದೆ ಬಡಬಡಿಸುತ್ತಾಳೆ. ಪ್ರತಾಪ ಸಿಂಹ ಎಂಬ ಸಂಸದ "ಮದಕರಿ ನಾಯಕನನ್ನು ಹೈದರ್ ವಂಚಿಸಿ ಸೋಲಿಸಿದ. ಮದಕರಿ ನಾಯಕ ಯುದ್ಧಭೂಮಿಯಲ್ಲಿ ಮರಣಹೊಂದಿದ" ಎಂದೆಲ್ಲ ಕಟ್ಟುಕತೆಗಳನ್ನು ಕೆರೆಯುತ್ತಾನೆ. ವಾಸ್ತವವಾಗಿ ಹೈದರ್ ಯುದ್ಧದಲ್ಲಿ ಗೆದ್ದ ನಂತರ ಮದಕರಿ ನಾಯಕ ಮತ್ತಾತನ ಕುಟುಂಬವನ್ನು ಸೆರೆಹಿಡಿದು ಶ್ರೀರಂಗಪಟ್ಟಣದ ಜೈಲಿನಲ್ಲಿ ಇಟ್ಟಿದ್ದ. ಅವರೆಲ್ಲರೂ ಆ ಜೈಲಿನಲ್ಲೇ ಸತ್ತರು. ಆದರೆ ಅದನ್ನು ಸಿಂಹ ಮರೆಮಾಚಿ ಹೈದರನಿಂದಾಗಿ ಮದಕರಿ ನಾಯಕ ಸತ್ತ ಎಂದು ಹೇಳಿ ನಾಯಕ ಸಮುದಾಯದಲ್ಲಿ ರೊಚ್ಚನ್ನು ಹೆಚ್ಚಿಸಲು ಯತ್ನಿಸುತ್ತಿದ್ದಾನೆ.

ಇತಿಹಾಸದಲ್ಲಿ ಆದದ್ದು ಆಯಿತು. ಈಗ ಮುಸಲ್ಮಾನರ ವಿರುದ್ಧ ಕೆಂಡ ಕಾರಿದರೆ ಮದಕರಿ ನಾಯಕನೇನೂ ಯುದ್ಧದಲ್ಲಿ ಗೆದ್ದು ಇತಿಹಾಸವನ್ನು ತಿದ್ದಲಾಗುವುದಿಲ್ಲ. ಚಲವಾದಿಗಳು ಬೀದಿಗಿಳಿದರೆ ಒನಕೆ ಓಬವ್ವ ಮತ್ತೆ ಜೀವ ಪಡೆದು ನಿಲ್ಲುವುದಿಲ್ಲ. ಬದಲಾಗಿ ಚಡ್ಡಿಗಳ ಇಂತಹ ಕುತಂತ್ರಗಳನ್ನು ಜನರು ಅರಿತರೆ ತಮ್ಮವರನ್ನು ಕಳೆದುಕೊಳ್ಳುವ ಅಥವಾ ಕಂಬಿ ಎಣಿಸುವ ಅಪಾಯದಿಂದಾದರೂ ಪಾರಾಗುತ್ತಾರೆ. ಈಗಾಗಲೇ ಕರಾವಳಿ ಪ್ರದೇಶಗಳಲ್ಲಿ ಚಡ್ಡಿಗಳ ಮಸಲತ್ತನ್ನು ಅರಿಯದೆ ಕೊಲೆಗೀಡಾದವರು ಅಥವಾ ಜೈಲು ಪಾಲಾದವರು ತಮ್ಮಂತೆಯೇ ಹಿಂದುಳಿದ ವರ್ಗದ ಜನರು ಎಂಬುದನ್ನು ನೋಡಿಯಾದರೂ ಚಿತ್ರದುರ್ಗ ಮತ್ತು ಇತರೆ ಜಿಲ್ಲೆಯ ಜನರು ಅರಿತುಕೊಳ್ಳಬೇಕಿದೆ.

ಈ ಸರಳ ಸತ್ಯ ಅವರಿಗೆ ಆದಷ್ಟು ಬೇಗನೆ ಅರ್ಥವಾದರೆ ಅವರಿಗೂ ಒಳ್ಳೆಯದು. ಈ ರಾಜ್ಯಕ್ಕೂ ಹಿತಕರ. ■





ಕೊಲ್ಲೂರು ದೇವಳ

ಕಳ್ಳ ಕಂಟ್ರಾಕ್ಟರ್‌ಗಳ ಟ್ರಸ್ಟಿ ಮಾಡಲು

ಶಾಸಕ ಪೂಜಾರಿ ಸಂಚು!

ಕೊಲ್ಲೂರಿನ ಕೋಟ್ಯಾಂತರ ರೂಪಾಯಿ ಚರ-ಸ್ಥಿರ ಆಸ್ತಿಯ ಮೂಕಾಂಬಿಕಾ ದೇವಸ್ಥಾನಕ್ಕೆ ಹೊಸ ಪಾರುಪತ್ಯಗಾರರ ನೇಮಿಸುವ ನಾಟಕ ತೆರೆಮರೆಯಲ್ಲಿ ಬಿರುಸಾಗಿ ನಡೆದಿದೆ. ಎರಡೆರಡು ಅವಧಿಗೆ ದೇವಸ್ಥಾನದಲ್ಲಿ ಚಕ್ಕಳಬಕ್ಕಳ ಹಾಕಿಕೊಂಡು ಕುಳಿತಿದ್ದ ಚಿಡ್ಡಿ ಬಕಾಸುರ ಕೃಷ್ಣ ಪ್ರಸಾದ್ ಆಡ್ಯಂತಾಯ ಹೊಟ್ಟೆ ಬಿರಿವಷ್ಟು ಉಂಡು, ತನ್ನ ಗುರು ಕಲ್ಲಡ್ಕ ಭಟ್ಟನನ್ನೂ ಉದ್ಧಾರ ಮಾಡಿ ಹೊರಡಲನುವಾಗಿ ನಿಂತಿದ್ದಾನೆ. ಮುಜರಾಯಿ ಇಲಾಖೆ ಧರ್ಮದರ್ಶಿ ಮಂಡಳಿ ರಚನೆಗೆ ಮುಂದಾಗುವುದನ್ನೇ ಕಾಯುತ್ತಿದ್ದ ಬೈಂದೂರಿನ ಗಂಡಾಗುಂಡಿ ಎಮ್ಮೆಲ್ಲೇ ಗೋಪಾಲ ಪೂಜಾರಿ ಹಲ್ಲು ಮಸೆಯುತ್ತ ಸ್ವಾಹಾಕ್ಕೆ ಅಣಿಯಾಗಿದ್ದಾನೆ!

ಬೆಳ್ಳಿ-ಬಂಗಾರ-ದುಡ್ಡು ಕೋಟಿ-ಕೋಟಿಗಳ ಲೆಕ್ಕದಲ್ಲೇ ವರ್ಷಂಪ್ರತಿ ಹರಿದು ಬರುವ ಕೊಲ್ಲೂರು ದೇವಳವೆಂದರೆ, ಅದೊಂದು ದೊಡ್ಡ ಅವ್ಯವಹಾರ-ಅವಾಂತರ-ಅನಾಚಾರಗಳ ಅಡ್ಡೆ ಎಂಬುದು ಜಗಜ್ಜಾಹೀರಾಗಿರುವ ವಾಸ್ತವ! ಪಕ್ಕದ ಕೇರಳ-ತಮಿಳುನಾಡಲ್ಲೂ ಅಪಾರ ಭಕ್ತಾದಿಗಳನ್ನು ಹೊಂದಿರುವ ಮೂಕಾಂಬಿಕೆಯ ದೇಖರೇಖೆ ನೋಡಲೆಂದು ಲಾಗಾಯ್ತಿನಿಂದ ನೇಮಕವಾಗುತ್ತಾ ಬಂದವರು ಮಾಡಿದ ಭಾನ್ಗಡಿ-ಭ್ರಷ್ಟಾಚಾರ ಹೇಳತೀರದು. ಪರಿಶುದ್ಧ ದೈವ ಭಕ್ತನೆಂದು ಸೋಗು ಹಾಕುವ ಅಪ್ಪಣ್ಣ ಹೆಗ್ಡೆ, ಸುಕುಮಾರ ಶೆಟ್ಟಿ, ಆಡ್ಯಂತಾಯರಾದಿಯಾಗಿ ಎಲ್ಲ ಕಾಲದಲ್ಲೂ ಮೂಕಾಂಬಿಕೆಯ ಸನ್ನಿಧಿಯಲ್ಲಿ ಒಂದಲ್ಲ ಒಂದು ಕರ್ಮಕಾಂಡ-ಹಗರಣ ನಡೆದು ಹೋಗಿದೆ! ಪ್ರತಿ ಪತ್ತೆ ಹಚ್ಚಲಾಗಿಲ್ಲ ಎಂಬುದು ಆಡ್ಯಂತಾಯನ ಸಂಘಿ ಕಳ್ಳಾಟದ ಕೈಚಳಕಕ್ಕೆ ಸಣ್ಣದೊಂದು ಸ್ಯಾಂಪಲ್‌ನಂತಿದೆಯೆಷ್ಟೇ! ಎನಗಿಂತ ಮೂಕಾಂಬಿಕೆಯ ಭಕ್ತಾಗ್ರೇಸ ಮತ್ತೊಬ್ಬನಿಲ್ಲ ಎಂಬಂತೆ ಪೋಸು ಕೊಡುವ ಧೀಮಾಕಿನ ಸುಕುಮಾರ ಶೆಟ್ಟಿ ಪರ್ವದಲ್ಲಿ ನಡೆದ ಬಂಗಾರದ ರಥದ ನಿರ್ಮಾಣ ಟ್ರಸ್ಟಿಗಳ ಭಾಗ್ಯದ ಬಾಗಿಲನ್ನೇ ತೆರೆಯಿತೆಂಬ ಕತೆ ಇವತ್ತಿಗೂ ಕೊಲ್ಲೂರು ದೇವಳದ ಭಕ್ತ ಸಮೂಹದಲ್ಲಿ ಮತ್ತು ಕುಂದಾಪುರ-ಬೈಂದೂರಲ್ಲಿ ಚಾಲ್ತಿಯಲ್ಲಿವೆ. ಆನಂತರ ಸುಕುಮಾರ ಶೆಟ್ಟಿ ಕಾಂಗ್ರೆಸ್‌ಗೆ ಕೈಕೊಟ್ಟು ಬೈಂದೂರು ಬಿಜೆಪಿಯ ಅಸೆಂಬ್ಲಿ ಕ್ಯಾಂಡಿಡೇಟೂ ಆಗಿ ಅವತರಿಸಿದ್ದು ಮೂಕಾಂಬಿಕೆ ಮಹಿಮೆಯೇ ಸರಿ.

ಕೊಲ್ಲೂರು ಹೆಸರಿಗಷ್ಟೇ ಧರ್ಮಕ್ಷೇತ್ರ; ಇಲ್ಲಾಗುವುದೆಲ್ಲವೂ ಕರ್ಮ ಕರಾಮತ್ತೇ! ಕೊಲ್ಲೂರಮ್ಮನ ಸನ್ನಿಧಿ ಶುದ್ಧವಾಗಿಡಬೇಕು, ಭಕ್ತರ ನಂಬಿಕೆಗೆ ಭಂಗ ಬರದಂತೆ ಆಡಳಿತ ನಡೆಸಬೇಕು, ಅನಾಚಾರ-ಅಕ್ರಮ-ಅವ್ಯವಹಾರಕ್ಕೆ ಕಡಿವಾಣ ಹಾಕಬೇಕೆಂಬ ತ್ರಿಕರಣ ಶುದ್ಧಿಯ ಧರ್ಮದರ್ಶಿ ಇತ್ತೀಚಿನ ವರ್ಷಗಳಲ್ಲಿ ನೇಮಕವಾಗಿದ್ದೇ ಇಲ್ಲ, ಹುಂಡಿ ಮೇಲೆ, ಹರಕೆ ಆಭರಣದ ಮೇಲೆ, ಕಾಮಗಾರಿ ಕಮಿಷನ್ ಮೇಲೆ ಕಣ್ಣಿಡುವವರೇ ಜಾಸ್ತಿ. ಇಂಥ ದುರ್ಬುದ್ಧಿ ಧರ್ಮದರ್ಶಿಗಳ ಆಡಳಿತದಲ್ಲಿ ದೇವಳ ಕಂಬ-ಕಂಬವೂ ಕಾಸಿಗಾಗಿ ಹಪಗುಡುಬಾಳಿಯ ಕಲಿತು ಕೊಂಡಿದೆ; ಭಕ್ತರ ಶೋಷಿಸಿ ಹಣ ಹೊಡೆಯುವ ಕರಾಮತ್ತು ವ್ಯವಸ್ಥಿತವಾಗಿ ನಡೆಯುತ್ತಿದೆ. ಚಿನ್ನದ ರಥ ರಗಳೆ, ಹರಕೆ ಬಂಗಾರ ಕದ್ದ ರಾದ್ಧಾಂತ, ಕೋಟಾ ಕಾಮಗಾರಿಗಳಿಂದ ಕೊಲ್ಲೂರು ದೇವಳ ಕುಖ್ಯಾತ ಆಗಿರುವಾಗಲೇ ಧರ್ಮದರ್ಶಿ ನೇಮಿಸಲು ಆರಂಭವಾಗಿರುವ ಪ್ರಕ್ರಿಯೆ ಕರಾವಳಿಯ ರಾಜಕೀಯ-ಧಾರ್ಮಿಕ-ಆಡಂಬೋಲದಲ್ಲಿ ತರಹೇವಾರಿ ಕುತೂಹಲ ಕೆರಳಿಸಿಬಿಟ್ಟಿದೆ!

ಕೊಲ್ಲೂರು ದೇವಳದ ಆಡಳಿತ ಮಂಡಳಿಯಲ್ಲಿ ಒಟ್ಟು 9 ಧರ್ಮದರ್ಶಿಗಳಿರುತ್ತಾರೆ. ಈ ಒಂಬತ್ತರಲ್ಲಿ ಒಂಬತ್ತು ಮಂದಿ ತನ್ನ ಚೇಲಾಗಳೇ ಆಗಬೇಕೆಂಬ ಹಠಕ್ಕೆ ಬೈಂದೂರು ಶಾಸಕ ಗೋಪಾಲ ಪೂಜಾರಿ ಬಿದ್ದಿದ್ದಾರೆ. ದೇವಳ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಇರುವುದರಿಂದ ತನ್ನ ಮಾತೇ ಅಂತಿಮ ಎಂಬುದು ಈ ಆಡಳಿತಾರೂಢ ಕಾಂಗ್ರೆಸ್ ಶಾಸಕನ ವಾದ. ಆದರೆ ಉದ್ಯಮಿ ಶಂಕರ್ ಸಾಕ್ಷಾತ್ ಸಿಎಂ ಸಿದ್ದು ಸಖ್ಯದಿಂದಲೇ ಧರ್ಮದರ್ಶಿಯಾಗುವುದು ಖಾತ್ರಿ ಆಗಿದ್ದರೂ ಪೂಜಾರಿ ಎಲ್ಲ 9 ಜನರ ಲಿಸ್ಟ್ ತಯಾರಿಸಿ ಅದಕ್ಕೆ ಮುಜರಾಯಿ ಇಲಾಖೆಯ ಒಪ್ಪಿಗೆ ಮುದ್ರೆ ಒತ್ತಿಸಲು ಶತಾಯಗತಾಯ ಹಾರಾಡುತ್ತಿದ್ದಾರೆ. ಮಹಿಳೆಯರಿಗೆ ಮೀಸಲಿರುವ ಎರಡು ಸ್ಥಾನದಲ್ಲಿ ಒಂದು ತನ್ನ ಹೆಸರು ಕೆಡಿಸಿಕೊಂಡಿರುವ ಹರಾಮಿ ಹಿಂಬಾಲಕ ರಾಜು ದೇವಾಡಿಗನ ಹೆಂಡತಿಗೆ ಕೊಡಲು ನಿರ್ಧರಿಸಿರುವ ಪೂಜಾರಿ ಮತ್ತೊಂದನ್ನೂ ತನ್ನ ಖಾಸಾ ಕಸಿನ್ ವಿಜಯಕೃಷ್ಣ ಎಂಬ ಹೊಟೇಲಿಯನ್‌ನ ಮಡದಿಗೆ ಕಾದಿಟ್ಟಿದ್ದಾನೆ.


ಅರ್ಚಕರ ಮೀಸಲು ಸ್ಥಾನ ರಾಮಚಂದ್ರ ಅಡಿಗ ಎಂಬ "ಪರಾಕ್ರಮಿ ಪುರೋಹಿತಗೆ ದಯಪಾಲಿಸಿದ್ದಾರೆ ಪೂಜಾರಿ ಸಾಹೇಬರು. ದಲಿತ ಸ್ಥಾನಕ್ಕಾಗಿ ಆತನ ಹುಡುಕಾಟ, ತಡಕಾಟ ನಡೆದೇ ಇದೆ. ಉಳಿದ ನಾಲ್ಕು ಸಾಮಾನ್ಯ ಸ್ಥಾನಕ್ಕೆ ಪಕ್ಕಾ ದಗಾಕೋರ ಗುತ್ತಿಗೆದಾರರ ಹೆಸರನ್ನು ಗೋಪಾಲ ಪೂಜಾರಿ ಅಂತಿಮ ಗೊಳಿಸಿಕೊಂಡಿದ್ದಾರೆ. ಕೇರಳ ಮೂಲದ ಧರ್ಮದರ್ಶಿಗಿರಿಗೆ ಹಿಂದಿನ ಧರ್ಮದರ್ಶಿ ಮೋಹನ ಚರಿಪ್ಪಾಡಿ ತನ್ನ ಮಗನ ತರಲು ಹವಣಿಸುತ್ತಿದ್ದಾರೆ. ಮತ್ತೊಂದೆಡೆ ಎ.ಜೆ. ಹಾಸ್ಪಿಟಲ್‌ನ ವೈದ್ಯ ಅಭಿಷೇಕ ಗೋಪಾಲ ಪೂಜಾರಿಗೆ ಗಂಟು ಬಿದ್ದಿದ್ದಾರೆ.


ಕೊಲ್ಲೂರು ದೇವಸ್ಥಾನದಂಥ ವಜನಿನ ಧಾರ್ಮಿಕ ಕ್ಷೇತ್ರದ ವ್ಯವಸ್ಥಾಪನಾ ಮಂಡಳಿಗೆ ಎಲ್ಲ ಅರ್ಹ, ಶುದ್ಧ ಇಮೇಜಿನ ವ್ಯಕ್ತಿಗಳನ್ನೆಲ್ಲ ಬುದ್ಧಿಪೂರ್ವಕವಾಗೇ ಕಡೆಗಣಿಸಿ ನಾಲ್ವರು ನಾಲಾಯಕ್ ಸರ್ಕಾರಿ ಗುತ್ತಿಗೆದಾರರ ನೇಮಿಸಲು ಶಾಸಕ ಪೂಜಾರಿ ನೆಲ-ಮುಗಿಲು ಒಂದು ಮಾಡಿ ಮಸಲತ್ತು ನಡೆಸಿರುವುದು ಈಗ ಕರಾವಳಿಯಲ್ಲಿ ದೊಡ್ಡ ಚರ್ಚೆಯ ಸಂಗತಿಯಾಗಿಹೋಗಿದೆ. ಕಳಪೆ ಕಾಮಗಾರಿ ಕಿಂಗ್‌ಗಳೆಂದೇ ಸುಪ್ರಸಿದ್ಧರಾಗಿರುವ ವಂಡಬಳ್ಳಿ ಜಯರಾಮ ಶೆಟ್ಟಿ, ರಾಜೇಶ್ ಕಾರಂತ, ಗೋಕುಲ ಶೆಟ್ಟಿ ಮತ್ತು ರಮೇಶ ದೇವಾಡಿಗ ಎಂಬ ಚಾಂಡಾಳ ಚೌಕಡಿಗೆ ಧರ್ಮದರ್ಶಿ ಪಟ್ಟ ಕೊಡದಿದ್ದರೆ ಶಾಸಕ ಸ್ಥಾನಕ್ಕೇ ರಾಜಿನಾಮೆ ಬೀಸಾಕ್ತೇನೆಂದು ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡೀಸ್, ಜಿಲ್ಲಾ ಉಸ್ತುವಾರಿ ಮಂತ್ರಿ ಪ್ರಮೋದ್ ಮಧ್ವರಾಜ್ ಮತ್ತು ಮುಜರಾಯಿ ಮಂತ್ರಿ ರುದ್ರಪ್ಪ ಲಮಾಣಿ ಎದುರು ಗೋಪಾಲ ಪೂಜಾರಿ ಚಂಡಿ ಹಿಡಿದು ಅಳುತ್ತಿರುವುದು ಆತನ ಅಸಲೀ ಅವತಾರ ಅನಾವರಣ ಮಾಡಿಬಿಟ್ಟಿದೆ!


ಬೈಂದೂರು ಕ್ಷೇತ್ರದ ಸರ್ಕಾರಿ ಕಾಮಗಾರಿ ಈ ನಾಲ್ಕು ಕಳ್ಳ ಕಂಟ್ರಾಕ್ಟರ್‌ಗಳನ್ನು ಬಿಟ್ಟರೆ ಐದಯವನೊಬ್ಬನಿಗೆ ಸಿಗಲು ಸಾಧ್ಯವೇ ಇಲ್ಲ, ಈ ನಾಲ್ಕು ಪ್ರಳಯಾಂತಕ ಗುತ್ತಿ… ಶಾಸಕನ ಚೇಲಾಗಳೆಂಬ ನೆಲೆಯಲ್ಲಿ ಸಲೀಸಾಗಿ … ಕೋಟಿ ಬಿಲ್ ಬಟಾವಡೆ ಮಾಡಿಸಿಕೊಳ್ಳುತ್ತಿದ್ದಾರ… ಹಲವು ಕಾಮಗಾರಿ ಕಾಗದದಲ್ಲಷ್ಟೇ ಪೂರ್ಣಗೆ… ಆದರೂ ಅಧಿಕಾರಿಗಳು ಹೆದರಿ ಬಿಲ್ ಕೊಡ… ಯಾವ ಕಾಮಗಾರಿಯನ್ನೂ ಇವರು ಎಸ್ಟೀಮೇ… ನೀಲಿ ನಕ್ಷೆಯಂತೆ ಮಾಡಿದ ಕುರುಹುಗಳೇ… ಬೈಂದೂರಲ್ಲಿ ಈ ದುಷ್ಟ ಚತುಷ್ಟಯರದೇ ದ… ಶಾಸಕ ಪೂಜಾರಿ ಈ ಪರಮಾಪ್ತ ಗುತ್ತೇ… ಹೇಳಿದಂತೆಯೇ ಹೆಜ್ಜೆ ಹಾಕುತ್ತಾರೆ. ಶಾಸಕ … ಕಳ್ಳ-ಕಳಪೆ ಕಾಮಗಾರಿಯಲ್ಲಿ ಪರ್ಸೆಂಟೇಜ್ … ಈ ಗುತ್ತೇದಾರರ ಕಪಿಮುಷ್ಠಿಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾರೆ. ಹೊಟೇಲು ಉದ್ಯಮ-ರಿಯಲ್ … ದಂಧೆಯಲ್ಲಿ ಕೈ ಸೋತಿರುವ ಪೂಜಾರಿಗ… ನಿಭಾಯಿಸಲಿಕ್ಕೂ ದೊಡ್ಡ ಪ್ರಮಾಣದ ಹಣ ಬೇ… ಹಣದ ಅಡಚಣೆ ನಿವಾರಿಸುವ ರಮೇಶ್ … ಜಯರಾಮ ಶೆಟ್ಟಿ, ಗೋಕುಲ ಶೆಟ್ಟಿ, ರಮೇಶ್ … ಸಂಪ್ರೀತಗೊಳಿಸಲು ಕೊಲ್ಲೂರು ದೇವಳದ ವ್ಯ… ಕಮಿಟಿಗೆ ನೇಮಕ ಮಾಡಬೇಕಾಗಿ ಬಂದಿದೆ.


ಒಂದು ಕಾಲದಲ್ಲಿ ದಿಲ್ಲಿಯಲ್ಲೂ ಹೊಟೇಲು … ಈ ಬರ್ಜರಿ ಹೊಟೇಲು ಉದ್ಯಮಿ ಈಗ ಆ ದ… ಲಾಸ್ ಆಗಿ ಹೋಗಿದ್ದಾರೆ. ಹತ್ತು ನ್ಯೂ ಶಾಂ… ಹೊಟೇಲುಗಳಲ್ಲಿ ಈಗಾಗಲೇ ಮೂರು ಮ… ಕೈಹಾಕಿದ ರಿಯಲ್ ಎಸ್ಟೇಟ್ ವ್ಯವಹಾರವೂ ಭರ್ಜ… ಹೀಗಾಗಿ ತನ್ನ ಕ್ಷೇತ್ರದಲ್ಲಿ ದೊಡ್ಡ-ದೊಡ್ಡ ಸರ್ಕಾರಿ … ಹಿಡಿಯುವ ಜಯರಾಮ ಶೆಟ್ಟಿ, ರಾಜೇಶ್ … ಗೋಕುಲಶೆಟ್ಟಿ ಮತ್ತು ರಮೇಶ್ ಗಾಣಿಗರಿಂದ … ಸಾಲ ಪಡೆಯಬೇಕಾದ ದುರಂತ ಎದುರಾಗಿ… ನಾಲ್ವರಲ್ಲಿ ರಾಜೇಶ್ ಕಾರಂತನೆಂಬ ದೋಖಾಬಾಜಿ … ಎಮ್ಮೆಲ್ಲೆ ಲೆಟರ್‌ಹೆಡ್ ಬೇಕಾಬಿಟ್ಟಿಯಾಗಿ ಬಳಸಿ ಕ… ಹಿಡಿಯುವುದು ಬಿಲ್ ಪಡೆಯುವುದು ಮಾಡು… ಹಿಂದೆ ಬಿಜೆಪಿಯ ಲಕ್ಷ್ಮೀನಾರಾಯಣ ಎಂಬ … ಮುದುಕ ಶಾಸಕನಾಗಿದ್ದಾಗಲೂ ಆತನನ್ನು ಆ… ಸುಖ ಸರಬರಾಜುದಾರ ಕಾರಂತ ಪಳಗಿಸಿಕೊಂಡ… ಲೆಟರ್‌ಹೆಡ್ ಪ್ಯಾಡನ್ನೇ ತನ್ನಲ್ಲಿಟ್ಟುಕೊಂಡಿದ್ದ.


ದುಡ್ಡಿನ ದುರಾಸೆಗೆ ಬಿದ್ದಿರುವ ಶಾಸಕ … ದಾರಿ ತಪ್ಪಿ ಹೋಗಿದ್ದಾರೆ. ಜತೆಗೆ ಚಪಲವೂ … ವಯಸ್ಸಿನಲ್ಲಿ ಅಂಟಿಕೊಂಡಿರುವ ಪುಕಾರುಗಳೂ … ಶಾಸಕ-ಅಧಿಕಾರಿಗಳಿಗೆ ಯಾವ ದೌರ್ಬಲ್ಯವಿದ… ಪತ್ತೆ ಹಚ್ಚಿ ಆ ಸುಖ ಪೂರೈಸುವ ಕಲೆ … ಮಾಡಿಕೊಂಡಿರುವ ರಾಜೇಶ್ ಕಾರಂತ … ಪೂಜಾರಿಯನ್ನು ಗಿರಗಿಟ್ಲೆಯಂತೆ ತಿರುಗಿಸುತ್ತಿದಾ… ಸಾರ್ವಭೌಮ ಉಡುಪಿಯ ರಘುಪತಿ ಭಟ್ಟನೆಂ… ಭಜರಂಗಿ ಶಾಸಕನಾಗಿದ್ದಾಗ ಆತನ ಆಪ್ತನಾಗಿದ್ದ… ಮದುವೆಯಾದ ಒಂದೇ ವರ್ಷದಲ್ಲಿ ಹೆಂಡತಿ… ಬದಲಿ ಡಿಂಗ್‌ಡಾಂಗ್ ಮಾಡುತ್ತಿದ್ದಾನೆ. ಒಂದು … ಅಪ್ಪನ ಕೋರ್ಟ್‌ಕ್ಯಾಂಟೀನ್ ಟೇಬಲ್ ಬಾಯ… ಕಾರಂತ ಇವತ್ತು ಶಾಸಕರನ್ನೇ ಕುಣಿಸುವ ಕಳಪೆ ಕ… ಎಂಬ ಖ್ಯಾತಿಗೇರಿದ್ದಾನೆ! ನೈತಿಕವಾಗಿ-ಸಾಮಾ… ಅಧಃಪತನ ಕಂಡಿರುವ ಕಾರಂತನನ್ನು ಕೊಲ್ಲೂರು … ಧರ್ಮದರ್ಶಿ ಮಾಡುವ ಹುಕಿ ಶಾಸಕ ಪ… ಬಂದಿರುವುದು ಅನೇಕಾನೇಕ ರಂಗ್‌ರಂಗೀಲಾ …











ಧರ್ಮದರ್ಶಿ ಮಂಡಳಿಯ ಆಡಳಿತದಲ್ಲಿ ನೂರಾರು ಕೋಟಿ ಕಾಮಗಾರಿ ಮಾಡಲಾಗಿದೆ. ಇದರಲ್ಲಿ ಸಿಗುವ ಪರ್ಸೆಂಟೇಜ್, ಕಿಕ್‌ಬ್ಯಾಕ್ ಆದಾಯ ಒಂದೆಡೆಯಾದರೆ, ಮತ್ತೊಂದೆಡೆ ಭಾವುಕ ಭಕ್ತರು ಅರ್ಪಿಸುವ ಹರಕೆ ಬೆಳ್ಳಿ-ಬಂಗಾರದ ಒಡವೆ, ದೊಡ್ಡ ಮೊತ್ತದ ಕಾಣಿಕೆ-ದೇಣಿಗೆ ಜಾದೂಗಾರಿಕೆಯಲ್ಲಿ ಕಳ್ಳರ ಪಾಲಾಗುತ್ತಿದೆ.

ಕೋಚಾ ಸರ್ಕಾರ, ಬಿಜೆಪಿ ಆಡಳಿತವಿದ್ದಾಗ ಸಂಘ ಪರಿವಾರದ ನುಂಗಣ್ಣ ಕೃಷ್ಣಪ್ರಸಾದ್ ಆಡ್ಯಂತಾಯ ಧರ್ಮದರ್ಶಿ ಮಂಡಳಿಯ ಯಜಮಾನನಾಗಿ ಹಗಲು ದರೋಡೆಯನ್ನೇ ಮಾಡಿ ಮುಗಿಸಿದ್ದಾನೆ! ದೇವಳದಲ್ಲಿ ಕದ್ದ ಹಣವನ್ನೆಲ್ಲ ಈತ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿದ್ದಾನೆಂದು ಭಜರಂಗಿ ಭೂಪರೇ ಪಿಸುಗುಡುತ್ತಿದ್ದಾರೆ. ಸಿಗಡಿ ಕೃಷಿಯಲ್ಲಿ ದಿವಾಳಿಯಾಗಿದ್ದ ಆಡ್ಯಂತಾಯ ಇವತ್ತು ಕೋಟಿಗೆ ತೂಗುವ ಭೂ ಮಾಫಿಯಾ ದೊರೆ! ಹಿಂದೂ ಡಾನ್ ಕಲ್ಲಡ್ಕನ ಕೇಸರಿ ಶಾಲೆ-ಸಂಸ್ಥೆಗಳಿಗೆಲ್ಲ ಆಡ್ಯಂತಾಯನ ಕಾಲ ಕೀರ್ದಿಯಲ್ಲಿ ಕೋಟಿ-ಕೋಟಿ ಬಳುವಳಿಯಾಗಿ ಹರಿದು ಹೋಗಿದೆ. ಆಡ್ಯಂತಾಯನ ಕಣ್ಗಾವಲಿನಲ್ಲೇ 70 ಲಕ್ಷದ ಹರಿಕೆ ಬಂಗಾರದ ಆಭರಣ ಗೋಲ್‌ಮಾಲ್ ಆಗಿದೆ. ಹಲವು ಚೋರ ಸಿಬ್ಬಂದಿ ಜೈಲೂಟ ಉಂಡು ಬಂದಿದ್ದಾರೆ. ಆದರೆ ಸಕಲ ಕಲಾವಲ್ಲಭ ಆಡ್ಯಂತಾಯ ಮತ್ತಾತನ ಧರ್ಮದರ್ಶಿ ಮಂಡಳಿಯ ಮಹಾಮಹಿಮರು ಮಾತ್ರ ಆರಾಮಾಗಿದ್ದಾರೆ.

430 ಗ್ರಾಮ್ ಚಿನ್ನದ ಕಳ್ಳತನ ಪೊಲೀಸ್‌ರಿಂದಲೂ





...ಂದೂರು-ಕುಂದಾಪುರದಲ್ಲಿ ಹಬ್ಬಿಸಿ ಬಿಟ್ಟಿದೆ!

...ಮುಜರಾಯಿ ಇಲಾಖೆಯ ಮಾನದಂಡದಂತೆ ...ವಸ್ಥಾನದ ಧರ್ಮದರ್ಶಿ ಆಗುವವರು ...ಕಳಂಕಿತರಾಗಿರಬೇಕು. ಕ್ರಿಮಿನಲ್-ಕಳ್ಳತನದ ಆರೋಪ ...ರುವಂಥವರ ಸಂಬಂಧಿಕರೂ ಆಗಿರಬಾರದು. ಸರ್ಕಾರಿ ...ತ್ರಿಗೆ ಧರ್ಮದರ್ಶಿ ಆಗುವ ದೇಗುಲದ ಏರಿಯಾದಲ್ಲಿ ...ಡುವಂಥವರಾಗಿಬಾರದು. ಎಲ್ಲಕ್ಕಿಂತ ಹೆಚ್ಚಾಗಿ ಭಕ್ತರ ...ವನೆ ಘಾಸಿಗೊಳಿಸುವಂಥ ಚಟ ಸಾರ್ವಭೌಮರಾಗಿರ ...ರದು. ಆದರೆ ಶಾಸಕ ಗೋಪಾಲ ಪೂಜಾರಿ ಆಯ್ಕೆ ...ಡಿರುವ ನಾಲ್ವರು ಗುತ್ತಿಗೆದಾರರಿಗೆ ಈ ಅರ್ಹತೆಯಲ್ಲಿ ...ದೂ ಇಲ್ಲ, ಕಾರಂತನ ಕೊಳಕುತನ ಲೋಕಪ್ರಸಿದ್ಧ; ...ಡಬಳ್ಳಿ ಜಯರಾಮ ಶೆಟ್ಟಿ ದಪ್ಪ ನಾಮ ಹಾಕಿಕೊಂಡು, ...ದ್ದ ಪಂಚೆ-ಜುಬ್ಬ ಹಾಕಿಕೊಂಡು ಹೊರಟನೆಂದರೆ ದೇವರೇ ...ರುದು ಬಂದಂತಾಗುತ್ತದೆ. ಇಂಥ ಜಯರಾಮ ಶೆಟ್ಟಿಗೆ ...ಂತನಂತೆಯೇ ಮೋಜು-ಜೂಜು-ಎಣ್ಣೆ ಎಲ್ಲವೂ ಬೇಕು. ...ಟಿಗೆ ದೇವಳದ ಬಂಗಾರ ಕದ್ದು ಸಿಕ್ಕಿಬಿದ್ದ ಪ್ರಕರಣದಲ್ಲಿ ...ಆರೋಪಿಯಾಗಿ ಜೈಲಿಗೆ ಹೋಗಿ ಬಂದಿರುವ ಗಂಗಾಧರ ...ಟ್ಟಿ ಎಂಬಾತ ಇದೇ ವಂಡಬಳ್ಳಿ ಜಯರಾಮ ಶೆಟ್ರ ...ಡತಿಯ ಖಾಸಾ ತಮ್ಮ. ಟ್ರಸ್ಟಿಯಾದರೆ ವಂಡಬಳ್ಳಿ ...ರು ಭಾಮೈದನ ಬಿಟ್ಟು ಕೊಡುತ್ತಾರಾ?

...ಇಂಥ ಸರಳ ಲೆಕ್ಕಾಚಾರ-ಯೋಚನಾ ಶಕ್ತಿಯನ್ನೇ ಶಾಸಕ ...ಜಾರಿ ಕಳೆದುಕೊಂಡು ಬಿಟ್ಟಿದ್ದಾರೆ. ತಾನು ಕೇಳಿದಾಗೆಲ್ಲ ...ು ಕೊಡುವ- ಸಾಲ ಕೊಡುವ ಕಂಟ್ರಾಕ್ಟರ್‌ಗಳ ಋಣ ...ಸಲು ಆತ ಮೂಕಾಂಬಿಕಾ ದೇವಳದ ಭಂಡಾರವನ್ನೇ ...ಮಾಗಿ ಕೊಡಲು ಕಟಿಪಿಟಿ ಮಾಡುತ್ತಿದ್ದಾರೆ. ಕಾರಂತ ...ತ್ತು ವಂಡಬಳ್ಳಿ ಶೆಟ್ಟಿಗೆ ಹೋಲಿಸಿದರೆ ರಮೇಶ ಗಾಣಿಗ ...ು ಗೋಕುಲ ಶೆಟ್ಟಿಗೆ ಚಟಗಳು ಕಡಿಮೆ. ಸರ್ಕಾರಿ ...ಕ್ಕಸಕ್ಕೆ ಕನ್ನ ಹಾಕಿ ಹಣ ಮಾಡುವ ಕಳಪೆ ...ಟ್ರಾಕ್ಟರಿಕೆಯೇ ಇವರಿಬ್ಬರ ಗುರಿಯಷ್ಟೇ! ಹಾಗಂತ ...ಲ್ಲೂರು ದೇವಳದ ಟ್ರಸ್ಟಿಯಾಗುವಂಥ ಯೋಗ್ಯತೆ ...ದೂ ಇವರಿಗೂ ಇಲ್ಲ!! ಸೋಗಲಾಡಿ ಸುಕುಮಾರ ...ಯ ವ್ಯವಸ್ಥಾಪನಾ ಕಮಿಟಿಯಲ್ಲಿ ಟ್ರಸ್ಟಿಯಾಗಿದ್ದ ...ಡಬಳ್ಳಿ ಜಯರಾಮ ಶೆಟ್ಟಿ ಚಿನ್ನದ ರಥ ರಾದ್ಧಾಂತದಲ್ಲಿ ...ಕಾಯುಕ್ತ ತನಿಖೆಗೆ ತುತ್ತಾಗಿದ್ದಾನೆ. ಇವತ್ತಿಗೂ ಈ ...ನ ವಿಚಾರಣೆ ನಡೆಯುತ್ತಲೇ ಇದೆ. ಇಂಥ ಅನಿಷ್ಟಗಳು ...ಕ ಪೂಜಾರಿಗೆ ಅನಿವಾರ್ಯ ಆಗಿರುವುದು ಆತನ ...ಕೀಯ ಅವಸಾನಕ್ಕೆ ಸೂಚನೆಯಂತಿದೆ!

...ಪವರ್‌ಫುಲ್ ಮಂತ್ರಿವರ್ಯ ಡಿಕೆಶಿ ಕೊಲ್ಲೂರು ದೇವಳ ...ಟಿಗೆ ತನ್ನವರೊಬ್ಬರನ್ನು ಸೇರಿಸುವ ಇರಾದೆಯಲ್ಲಿದ್ದರು. ...ಕ್ಕೂ ಅವಕಾಶ ಕೊಡದ ಪೂಜಾರಿ ತಾನು ಹೇಳಿದ ...ರು ಗುತ್ತೇದಾರರಲ್ಲಿ ಒಬ್ಬೇ ಒಬ್ಬನ ಕೈಬಿಟ್ಟರೂ ...ಲ್ಲಗಿರಿಗೇ ರಾಜಿನಾಮೆ ಕೊಡ್ತೇನೆಂದು ಬ್ಲಾಕ್‌ಮೇಲ್ ...ಡುತ್ತಿದ್ದಾರೆ. ಈ ಬೆದರಿಕೆ ಹಾಕಿಯೇ ಜಿಲ್ಲಾ ಮಂತ್ರಿ ...ೋದ್ ಮಧ್ವರಾಜ್, ಮುಜರಾಯಿ ಮಂತ್ರಿ ರುದ್ರಪ್ಪ ...ಾಣಿಯ ಒಪ್ಪಿಗೆ ಪಡೆಕೊಂಡಿದ್ದಾರೆ. ಆದರೆ ಕರಾವಳಿ ...ಗ್ರೆಸ್‌ನ ಅಧಿನಾಯಕ ಆಸ್ಕರ್ ಫರ್ನಾಂಡಿಸ್ ಶಾಸಕ ...ಜಾರಿಯ ಶಿಷ್ಯೋತ್ತಮರ ಲಿಸ್ಟ್‌ಗೆ ತಡೆಯಾಜ್ಞೆ ನೀಡಿದ್ದಾರೆ. ...ಈಗ ಶಾಸಕ ಪೂಜಾರಿ ಚಡಪಡಿಸುತ್ತಿದ್ದಾರೆ. ತನ್ನ ...ದಿಕಾಲದ ಚಪಲ-ದುಡ್ಡಿನ ದರ್ದು ತಣಿಸುವ ...ಾಲಕ ಕಂಟ್ರಾಕ್ಟರ್‌ಗಳ ಬಿಟ್ಟು ಬದಲಿ ಪಟ್ಟಿ ...ರಿಸುವ ಧೈರ್ಯ-ನೈತಿಕಸ್ಥೈರ್ಯ ಆತನಲ್ಲಿ ಇಲ್ಲ. ... ದಂಡಪಿಂಡಗಳನ್ನು ಧರ್ಮದರ್ಶಿ ಮಾಡದಿದ್ದರೆ ...ಂತರಕಾರಿ ಆಗುತ್ತಾರೆಂಬ ಭಯ ಪೂಜಾರಿಗೆ. ತನ್ನೆಲ್ಲ ...ರ್ಬಲ್ಯ-ದಗಲುಬಾಜಿತನ-ಗೋಲ್‌ಮಾಲ್ ಗೊತ್ತಿರುವ ... ಚೇಲಾಪುಟ್ಟಯರು ತಿರುಗಿ ಬಿದ್ದರೆ ಅದನ್ನು ನಿಭಾಯಿಸುವ ...ಗ ಇಲ್ಲವಾಗಿದೆ ಶಾಸಕ ಪೂಜಾರಿಗೆ. ಇಂಥ ಹಲವು ...ಂಕ್ತಾಪರಾಧದಲ್ಲಿ ಸಿಕ್ಕಿ ತೊಳಲಾಡುತ್ತಿರುವ ಶಾಸಕ ...ಜಾರಿ ಪೂಜಾರಿ ಒಂದೂವರೆ ವರ್ಷದಲ್ಲಿ ತಿದ್ದಿಕೊಂಡು ...ಪ ಪುಸಗೆಲ್ಲಲು ಸಾಧ್ಯವಾ? ಡರ್ಟಿ ಇಮೇಜ್ ...ಂಡಿಕೊಳ್ಳಲಾದೀತಾ? ಕಷ್ಟ-ಕಷ್ಟ!!

■ ನಹುಷ

ಯತಿಗಳ ಜೊತೆ ಭೋಜನ ಭಾರಿಸುವುದು ಸಾಧ್ಯವೇ?

ಥೂತ್ತೇರಿ

▶ ಯಾಹೂ



ಹದಿನೇಳೂ ಚಿಲ್ಲರೆ ವರ್ಷ ಕಾಲ ಈ ದೇಶದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರ ಜನ್ಮದಿನವನ್ನೇ ಬಿಜೆಪಿಗಳು ತಾತ್ಸಾರ ಮಾಡಿವೆಯೆಂದು ಮಲ್ಲಿಕಾರ್ಜುನ ಖರ್ಗೆ ಕಣ್ಣೀರು ಹಾಕಿದರಂತಲ್ಲಾ, ವಾಸ್ತವವಾಗಿ ಚಡ್ಡಿಗಳಿಗೆ ಮರುಜನ್ಮ ನೀಡಿ, ರಾಷ್ಟ್ರವಾಹಿನಿಗೆ ವಕ್ಕರಿಸಿಕೊಂಡು ಇಂದು ಮೋದಿ ಮುಂದಾಳತ್ವದಲ್ಲಿ ದೇಶವನ್ನೇ ಕ್ಷೋಭೆಗೆ ದೂಡಿದ ಮಹಾ ತಾಯಿಯೇ ಇಂದಿರಮ್ಮ ಎಂಬುದು ಚಡ್ಡಿಗಳಿಗೆ ಗೊತ್ತಿರಲಾರದು. ಅಂದ ಹಾಗೆ ಚಡ್ಡಿಗಳು ತಮ್ಮ ಬಡತನ ನೀಗಿಸಿಕೊಂಡು ಪ್ಯಾಂಟ್ ಹೊಲಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಮಾನ ಮುಚ್ಚಿಕೊಂಡಿದ್ದರೂ ಒಂಭತ್ತು ದಶಕ ಧರಿಸಿದ್ದ ಚಡ್ಡಿ ಚಹರೆ ಸುಲಭಕ್ಕೆ ಅಳಿಸಿಹೋಗಲಾರದು. ತುರ್ತುಸ್ಥಿತಿಯಲ್ಲಿ ಇವರನ್ನೂ ಕೂಡ ಹತ್ತಿರ ಕರೆದ ಜೆಪಿಯವರು "ನಿಮ್ಮ ಝಂಡಾ ಎಸೆದು, ದೀಪ ಆರಿಸಿ, ಬಂದು ನೇಗಿಲು ಹೊತ್ತ ರೈತನ ಜೊತೆ ಬನ್ನಿ" ಎಂದಾಗ ಹಿಂದು ಮುಂದು ನೋಡದ ಚಡ್ಡಿಗಳು ತಮ್ಮ ನಿಜವಾದ ವೇಶ ಕಳಚಿ ಛದ್ಮ ವೇಷದಲ್ಲಿ ಜನತಾಪಕ್ಷದಲ್ಲಿ ಅಡಗಿ ಕುಳಿತದ್ದು ಈಗ ಇತಿಹಾಸ. ಮುಂದೆ ಜೆ.ಪಿ ಕಟ್ಟಿದ ಜನತಾಪಕ್ಷ 18 ತಿಂಗಳಿಗೆ ಒಡೆದು ಹೋಯಿತು. ಆಗ ತಮ್ಮ ಭಾಗದೊಂದಿಗೆ ಜಾಗ ಖಾಲಿ ಮಾಡಿದ ಚಡ್ಡಿಗಳು, ಬ್ರಹ್ಮಕಮಲವನ್ನು ಚುನಾವಣಾ ಚಿಹ್ನೆಯಾಗಿ ಪಡೆದು, ದೇಶಕ್ಕೆ ಬೆಂಕಿ ಹಚ್ಚುತ್ತಾ ಅದರ ಶಾಖದಿಂದಲೇ ಶಾಖೆ ಬೆಳೆಸುತ್ತಾ ಬಂದಿದ್ದೂ ಈಗ ಇತಿಹಾಸ. ಆದರೆ ತಮಗೆ ಮರುಜನ್ಮ ನೀಡಿದ ಇಂದಿರಾ ಮತ್ತು ಜೆ.ಪಿ ಜನ್ಮ ದಿನವನ್ನ ಈ ಚಡ್ಡಿಗಳು ವಿಜೃಂಭಣೆಯಿಂದ ಆಚರಿಸುತ್ತ ಬರುವುದು ತಂದೆ ತಾಯಿಗಳ ಪಿತೃಪಕ್ಷಾಚರಣೆಗೆ ಸಮಾನವಂತಲ್ಲಾ, ಥೂತ್ತೇರಿ!

* * *

ಬೌದ್ಧಿಕ ದಾರಿದ್ರ್ಯದಿಂದ ಬಳಲುತ್ತಿರುವ ಉಡುಪಿ ಮಠದ ಯತಿವರ್ಯರಿಗೆ ಅಷ್ಟ ದಿಕ್ಕುಗಳಿಂದಲೂ ಬುದ್ಧಿಜೀವಿಗಳು ಬಾಣ ಎಸೆಯುತ್ತಿದ್ದಾರಂತಲ್ಲಾ, ಇದಕ್ಕೆ ಪ್ರತಿಕ್ರಿಯೆಯಾಗಿ ಅಪಾಯಕ್ಕೆ ಸಿಕ್ಕಿದ ಮನುಷ್ಯ ಸಿಕ್ಕ ಸಿಕ್ಕ ಆಯುಧಗಳನ್ನೇ ಎಲ್ಲರ ಮೇಲೆ ಎಸೆಯುವಂತೆ ಯತಿವರ್ಯರು ವರ್ತಿಸುತ್ತಿದ್ದಾರಲ್ಲಾ, ಇದೇ ಹೊತ್ತಿಗೆ ಚಕ್ರವರ್ತಿಗಳ ಆಸ್ಥಾನದಲ್ಲಿದ್ದ ಶುಚಿಗಾರ ಸೂಳೆಯರ ಮಕ್ಕಳು ಉಡುಪಿಯ ಬೀದಿಯನ್ನು ಗುಡಿಸಿ ಗುಂಡಾಂತರ ಮಾಡಿದ್ದೂ ಅಲ್ಲದೆ ಯತಿಗಳನ್ನೂ ಕೂಡ ಕಸದ ರಾಶಿಗೆ ಎಸೆದರಂತಲ್ಲಾ. ದಲಿತ ಕೇರಿಗೇ ಹೋಗಿದ್ದ ಯತಿಗಳು ದಲಿತರೇ ಉಡುಪಿಗೆ ಬಂದಾಗ ಹೆದರಿ ಕಂಗಾಲಾಗಿದ್ದೂ ಅಲ್ಲದೆ ಉಪವಾಸ ವನವಾಸದ ಮಾತನಾಡುತ್ತಾ "ನಾನು ಬ್ರಾಹ್ಮಣರ ಜೊತೆಯಲ್ಲೂ ಊಟ ಮಾಡುವುದಿಲ್ಲ" ಎಂದುಬಿಟ್ಟರಲ್ಲಾ. ಯತಿಗಳ ಇಂತಹ ನಡವಳಿಕೆಯನ್ನು ಕಳೆದ ಶತಮಾನದಲ್ಲೇ ಗುರುತಿಸಿದ್ದ ಪೂರ್ಣಚಂದ್ರ ತೇಜಸ್ವಿಯವರು "ಈ ವೇಷಧಾರಿಗಳನ್ನು ಸೋಲಿಸಲು ಸಾಧ್ಯವೇ ಇಲ್ಲ ಕಂಡ್ರೀ. ಅವರಿಗೆ ಎಲ್ಲಾ ಗೊತ್ತಿದ್ದೂ ಹಾಗೆ ನಡಕೊಳ್ತಾರೆ. ಆ ಮೂರು ಕಾಸಿನ ಬ್ರಾಹ್ಮಣಿಕೆ ಉಳಿಸಿಕೊಳ್ಳೋಕೆ ಅವ್ರುರು ಆಡೊ ಅವತಾರ ನೋಡಿದ್ರೆ ಹೊಟ್ಟೆ ಹುಣ್ಣಾಗುವಷ್ಟು ನಗು ಬರುತ್ತೆ" ಅಂದಿದ್ರು. ಶಿವಳ್ಳಿ ಬ್ರಾಹ್ಮಣರ ಜೊತೆಯೇ ಸಹಪಂಕ್ತಿ ಭೋಜನ ಒಪ್ಪದ ಯತಿಗಳು ಅಕಸ್ಮಾತ್ ಸಹಪಂಕ್ತಿಗೆ ಒಪ್ಪಿದರೆ ಅವರ ಜೊತೆ ನೆಮ್ಮದಿಯಿಂದ ಉಣ್ಣಲು ಸಾಧ್ಯವೇ ಇಲ್ಲ. ಆ ಲೊಚಗರಿಯುವ ಶಬ್ದ, ಕೋಸಂಬರಿ ಅಗಿಯುವ ಭಂಗಿ, ಕೊನೆಯಲ್ಲಿ ಎಲೆಯಲ್ಲುಳಿದ ರಸಾಯನ ನೆಕ್ಕುವ ವೈಖರಿ, ಗಡ್ಡಮೀಸೆ ಇರುವ ಮಕ್ಕಳ ಬಾಯಂತೆ ಕಾಣುವ ಯತಿಗಳ ಜೊತೆ ಸಮತಾವಾದಿಗಳು ಭೋಜನ ಭಾರಿಸುವ ಕಾರ್ಯಕ್ರಮ ಕೈಬಿಡುವುದೇ ಒಳ್ಳೆಯದಂತಲ್ಲಾ, ಥೂತ್ತೇರಿ!!

* * *

ಮುಸ್ಲಿಂ ಧರ್ಮ ಹೇಗೆಂದರೆ ಚಕ್ರವರ್ತಿಯೊಬ್ಬ ತನ್ನ ಗುಲಾಮನನ್ನು ಮತಾಂತರ ಮಾಡಿದ ಕೂಡಲೇ ತನ್ನ ತಂಗಿಯನ್ನು ಕೊಟ್ಟು ಮದುವೆ ಮಾಡಬಲ್ಲ, ಅಷ್ಟರಮಟ್ಟಿಗೆ ಆ ಧರ್ಮ ಸಮಾನತೆಯನ್ನು ಅಂತರ್ಗತ ಮಾಡಿಕೊಂಡಿದೆಯಂತೆ. ಈ ಮಾತನ್ನಾಡಿದವರು ಸ್ವಾಮಿ ವಿವೇಕಾನಂದರು. ಬಸವ ಧರ್ಮವೂ ಕೂಡ ಲಿಂಗಧಾರಣೆಯಾದ ಕೂಡಲೇ ಇವ ನಮ್ಮವ ಎಂದು ಸಮಾನವಾಗಿ ನೋಡಿಕೊಳ್ಳಲು ಹೇಳಿದೆ. ಇದೇ ಸಿದ್ಧಾಂತವನ್ನು ನಮ್ಮ ಯಡಿಯೂರಪ್ಪನ ಪಾರ್ಟಿಗೆ ಅನ್ವಯಿಸಿ ಮಾತನಾಡುವುದಾದರೆ ಅವನೆಂತಹ ಸಮಾಜ ಘಾತುಕ, ಕೊಲೆಗಾರ, ಕಳ್ಳ, ಸುಳ್ಳ, ವ್ಯಭಿಚಾರಿ, ಗಣಿಗಳ್ಳ, ನೆಲಗಳ್ಳ, ಮರಳುಗಳ್ಳ, ಮರಗಳ್ಳ, ಸರಗಳ್ಳ, ಧನಗಳ್ಳನಾದರೂ ಬಿಜೆಪಿ ಸೇರಿದ ಕೂಡಲೇ ತಮ್ಮ ಬಂಧು ಬಾಂಧವನಂತೆ ಭಾವಿಸಿ ನಡೆದುಕೊಳ್ಳುತ್ತಾರಂತೆ. ಆದರೆ ಆತನ ಸಾಮಾಜಿಕ ವರ್ಚಸ್ಸು ಮತ್ತು ಸಂಪತ್ತು ಕರಗಿದ ಮೇಲೆ ಕಸದಂತೆ ನೋಡುತ್ತಾರಂತೆ. ಇದ್ಯಾವುದೂ ಗೊತ್ತಿಲ್ಲದ ಮಂದಮತಿಗಳು. ಬಿಜೆಪಿಗೆ ಹೋಗಲು ತಯಾರಾಗಿವೆ ಯಂತಲ್ಲಾ. ಈ ಪೈಕಿ ನಮ್ಮ ನಂಜನಗೂಡಿನ ಶ್ರೀನಿವಾಸ ಪ್ರಸಾದ್ ಬಿಜೆಪಿ ಕಡೆ ಮುಖ ಮಾಡಿದ ಕ್ಷಣಕ್ಕೆ ಚಡ್ಡಿಗಳ ಫ್ಲೆಕ್ಸ್‌ಗಳಲ್ಲಿ ಅಂಬೇಡ್ಕರ್ ಫೋಟೋಗೂ ಜಾಗ ಸಿಕ್ಕಿದೆಯಂತಲ್ಲಾ. ಮುಂದೆ ಯಾವ್ಯಾವ ಜನಾಂಗದ ನಾಯಕರು ಬಿಜೆಪಿಗೆ ಹೋಗುತ್ತಾರೋ ಆ ಜನಾಂಗದ ಪರಿವರ್ತನೆಯ ಹರಿಕಾರರನ್ನೆಲ್ಲಾ ಮತ್ತೆ ಫ್ಲೆಕ್ಸ್‌ಗಳಲ್ಲಿ ಬಳಸಲು ತಯಾರಾಗಿರುವ ಬಿಜೆಪಿಗಳು ಸದ್ಯ ಇನ್ನೇನು ಪವರಿಗೆ ಬಂದೇಬಿಟ್ಟ ಅಮಲಿನಲ್ಲಿದ್ದಾರಂತಲ್ಲಾ. ಟಿವಿಗಳಲ್ಲಿರುವ ಶ್ಯಾನುಭೋಗರ ಸಂತಾನಗಳು ಈಗಾಗಲೇ ಚುನಾವಣೆ ಸಮೀಕ್ಷೆ ಕೈಗೊಂಡು ಬಿಜೆಪಿಗೆ ಬಹುಮತವೆಂದು ಸಾರ ತೊಡಗಿವೆಯಂತಲ್ಲಾ. ಬಿಜೆಪಿ ಹಾದರದ ತಳಿ ಎಲ್ಲೆಲ್ಲಿ ಹೋಗಿದೆಯೊ ಏನೋ ಕಾಲಪುರುಷನೇ ಬಲ್ಲ, ಥೂತ್ತೇರಿ!!

* * *

ಕನ್ನಡ ರಾಜ್ಯೋತ್ಸವ ವಿಜೃಂಭಣೆಯಿಂದ ನಡೆಯುತ್ತಿವೆ. ಯಾವ ಕಡೆಯಿಂದ ನೋಡಿದರೂ ನಮ್ಮ ಭಾಷೆ ಸೊರಗುತ್ತಿವೆ. ಈ ಭಾಷೆಯಿಂದ ಸೃಷ್ಟಿಯಾದ ಗಾದೆಗಳು ಮರೆಯಾಗುತ್ತಿವೆ. ಜಾನಪದ ಕಥೆಗಳು ಕಣ್ಮರೆಯಾಗುತ್ತಿವೆ. ಹಳ್ಳಿ ಹೋಟೆಲು ಕೂಡ ತಿಂಡಿ ತೀರ್ಥಗಳ ಪಟ್ಟಿಯನ್ನು ಇಂಗ್ಲಿಷ್‌ನಲ್ಲಿ ಮುದ್ರಿಸಿ ಕೊಡುತ್ತಿವೆ. ನಮ್ಮ ಮೈಲಿ ಕಲ್ಲುಗಳ ಮೇಲಿನ ಕನ್ನಡ ಅಳಿಸಿಹೋಗುತ್ತಿದೆ. ಹೊಸದಾಗಿ ಮನೆ ಕಟ್ಟಿದವರು ಅದಕ್ಕೊಂದು ಹೆಸರಿಟ್ಟು ಶಿಲಾಫಲಕವನ್ನು ಇಂಗ್ಲಿಷಿನಲ್ಲಿ ಕೆತ್ತಿಸುತ್ತಿದ್ದಾರೆ. ಹೊಸದೊಂದು ತಲೆಮಾರೆ ಕನ್ನಡಕ್ಕೆ ಬೆನ್ನ ತಿರುಗಿಸಿದೆ. ಭಾಷೆಯೊಂದು ನಶಿಸುವಾಗ ಅಬ್ಬರ ಜಾಸ್ತಿಯಂತೆ. ಅದರ ಎಲ್ಲಾ ಸೂಚನೆ ಕಾಣುತ್ತಿರುವಾಗ ಸರಕಾರದಿಂದಲೂ ಕಾಟಾಚಾರದ ಕಾರ್ಯಕ್ರಮಗಳು ಜರುಗುತ್ತಿವೆ. ಆದರೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳ ಆಯ್ಕೆ ವಿಷಯದಲ್ಲಿ ಅಸಡ್ಡೆ ನಡೆದಿಲ್ಲ. ನಿಜಕ್ಕೂ ಯೋಗ್ಯ ಪ್ರತಿಭೆಗಳು ಪ್ರಶಸ್ತಿ ಪಡೆದಿವೆ. ಈ ಹಿಂದೆ ಬಿಜೆಪಿ ಸರಕಾರವಿದ್ದಾಗ ರಾಜ್ಯೋತ್ಸವ ಪ್ರಶಸ್ತಿಗಳ ಕತೆ ಏನಾಗಿತ್ತೆಂದರೆ ಅತ್ತ ಶಿವಮೊಗ್ಗದ ಯಡಿಯೂರಪ್ಪನ ಶಿಕ್ಷಣ ಸಂಸ್ಥೆಗಳಲ್ಲಿ ಸಣ್ಣಪುಟ್ಟ ಮಕ್ಕಳ ನಾಟಕ ಮಾಡಿಸುವ ತುಂಟ ಹುಡುಗನೊಬ್ಬ ಯಡಿಯೂರಪ್ಪನ ಮಗಳಿಗೆ "ಅಕ್ಕಾ ನನಿಗೊಂದು ರಾಜ್ಯೋತ್ಸವ ಪ್ರಶಸ್ತಿ ಕೊಡಸಕ್ಕ" ಎಂದನಂತೆ. ಪುಟಾಣಿ ಕೊಂಬಿನ ಹೋರಿಯಂತಿದ್ದ ಆ ಹುಡುಗನನ್ನು ದುರುಗುಟ್ಟಿ ನೋಡಿದ ಯಡ್ಡಿ ಮಗಳು, ನಕ್ಕು ಸುಮ್ಮನಾದಳಂತೆ. ಆದರೆ ಮೂರು ದಿನ ಬಿಟ್ಟು ಪತ್ರಿಕೆ ನೋಡಿದಾಗ, ಹುಡುಗನಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟವಾಗಿತ್ತು. ಈ ರೂಪದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಬಿಕರಿಯಾಗುತ್ತಿದ್ದುದನ್ನು ನೋಡಿದ ಕಾಂಗ್ರೆಸ್ ಸರಕಾರ ಯೋಗ್ಯರನ್ನು ಸರಿಯಾದ ಮಾನದಂಡದಿಂದ ಆಳೆದು ಪ್ರಶಸ್ತಿ ಕೊಡತೊಡಗಿದ ಮೇಲೆ, ಶಿವಮೊಗ್ಗದ ಅದ್ಭುತ ಶಿಲ್ಪ ಕಲಾವಿದ ಕಾಶಿಗೆ ರಾಜ್ಯೋತ್ಸವ ಪ್ರಶಸ್ತಿ ಸಿಗುವಂತಾಯ್ತುಂತಲ್ಲಾ, ಥೂತ್ತೇರಿ!!! ■

ಮಂಡ್ಯ: ನಟೋರಿಯಸ್ ಕೆಬ್ಬಳ್ಳಿ ಆನಂದನ ಮತ್ತೊಂದು 'ಕೋಟಿಲೂಟಿ'

ಹುಟ್ಟು-ಗುಣ ಸುಟ್ಟರೂ ಹೋಗಲ್ಲ ಅಂತಾರಲ್ಲ ಹಾಗೇ ಜೈಲು ಪಾಲಾಗಿ ಜಾಮೀನಿನ ಮೇಲೆ ಹೊರ ಬಂದರೂ ನಟೋರಿಯಸ್ ಕೆಬ್ಬಳ್ಳಿ ಆನಂದ ಎಂಬ ದಗಲುಬಾಜಿಯ ವಂಚಕ ಬುದ್ಧಿಯಿನ್ನೂ ನೆಟ್ಟಗಾಗುವ ಲಕ್ಷಣ ಕಾಣುತ್ತಿಲ್ಲ. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ 5 ಕೋಟಿ ಮತ್ತು ರಾಮನಗರ-ಚನ್ನಪಟ್ಟಣ ಪ್ರಾಧಿಕಾರದಿಂದ 10 ಕೋಟಿ ಒಟ್ಟು ಅನಾಮತ್ತು ಹದಿನೈದು ಕೋಟಿ ಠೇವಣಿ ಹಣವನ್ನೇ ಲಪಟಾಯಿಸಿ ಸಿಕ್ಕಿಬಿದ್ದು ಒಂದೂವರೆ ವರ್ಷ ಜೈಲು ಪಾಲಾಗಿದ್ದ ಕೆಬ್ಬಳ್ಳಿ ಆನಂದ ಇದೀಗ ಮತ್ತೆ ಅಂತಹದ್ದೇ ಡೀಲಿಗೆ ಕೈಹಾಕಿದ್ದಾನೆ. ಮುಂಬೈ ಮೂಲದ ಅಲ್ ಖುರೇಷಿ ಎಕ್ಸ್‌ಪೋರ್ಟ್ ಎಂಬ ಕಂಪನಿಯ ಕೋಟಿ ಕೋಟಿ ಹಣದ ಮೇಲೆ ಕಣ್ಣು



ಸಂದೀಪ್ ಕುಮಾರ್

ಹಾಕಿದ ಕೆಬ್ಬಳ್ಳಿ ಆನಂದ ನಕಲಿ ದಾಖಲೆಗಳನ್ನು ಸೃಷ್ಟಿಸಿ ತನ್ನ ಶಿಷ್ಯರ ಜೊತೆ ಸೇರಿ 6-7 ಕೋಟಿ ಹಣ ಲಪಟಾಯಿಸಲು ಪಕ್ಕಾ ಸ್ಕೆಚ್ ಹಾಕಿದ್ದ. ಎಲ್ಲವೂ ಆತ ಅಂದುಕೊಂಡಂತೆಯೇ ನಡೆದಿದ್ದರೆ ಇನ್ನು ಕೆಲವೇ ದಿನಗಳಲ್ಲಿ ಕೆಬ್ಬಳ್ಳಿ ಆನಂದನ ಅಕೌಂಟ್‌ಗೆ ಎಕ್ಸ್‌ಪೋರ್ಟ್ ಕಂಪನಿಯ ಕೋಟಿ ಹಣ ಬಂದು ಬೀಳುತ್ತಿತ್ತು. ಆದರೆ ಅಲ್‌ಖುರೇಷಿ ಕಂಪನಿ ಸಕಾಲಕ್ಕೆ ಎಚ್ಚೆತ್ತುಕೊಂಡಿದ್ದರಿಂದ ಚೋರಗುರು ಕೆಬ್ಬಳ್ಳಿ ಆನಂದ ಮತ್ತವನ ಚಾಂಡಾಳ ಶಿಷ್ಯರು ಮಂಡ್ಯ ಪೊಲೀಸರಿಗೆ ತಗಲಾಕಿ ಕೊಂಡಿದ್ದಾರೆ. ಸದ್ಯ ಶಿಷ್ಯರು ಕಂಬಿ ಎಣಿಕೆಯಲ್ಲಿ ಬ್ಯುಸಿಯಾಗಿದ್ದರೆ, ಗುರು ಕೆಬ್ಬಳ್ಳಿ ಆನಂದ ಊರು ಬಿಟ್ಟಿದ್ದಾನೆ.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಾರ್ವಜನಿಕರಿಗೆ ಸೇರಿದ್ದ 5 ಕೋಟಿ ರೂ. ಠೇವಣಿ ಹಣವನ್ನು ಆಗಿನ ಆಯುಕ್ತ ಶಿವರಾಂ ಜೊತೆ ಸೇರಿ ಮುಂಡಾಯಿಸಿದ ಪ್ರಕರಣದಲ್ಲಿ ತಗಲಾಕಿಕೊಂಡ ಕೆಬ್ಬಳ್ಳಿ ಆನಂದ ಬರೋಬ್ಬರಿ ಒಂದು ಮುಕ್ಕಾಲು ವರ್ಷ ಜೈಲಿನಲ್ಲಿದ್ದ. ಈಗ್ಗೆ ಒಂದು ವರ್ಷದ ಹಿಂದಷ್ಟೇ ಜಾಮೀನಿನ ಮೇಲೆ ಜೈಲಿಂದ ಬಿಡುಗಡೆಯಾಗಿ ಬಂದ ಆನಂದ ಕೆಲ ದಿನ ಯಾರ ಕಣ್ಣಿಗೂ ಕಾಣಿಸಿಕೊಂಡಿರಲಿಲ್ಲ. ಕಳೆದ ಜಿ.ಪಂ. ಚುನಾವಣೆಯ ಸಂದರ್ಭದಲ್ಲಿ ತನ್ನ ಹೆಂಡತಿ ರಾಣಿಗೆ ಹೊಳಲು ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಡಬೇಕೆಂದು ತನ್ನ ಗುರು ಅಂಬರೀಶ್‌ಗೆ ಹೇಳಿದ್ದ. ಯಾವಾಗ ಅಂಬಿ ಕೆಬ್ಬಳ್ಳಿ ಆನಂದನ ಹೆಂಡತಿಗೆ ಕೈ ಕೊಟ್ಟರೋ ಕೆರಳಿದ ಆನಂದ ಅಂಬಿ ವಿರುದ್ಧ ಬಾಯಿಗೆ ಬಂದಂತೆ ಬೈದು ಸಖತ್ ಸುದ್ದಿಯಾಗಿದ್ದ. ಚುನಾವಣೆಯಲ್ಲಿ ಕೋಟಿ ಹಣ ಹರಿಸಿದರೂ ಕೆಬ್ಬಳ್ಳಿ ಆನಂದನ ಹೆಂಡತಿ ರಾಣಿ ಸೋತುಹೋದಳು. ಡಿ.ಕೆ.ಶಿವಕುಮಾರ್ ಮಂಡ್ಯ ಜಿಲ್ಲೆ ಉಸ್ತುವಾರಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ದಿನ ಸ್ಟೇಜ್ ಮೇಲೆ ಹತ್ತಿ ಮಿಂಚಿದ್ದ ಕೆಬ್ಬಳ್ಳಿ ಆನಂದ, ಈಗ ಮತ್ತೆ ಸುದ್ದಿಯಾಗಿದ್ದಾನೆ.

ಲೂಟಿಗೆ ಕೆಬ್ಬಳ್ಳಿ ಆನಂದನ ಸ್ಕೆಚ್

ವಂಚನೆ ವಿದ್ಯೆಯಲ್ಲಿ ಗೋಲ್ಡ್ ಮೆಡಲಿಸ್ಟ್ ಆಗಿರುವ ಕೆಬ್ಬಳ್ಳಿ ಆನಂದ ಮುಂಬೈ ಮೂಲದ ಅಲ್ ಖುರೇಷಿ ಎಕ್ಸ್‌ಪೋರ್ಟ್ ಕಂಪನಿಯಲ್ಲಿ ಕೆಲಸ ಮಾಡಿ ಬಂದಿದ್ದ ತನ್ನ ಶಿಷ್ಯ ವಿನಯ್ ಮೂಲಕ ಅವರ ಹಣದ ವ್ಯವಹಾರದ ಸಂಪೂರ್ಣ ಮಾಹಿತಿ ಪಡೆದಿದ್ದ. ಕೆಬ್ಬಳ್ಳಿ ಆನಂದನ ಕಾರು ಚಾಲಕನಾಗಿದ್ದ ವಿನಯ್, ಖುರೇಷಿ ಕಂಪನಿಯ ಮಾಲೀಕರಾದ ಮಹಮದ್ ಯಾಕುಬ್ ಖುರೇಷಿ ಮತ್ತು ಶಬೀರ್ ಖುರೇಷಿ ಮಾಡುವ ಎಕ್ಸ್‌ಪೋರ್ಟ್ ವ್ಯವಹಾರ, ಐಸಿಐಸಿಐ ಬ್ಯಾಂಕ್‌ನಲ್ಲಿರುವ ಕೋಟ್ಯಾಂತರ ಹಣಕಾಸಿನ ವಿವರದ ಬಗ್ಗೆ ಹೇಳಿದ್ದ. ಇದನ್ನು ಕೇಳಿದ ಕೆಬ್ಬಳ್ಳಿ ಆನಂದನ ತಲೆಯಲ್ಲಿ ಖುರೇಷಿ ಎಕ್ಸ್‌ಪೋರ್ಟ್ ಖಾತೆಯಿಂದ ಕೋಟಿಗಟ್ಟಲೆ ಹಣವನ್ನು ಹೇಗೆ ಗೆಬರಬಹುದೆಂದು ಆಲೋಚನೆ ಗಿರಕಿ ಹೊಡೆಯಲು ಶುರುಮಾಡಿತ್ತು.

ಹಣ ಲೂಟಿ ಮಾಡುವ ಯೋಜನೆ ಸಿದ್ಧಪಡಿಸಿದ ಕೆಬ್ಬಳ್ಳಿ ಆನಂದ ಅದಕ್ಕಾಗಿ ವಿನಯ್, ಆತನ ಸಹೋದರ ವಿಜಯ್ ಹಾಗೂ ಪ್ರವೀಣ್ ಎಂಬುವವರನ್ನು ಸೆಟ್ ಮಾಡಿದ. ಈ ಪ್ರವೀಣ್ ಎಂಬಾತ ಕೆಬ್ಬಳ್ಳಿ ಆನಂದನಿಗೆ ದೂರದ ಸಂಬಂಧಿಯಾಗಬೇಕು. ಅಲ್ಲದೆ ಪ್ರವೀಣ್‌ನ ಹೆಂಡತಿ ದಿವ್ಯಶ್ರೀ ಮಂಡ್ಯದ ಷುಗರ್ ಫ್ಯಾಕ್ಟರಿ ಸರ್ಕಲ್‌ನಲ್ಲಿರುವ ಐಸಿಐಸಿಐ ಬ್ಯಾಂಕ್‌ನಲ್ಲಿ ಕ್ಯಾಷಿಯರ್ ಕೂಡಾ ಹೌದು. ಪ್ರವೀಣ್‌ನನ್ನು ಬಳಸಿಕೊಂಡು ಖುರೇಷಿ ಎಕ್ಸ್‌ಪೋರ್ಟ್ಸ್‌ನ ಹಣಕಾಸು, ಬ್ಯಾಂಕ್ ಖಾತೆ ನಂಬರ್ ಇನ್ನಿತರ ಮಾಹಿತಿಗಳನ್ನು ಕಲೆ ಹಾಕಿದ ಕೆಬ್ಬಳ್ಳಿ ಆನಂದ ಹಣ ದೋಚಲು ಅಂತಿಮ ಕಾರ್ಯಾಚರಣೆಗೆ ಮುಹೂರ್ತವಿಟ್ಟಿದ್ದ.


ಅದರಂತೆ ಕಾರ್ಯಾಚರಣೆಯ ಮೊದಲ ಭಾಗವಾಗಿ ಮಂಡ್ಯದ ಐಸಿಐಸಿಐ ಬ್ಯಾಂಕ್‌ನಲ್ಲಿ ಖುರೇಷಿ ಎಕ್ಸ್‌ಪೋರ್ಟ್ ಹೆಸರಿನಲ್ಲಿ ಹೊಸ ಅಕೌಂಟ್ ತೆರೆಯಬೇಕಿತ್ತು. ಅದಕ್ಕಾಗಿ ಕಳೆದ ಜುಲೈ 8ರಂದು ಮುಂಬೈ ಮೂಲದ ಅಲ್ ಖುರೇಷಿ ಕಂಪನಿಯ ಪಾಲುದಾರರೆಂದು ಹೇಳಿಕೊಂಡು ಮಂಡ್ಯದ ಐಸಿಐಸಿಐ ಬ್ಯಾಂಕ್‌ಗೆ ಕೆಬ್ಬಳ್ಳಿ ಆನಂದನ ಶಿಷ್ಯರಾದ ವಿಜಯ್ ಮತ್ತು ವಿನಯ್ ಹೋಗಿದ್ದಾರೆ. ಬ್ಯಾಂಕಿನ ಮ್ಯಾನೇಜರ್ ಮಧು ಹಾಗೂ ವ್ಯಾಲಿವ್ಯೂ ಬ್ಯಾಂಕರ್ ವಿಲ್ಫ್ರೆಡ್ ಗೂಮ್ಸ್ ಬಳಿ ಹೋದ ವಿಜಯ್ ಮತ್ತು ವಿನಯ್ ನಾವು ಅಲ್ ಖುರೇಷಿ ಎಕ್ಸ್‌ಪೋರ್ಟ್‌ನ ಪಾಲುದಾರರಾದ ಮಹಮದ್ ಯಾಕುಬ್ ಖುರೇಷಿ ಮತ್ತು ಶಬೀರ್ ಖುರೇಷಿ ಎಂದು ಪರಿಚಯ ಮಾಡಿಕೊಂಡಿದ್ದಾರೆ. ನಂತರ ಇಲ್ಲಿ ನಾವೊಂದು ಕಂಪನಿ ತೆರೆಯಬೇಕೆಂದುಕೊಂಡಿದ್ದೇವೆ. ಹಣಕಾಸಿನ ವರ್ಗಾವಣೆಗೆ ಅನುಕೂಲವಾಗುವಂತೆ ತಮ್ಮ ಬ್ಯಾಂಕ್‌ನಲ್ಲಿ ಅಕೌಂಟ್ ತೆರೆಯುವುದಾಗಿ ಹೇಳಿ ಮ್ಯಾನೇಜರ್ ಮಧುವನ್ನು ನಂಬಿಸಿದ್ದಾರೆ. ಖುರೇಷಿ ಕಂಪನಿ ಹಣಕಾಸಿನ ವ್ಯವಹಾರ ತಿಳಿದಿದ್ದ ಮ್ಯಾನೇಜರ್ ಮಧು ಕೋಟ್ಯಾಂತರ ರೂ. ಠೇವಣಿ ಇಡುತ್ತಾರೆಂಬ ಖುಷಿಯಲ್ಲಿ ಹೊಸದಾಗಿ ಅಕೌಂಟ್ ತೆರೆದಿದ್ದಾರೆ. ಅಲ್ಲದೆ ಮುಂಬೈನಲ್ಲಿ ತೆರೆಯಲಾಗಿರುವ ಖಾತೆ ಸಂಖ್ಯೆ 000466000685ಗೆ ಸಂಬಂಧಿಸಿದಂತೆ ಎಸ್‌ಎಂಎಸ್ ಅಲರ್ಟ್ ಮೊಬೈಲ್ ನಂಬರನ್ನು 8147975845 ಆಗಿರುವಂತೆ ಬದಲಾಯಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದಾರೆ.


ಇದಾದ ನಂತರ ಮತ್ತೆ ಆಗಸ್ಟ್ 18ರಂದು ಬ್ಯಾಂಕಿಗೆ ಹೋದ ವಿನಯ್ ಮತ್ತು ವಿಜಯ್ ಅಲ್ ಖುರೇಷಿ ಎಕ್ಸ್‌ಪೋರ್ಟ್‌ನ ಐಸಿಐಸಿಐ ಖಾತೆ ಸಂಖ್ಯೆ 000451000450ಕ್ಕೆ ಸಂಬಂಧಿಸಿದಂತೆ ಚೆಕ್ ಬುಕ್ ನೀಡಬೇಕೆಂದು ಅರ್ಜಿ ಸಲ್ಲಿಸಿದ್ದ ಅವರಿಗೆ ಆಗಸ್ಟ್ 30ರಂದು ಚೆಕ್‌ಬುಕ್ ಕೂಡಾ ಲಭಿಸಿತ್ತು. ಇದೆಲ್ಲಕ್ಕೂ ಕೆಬ್ಬಳ್ಳಿ ಆನಂದನದ್ದೇ ಡೈರೆಕ್ಷನ್.


ಚೆಕ್‌ಬುಕ್ ಪಡೆದುಕೊಂಡ ವಿನಯ್ ಮತ್ತು ವಿಜಯ್ ಚೆಕ್ ನಂ. 027601ರಿಂದ 1.25 ಕೋಟಿ ರೂ.ಗಳನ್ನು ಆರ್‌ಇಐ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಸಂಬಂಧಿಸಿದಂತೆ ಮೈಸೂರಿನ ಕಾಳಿದಾಸ ರಸ್ತೆಯ ಐಸಿಐಸಿಐ ಖಾತೆ ಸಂಖ್ಯೆ 015205008846ಗೆ ವರ್ಗಾವಣೆ ಮಾಡುವಂತೆ ಮತ್ತು ಚೆಕ್ ನಂ. 027602 ರಿಂದ 1.50 ಕೋಟಿ ರೂ.ಗಳನ್ನು ಎಸ್.ಕೆ.ಸ್ಟೀಲ್ ಟ್ರೇಡರ್ಸ್‌ಗೆ ಮೈಸೂರಿನ ಐಸಿಐಸಿಐ ಬ್ಯಾಂಕ್ ಕಾಳಿದಾಸ ರಸ್ತೆ ಶಾಖೆಯ ಖಾತೆ ಸಂಖ್ಯೆ 015205500417ಗೆ ವರ್ಗಾವಣೆ ಮಾಡುವಂತೆಯೂ ಚೆಕ್‌ಗಳನ್ನು ಗೀಚಿ ಕೊಟ್ಟಿದ್ದರು.


ಅದರಂತೆ ಮೈಸೂರಿನ ಎರಡೂ ಖಾತೆಗಳಿಗೆ ಕ್ರಮವಾಗಿ 1.50 ಕೋಟಿ ಮತ್ತು 1.25 ಕೋಟಿ ಹಣ ವರ್ಗಾವಣೆಯಾಗಿತ್ತು. ಅದೇ ದಿನ ವಿಜಯ್, ವಿನಯ್ ಐಸಿಐಸಿಐ ಬ್ಯಾಂಕ್‌ನಲ್ಲಿ ಚೆಕ್ ನಂ. 027605 ರಿಂದ ಸೆಲ್ಫ್ ಎಂದು ನಮೂದಿಸಿ 8 ಲಕ್ಷ ಹಣವನ್ನು ಡ್ರಾ ಮಾಡಿಕೊಂಡಿದ್ದರು. ಈ ಆಟದಲ್ಲಿ ಪ್ರವೀಣನ ಹೆಂಡತಿ ಕ್ಯಾಷಿಯರ್ ಎಂ.ಜೆ.ದಿವ್ಯಶ್ರೀ ಕೂಡಾ ಶಾಮೀಲಾಗಿದ್ದರಿಂದ ಹಣ ಪಡೆಯಲು ಅವರಿಗೆ ಹೆಚ್ಚೇನು ಶ್ರಮವಾಗಲಿಲ್ಲ. ಅವರು ಹಣ ಡ್ರಾ ಮಾಡಿಕೊಂಡು ಹೋದ ಸ್ವಲ್ಪ ಸಮಯದಲ್ಲೇ 00451000450 ಅಕೌಂಟ್ ನಂಬರ್ ಹೊಂದಿದ್ದ ಶಬೀರ್ ಖುರೇಷಿಗೆ ಮೆಸೇಜ್ ಹೋಯಿತು. ಚೆಕ್ ನಂ. 027601 ರಿಂದ 1.25 ಕೋಟಿ, ಚೆಕ್ ನಂ. 027602ರಿಂದ 1.50 ಕೋಟಿ ಹಾಗೂ ಚೆಕ್ ನಂ. 027601ರಿಂದ 8 ಲಕ್ಷ ನಗದು ಹಣ ಡ್ರಾ ಆಗಿರುವುದನ್ನು ಕಂಡ ಶಬೀರ್ ಖುರೇಷಿ ಕೂಡಲೇ ಎಚ್ಚೆತ್ತುಕೊಂಡು ಐಸಿಐಸಿಐ ಬ್ಯಾಂಕ್‌ನ ಅಧಿಕಾರಿಗಳಿಗೆ ವಿಷಯ ತಿಳಿಸಿದರು. ಪರಿಶೀಲನೆ ನಡೆಸಿದಾಗ ಹಣ ಮಂಡ್ಯದಲ್ಲಿ ಡ್ರಾ ಆಗಿರುವುದು ಮುಂಬೈನ ಬ್ಯಾಂಕ್ ಅಧಿಕಾರಿಗಳಿಗೆ ಗೊತ್ತಾಯಿತು.

ಅವರು ಬ್ಯಾಂಕ್‌ನ ಮ್ಯಾನೇಜರ್ ಮಧುಗೆ ಫೋನ್ ಮಾಡಿ ಹಣದ ವರ್ಗಾವಣೆ ತಡೆಯುವಂತೆ ತಿಳಿಸಿದ್ದರು. ಅದರಂತೆ ಮ್ಯಾನೇಜರ್ ಮಧು, ವಿಜಯ್ ಮತ್ತು ವಿನಯ್ ವರ್ಗಾವಣೆ ಮಾಡಲು ಕೋರಿದ್ದ ಮೈಸೂರಿನ ಐಸಿಐಸಿಐ ಬ್ಯಾಂಕ್‌ನ ಖಾತೆಗಳ ಸಂಖ್ಯೆಯನ್ನು ಬ್ಲಾಕ್ ಮಾಡಿಸಿದ್ದರು. ಆದರೆ ಅಷ್ಟರ ವೇಳೆಗಾಗಲೇ 015205008846 ಖಾತೆಯಿಂದ ಚೆಕ್ ಮೂಲಕ ಸೆಲ್ಫ್ ಎಂದು ನಮೂದಿಸಿ 45,000 ರೂ. ಹಾಗೂ 015205500417 ಖಾತೆಯಿಂದ ಎಟಿಎಂ ಮೂಲಕ 22,500 ರೂ. ಹಣವನ್ನು ಡ್ರಾ ಮಾಡಿದ್ದರು. ಅಲ್ಲಿಗೆ ಒಟ್ಟಾಗಿ 8,67,500 ರೂ. ಹಣ ವಂಚಕ ಕೆಬ್ಬಳ್ಳಿ ಆನಂದ ಮತ್ತವನ ಶಿಷ್ಯ ಸೇರಿತ್ತು. ಈ ಮಧ್ಯೆ ಆರ್‌ಟಿಜಿಎಸ್ ಮೂಲಕ ಕೋಟಿ ಹಣವನ್ನು ಮತ್ತೊಂದು ಕಂಪನಿಗೆ ವರ್ಗಾ ಮಾಡುವಂತೆ ಮತ್ತೊಂದು ಚೆಕ್ ಅನ್ನು ಈ ವ ಜೋಡಿ ಬ್ಯಾಂಕ್‌ಗೆ ಸಲ್ಲಿಸಿತ್ತು. ಆದರೆ ಅಷ್ಟರಲ್ಲಾ ಅಲ್ ಖುರೇಷಿ ಎಕ್ಸ್‌ಪೋರ್ಟ್‌ನ ಶಬೀರ್ ಖು ಎಚ್ಚೆತ್ತು ಬ್ಯಾಂಕ್‌ನ ಅಧಿಕಾರಿಗಳಿಗೆ ತಿಳಿಸಿದ್ದರಿಂದ ಕೋಟಿಗೂ ಹೆಚ್ಚು ಹಣ ಧೂರ್ತ, ವಂಚಕ ಆನಂದ ಅಂಡ್ ಟೀಂ ಪಾಲಾಗುವುದು ತಪ್ಪಿದೆ.









ಮೊಬೈಲ್ ಸ್ವಿಚ್ಡ್ ಆಫ್

ತಕ್ಷಣ ಅಲರ್ಟ್ ಆದ ಬ್ಯಾಂಕ್ ಮ್ಯಾನೇಜರ್ ವ ವಿಜಯ್ ಮತ್ತು ವಿನಯ್ ಬ್ಯಾಂಕಿಗೆ ನೀಡಿದ್ದ ಮೊ ನಂ. 8147975045ಗೆ ಕರೆ ಮಾಡಿದಾಗ ಅದು ಆಫ್ ಆಗಿತ್ತು. ಮತ್ತೊಂದು ಮೊಬೈಲ್ ಸಂಖ್ಯೆ 81 73276 ಕರೆ ಮಾಡಿದಾಗ, ಆ ಕರೆಯನ್ನು ವ್ಯಕ್ತಿ ಸ್ವೀಕರಿಸಿದ್ದಾನೆ. ಆಗ ಮ್ಯಾನೇಜರ್ ಮಧು ನಿ ಒಂದು ಸಹಿ ಪಡೆಯಬೇಕಿದೆ, ಎಲ್ಲಿದ್ದೀರಿ ಎಂದು ಕೇಳ ಆ ವ್ಯಕ್ತಿ ತಾನು ಗೆಜ್ಜಲಗೆರೆಯಲ್ಲಿರುವುದಾಗಿ ಹೇ ಬ್ಯಾಂಕ್‌ನವರು ಅಲ್ಲಿಗೆ ತೆರಳಿ ಆ ನಂಬರ್‌ಗೆ ಫೋನಾ ದರೆ ಅದು ಕೂಡಾ ಸ್ವಿಚ್ಡ್ ಆಫ್ ಆಗಿತ್ತು. ಮ್ಯಾನೇಜರ್ ಮಧುಗೆ ಇದೊಂದು ಪಕ್ಕಾ ಮೋಸ ಜಾಲ ಎಂಬುದು ಗೊತ್ತಾಗಿದೆ. ಅಲ್ಲಿಂದ ಬಂದ ಬ್ಯಾಂಕಿನ ಸಿಸಿ ಟಿವಿ ಪರೀಕ್ಷಿಸಿದ್ದಾರೆ. ವಿನಯ್ ಅಕ ತೆರೆಯುವಾಗ ನೀಡಿರುವ ಭಾವಚಿತ್ರಕ್ಕೂ ಸಿಸಿ ಟಿವಿ ಸೆರೆಯಾಗಿರುವ ಭಾವಚಿತ್ರಕ್ಕೂ ವ್ಯತ್ಯಾಸವಿರುವುದು ಬಂದಿದೆ. ಇದಾದ ನಂತರ ಮ್ಯಾನೇಜರ್ ಬ್ಯಾಂಕಿನ ಹಿ ಅಧಿಕಾರಿಗಳಿಗೆ ಎಲ್ಲಾ ವಿಚಾರ ತಿಳಿಸಿ, ದಾಖಲೆ ಸ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ


ಡಿವೈಎಸ್ಪಿ ಚಂದ್ರಶೇಖರ್‌ರ ಮಾರ್ಗದರ್ಶ ಪ್ರಕರಣ ಕೈಗೆತ್ತಿಕೊಂಡ ಪೂರ್ವ ಠಾಣೆಯ ಶಿವರುದ್ರರವರು ಮೈಸೂರಿನಲ್ಲಿದ್ದ ವಿಜಯ್, ವಿ ಹಾಗೂ ಐಸಿಐಸಿಐ ಕ್ಯಾಷಿಯರ್ ದಿವ್ಯಶ್ರೀ ಪ್ರವೀಣ್‌ನನ್ನು ಬಂಧಿಸಿ ಅವರಿಂದ 3.50 ಲಕ್ಷ ನ ಹಾಗೂ ಡಸ್ಟರ್ ಕಾರನ್ನು ವಶಪಡಿಸಿಕೊಂಡಿದ್ದಾರೆ. ಪೊ ಆತಿಥ್ಯ ಶುರುವಾದ ನಂತರವೇ ಇದೆಲ್ಲಾ ಹೈಡ್ರಾ ಹಿಂದಿನ ಸೂತ್ರದಾರ ಕೆಬ್ಬಳ್ಳಿ ಆನಂದ್ ಎ ನಟೋರಿಯಸ್ ವಂಚಕ ಅನ್ನೋ ಸತ್ಯವನ್ನು ಒಪ್ಪಿಕೊಂಡದ್ದು. ಇವರು ಅರೆಸ್ಟ್ ಆದದ್ದು ಗೊ ತ್ತಿದ್ದಂತೆಯೇ ಕೆಬ್ಬಳ್ಳಿ ಆನಂದ ಎಸ್ಕೇಪ್ ಆಗಿದ್ದಾನೆ. ಒ ಈ ಕೆಬ್ಬಳ್ಳಿ ಆನಂದ್ ಎನ್ನುವ ವಂಚಕ ಇನ್ನೂ ಅ ಜನರಿಗೆ ನಾಮ ತೀಡುವುದು ಬಾಕಿ ಇದೆಯೋ ಗೊ ಪೊಲೀಸರು ಆತನಿಗೆ ತಕ್ಕ ಶಾಸ್ತಿ ಮಾಡದಿದ್ದರೆ ಮ ಮಾನವನ್ನು ಈತ ಮತ್ತೆಮತ್ತೆ ಹರಾಜು ಹಾಕು ಇರುತ್ತಾನೆ.


■ ವರದಿಗ


ಆನಂದನ ಅಟ್ಟಹಾಸ


ತನ್ನ ಸ್ನೇಹಿತ ನಾಗಲಿಂಗಸ್ವಾಮಿಯೊಂದಿಗೆ ಸೇರಿಕೊಂಡು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 5 ಕೋಟಿ ಹಣವನ್ನು ವಂಚಿಸಿದ್ದ ಕೆಬ್ಬಳ್ಳಿ ಆನಂದ ರಾಮನಗರ-ಚನ್ನಪಟ್ಟಣ ಪ್ರಾಧಿಕಾರದಲ್ಲೂ 10 ಕೋಟಿ ಹಣವನ್ನು ನುಂಗಿ ನೀರು ಕುಡಿದಿದ್ದ. ಈ ಎರಡು ಪ್ರಕರಣಗಳು ನಡೆದ ಸಂದರ್ಭದಲ್ಲಿ ಮಂಡ್ಯ ಡಿವೈಎಸ್ಪಿಯಾಗಿದ್ದ ಶೋಭಾರಾಣಿ ಬಿಗಿಯಾಗಿ ತನಿಖೆ ನಡೆಸಲೇ ಇಲ್ಲ. ಶೋಭಾರಾಣಿ ನಿಷ್ಪಕ್ಷಪಾತ ತನಿಖೆ ನಡೆಸಿದ್ದೇ ಆಗಿದ್ದರೆ ಕೆಬ್ಬಳ್ಳಿ ಆನಂದ ನುಂಗಿದ 15 ಕೋಟಿಗೂ ಹೆಚ್ಚು ಹಣ ಯಾರ ಯಾರ ಅಕೌಂಟ್‌ಗೆ ಹೋಗಿತ್ತು ಎಂಬುದು ತಿಳಿಯುತ್ತಿತ್ತು. ಆದರೆ ಡಿವೈಎಸ್ಪಿ ಶೋಭಾರಾಣಿ ಸಾರ್ವಜನಿಕ ಹಣ ಲೂಟಿ ಮಾಡಿದ ಈ ಪ್ರಕರಣ ಹಳ್ಳ ಹಿಡಿಯಲು ಕಾಣಿಕೆ ಸಲ್ಲಿಸಿ ವರ್ಗಾವಣೆಯಾಗಿ ಹೋದಳು. ಈ ಎರಡು ಪ್ರಕರಣಗಳಲ್ಲೂ ಸಿಬಿಐ ತನಿಖೆ ನಡೆದು, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಹೀಗೆ ವಂಚಿಸಿಯೇ ಮಾಡಿಕೊಂಡಿರುವ ಹಡಬೆ ಹಣದಲ್ಲಿ ಕೆಬ್ಬಳ್ಳಿ ಆನಂದ ಐಷಾರಾಮಿಯಾಗಿಯೇ ಜೀವನ ನಡೆಸುತ್ತಿದ್ದ. ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಕೆಬ್ಬಳ್ಳಿ ಆನಂದ ಜೈಲಿನಿಂದ ಬಂದ ಕೆಲ ದಿನಗಳಲ್ಲೇ ಮಂಡ್ಯದ ಕೆಲವು ಪತ್ರಕರ್ತರಿಗೆ ಗುರುರಾಜ ಕಾಂಟಿನೆಂಟಲ್‌ನಲ್ಲಿ ತನ್ನ ಹುಟ್ಟುಹಬ್ಬದ ನೆಪದಲ್ಲಿ ಭರ್ಜರಿ ಗುಂಡು-ತುಂಡಿನ ಪಾರ್ಟಿ ಕೊಟ್ಟಿದ್ದ. ಕೆಬ್ಬಳ್ಳಿ ಆನಂದ ವಂಚನೆಯಿಂದ ಸಂಪಾದಿಸಿದ್ದ ಹಣದಲ್ಲಿಯೇ ಕೆಲವು ಪತ್ರಕರ್ತರು ಭರ್ಜರಿಯಾಗೇ ಕುಡಿದು- ತಿಂದು ಆನಂದಣ್ಣ ಅಂತ ಬಿದ್ದು ಹೊರಳಾಡಿ ಬಂದಿದ್ದರು. ಹೀಗೆ ಯಾರ್‍ಯಾರನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಬೇಕು ಅಂತ ಕರಗತವಾಗಿರುವ ಆನಂದನಿಗೆ ಕೋಟಿಕೋಟಿ ವಂಚನೆಯ ಪ್ರಕರಣಗಳು ಪೆಟ್ಟಿ ಕೇಸುಗಳಿದ್ದಂತೆ ಸಲೀಸಾಗಿ ನಿಭಾಯಿಸಿಕೊಂಡು ಬಿಡುತ್ತಾನೆ. ಇಲ್ಲದೇ ಹೋಗಿದ್ದರೆ ಸಾರ್ವಜನಿಕರ ಠೇವಣಿ ಹಣಕ್ಕೇ ನಾಮ ತೀಡಿದ ಆಸಾಮಿ ಆಮೇಲೆ ರಾಜಕೀಯ ವೇದಿಕೆಗಳ ಮೇಲೆ ಘಟಾನುಘಟಿಗಳ ಜೊತೆ ಠಳಾಯಿಸಲು ಸಾಧ್ಯವಿತ್ತೆ? ಮಂಡ್ಯ ಪೊಲೀಸರು ಈಗಲಾದರು ಎಚ್ಚೆತ್ತುಕೊಂಡು ಕೆಬ್ಬಳ್ಳಿ ಆನಂದನಿಗೆ ಪರಪ್ಪನ ಅಗ್ರಹಾರದಲ್ಲಿ ಪರ್ಮನೆಂಟ್ ಸೈಟೊಂದನ್ನು ರಿಜಿಸ್ಟರ್ ಮಾಡಿಸಿಕೊಡಬೇಕಿದೆ. ಖಡಕ್ ಆಫೀಸರ್ ಅಂತಲೇ ಗುರುತಿಸಿಕೊಳ್ಳುವ ಸುಧೀರ್‌ಕುಮಾರ್ ರೆಡ್ಡಿ ಅಂತಹ ಸಾಹಸಕ್ಕೆ ಕೈಹಾಕುತ್ತಾರಾ ಕಾದುನೋಡಬೇಕು.


ಸಿಂಧನೂರು: ಶಾಸಕ ಹಂಪನಗೌಡನ ಫ್ಯೂಡಲ್ ರಾಜಕಾರಣ


ಹಂಪನಗೌಡ ಬಾದರ್ಲಿ


ಪಂಪನಗೌಡ ಬಾದರ್ಲಿ


ಬಸನಗೌಡ ಬಾದರ್ಲಿ


ಬಾಬುಗೌಡ ಬಾದರ್ಲಿ


ವೆಂಕಟರಾವ್ ನಾಡಗೌಡ

ರಾಯಚೂರು ಜಿಲ್ಲೆಯನ್ನೇ ಪ್ರಭಾವಿಸುವ ...ದೊಡ್ಡ ತಾಲ್ಲೂಕು ಕೇಂದ್ರವಾದ ಸಿಂಧನೂರು ಕ್ಷೇತ್ರದ ...ಕೋಟಿ ಸಂಪೂರ್ಣವಾಗಿ ಎಂಎಲ್‌ಎ ಹಂಪನಗೌಡ ...ದರ್ಲಿ ಕೈ ಸೇರಿದೆ. ಈ ಅಧಿಕಾರದ ಅಮಲಿನಿಂದ ...ಲ್ಲೂಕಿನ ಏಕಮೇವ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವ ...ಪನಗೌಡ, ಕ್ಷೇತ್ರದ ಪ್ರಮುಖ ರಾಜಕೀಯ ಹುದ್ದೆಗಳಲ್ಲಿ ... ಕುಟುಂಬ ಸದಸ್ಯರನ್ನೇ ಪ್ರತಿಷ್ಠಾಪಿಸುವ ಮೂಲಕ ...ಶಪಾರಂಪರ್ಯ ಆಡಳಿತ ಮುಂದುವರೆಸುತ್ತಿರುವುದು ...ಪ್ರಭುತ್ವದ ದುರಂತಗಳಲ್ಲೊಂದಾಗಿದೆ. ಹಣ ಮತ್ತು ...ತಿ ಬಲ ಬಳಸಿ ಇಡೀ ಕ್ಷೇತ್ರದಲ್ಲಿ ಇನ್ನೊಬ್ಬ ಎದುರಾಳಿ ...ದಂತೆ ನೋಡಿಕೊಳ್ಳುತ್ತಿರುವ ಈತನ ಫ್ಯೂಡಲ್ ...ನಸ್ಥಿತಿಯ ತೀರದ ಅಧಿಕಾರ ದಾಹಕ್ಕೆ ಕ್ಷೇತ್ರದ ಜನತೆ ...ಗುತ್ತಿದ್ದಾರೆ.

ಮೂಲತಃ ರಾಮಕೃಷ್ಣ ಹೆಗ್ಡೆಯ ಶಿಷ್ಯ ಎಂದು ...ಳಿಕೊಳ್ಳುವ ಹಂಪನಗೌಡ ಮೊದಲು ಜನತಾ ಪಕ್ಷದಿಂದ ...ಎಲ್‌ಎ ಆದವನು. ನಂತರ ಸಂಯುಕ್ತ ಜನತಾದಳಕ್ಕೆ ...ೀಗಿ ಅಲ್ಲಿಂದಲೂ ಮತ್ತೊಮ್ಮೆ ಎಂಎಲ್‌ಎ ಆದ. ...ತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ... ಒಮ್ಮೆ ಗೆದ್ದು ಮಗದೊಮ್ಮೆ ಸೋತಿದ್ದ. ಆದರೆ ...ದ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ನಾಲ್ಕನೇ ...ರಿಗೆ ಶಾಸಕನಾಗಿದ್ದಾನೆ. ಅಷ್ಟಕ್ಕೂ ಆತ ಗೆಲ್ಲಲು ...ಸಿದ ಪ್ಲ್ಯಾನ್ ಆದರೂ ಎಂತದ್ದು ಗೊತ್ತೆ? “ಈ ... ಗೆದ್ದರೆ ನಾಲ್ಕನೇ ಬಾರಿ ಶಾಸಕನಾದ ಸೀನಿಯಾರಿಟಿ ...ಗೆ ದಕ್ಕುತ್ತದೆ, ಹೇಗೂ ರಾಜ್ಯದಲ್ಲಿ ಕಾಂಗ್ರೆಸ್ ...ರ ಅಧಿಕಾರಕ್ಕೆ ಬರೋದು ಗ್ಯಾರಂಟಿ, ಹಾಗಾಗಿ ...ನಿಯಾರಿಟಿ ಪ್ರಕಾರ ನನಗೆ ಮಂತ್ರಿಗಿರಿ ಸಿಕ್ಕೇ ...ತ್ತೆ ಆಗ ಸಿಂಧನೂರು ಕ್ಷೇತ್ರವನ್ನು ಸಮಗ್ರವಾಗಿ ...ವೃದ್ಧಿ ಮಾಡುತ್ತೇನೆ, ಕ್ಷೇತ್ರದ ಅಭಿವೃದ್ಧಿಗಾಗಿ ...ೊಂದು ಬಾರಿ ಗೆಲ್ಲಿಸಿ” ಅಂತ ಜನರನ್ನು ಮರಳು ...ಡಿ ಗೆದ್ದುಬಂದ ಹಂಪನಗೌಡನ ಯೋಗ್ಯತೆಗೆ ...ವ ಸ್ಥಾನವಿರಲಿ, ಇಪ್ಪತ್ತುದಿನ ನಿಗಮ ಮಂಡಳಿ ...ಗ್ಯವೂ ದಕ್ಕಿಲ್ಲ. ರಾಯಚೂರು ಜಿಲ್ಲೆಯ ...ೇಟೂದದಿ ಮೊದಲು ಶಿವರಾಜ್ ತಂಗಡಗಿ ...ಂತ್ರಿಯಾದರೆ, ಈಗ ಆ ಸ್ಥಾನವನ್ನು ಈತನದೇ ...ದಾಯದ ಬಸವರಾಜ ರಾಯರೆಡ್ಡಿ ಅನುಭವಿಸುತ್ತಿದ್ದಾರೆ. ...ಂತ್ರಿಗಿರಿ ದಕ್ಕಲಿಲ್ಲ ಅಂತ ಹಂಪನಗೌಡನೇನೂ ...ಗುಷ್ಟೆಯ ಮುಖಹೊತ್ತು ಕೂರಲಿಲ್ಲ, ಸಚಿವನಾಗಿದ್ದರೆ ...ಲ್ಲಿ ಬಾಚಬೇಕೆಂದು ಲೆಕ್ಕಹಾಕಿಕೊಂಡಿದ್ದನೋ ...ಕ್ಕಿಂತಲೂ ದುಪ್ಪಟ್ಟು ಕಮಾಯಿ ಮಾಡಿಕೊಳ್ಳುವ ...ವಾಗಿ ತನ್ನನ್ನು ಗೆಲ್ಲಿಸಲು ಓಡಾಡಿದ ಕಾರ್ಯಕರ್ತರನ್ನೂ ...ಲೆಗುಂಪು ಮಾಡಿ ಆಯಕಟ್ಟಿನ ರಾಜಕೀಯ ಸ್ಥಾನಗಳಲ್ಲಿ ... ಕುಟುಂಬದ ಕುಡಿಗಳನ್ನು ಕೂರಿಸುವಲ್ಲಿ ...ಸಿಯಾಗಿದ್ದಾನೆ. ಅಷ್ಟೇ ಅಲ್ಲ ಎಲ್ಲೆಲ್ಲಿ ದುಡ್ಡು ...ಡೆಯಲಿಕ್ಕೆ ಸಾಧ್ಯವೋ ಅಲ್ಲೆಲ್ಲಾ ತನ್ನ ಪ್ರಭಾವ ಬಳಸಿ ...ೀರನಾಗುತ್ತಿದ್ದಾನೆ.

ಹಂಪನಗೌಡನ ತಂಗಿ ಮಗ ಬಸವನಗೌಡ ಬಾದರ್ಲಿ, ...ವ ಕೊಪ್ಪಳ ಜಿಲ್ಲೆಯ ರಾಜಕಾರಣದಲ್ಲಿ ಸಕ್ರಿಯವಾಗಿದ್ದಾನೆ. ... ಯಾವ ಮಟ್ಟಿಗೆಂದರೆ ಕಳೆದ ಲೋಕಸಭಾ ...ನಾವಣೆಯ ಸಂದರ್ಭದಲ್ಲಿ ಈತ ಎಂಪಿ ಟಿಕೆಟ್ ...ಂಕ್ಷಿಯಾಗಿ ಪ್ರಬಲ ಪೈಪೋಟಿ ನಡೆಸಿದ್ದ. ಟಿಕೆಟ್ ...ದ್ದರೂ ಆತ ಹಾಲಿ ಕೊಪ್ಪಳ ಜಿಲ್ಲಾ ಯೂತ್ ಕಾಂಗ್ರೆಸ್ ...ತಿಯ ಜಿಲ್ಲಾಧ್ಯಕ್ಷನಾಗಿದ್ದಾನೆ. ಬಹಳಷ್ಟು ಸರ್ಕಾರಿ ಗುತ್ತಿಗೆ ...ಗಳಲ್ಲಿ ಈತನಿಗೇ ಸಿಂಹಪಾಲು. ಸಣ್ಣ ಪುಟ್ಟದಕ್ಕೆಲ್ಲಾ ದುಡ್ಡು ...ಡುತ್ತಿರುವ ಈತ ಹೇಗಿದ್ದರೂ ಈ ಲೋಕಸಭೆಯಲ್ಲಿ ...ಗ್ರೆಸ್ ಸೋತಿರುವುದರಿಂದ ಮುಂದಿನ ಲೋಕಸಭಾ ...ನಾವಣೆಯ ಕೊಪ್ಪಳ ಎಂಪಿ ಟಿಕೆಟ್ ಮೇಲೆ ಕಣ್ಣಿಟ್ಟು ...ಂದಲೇ ಎಂಪಿಯಾಗುವ ತಾಲೀಮು ನಡೆಸುತ್ತಿದ್ದಾನೆ.

ಇನ್ನು ಹಂಪನಗೌಡನ ಅಣ್ಣನ ಮಗ ಬಾಬುಗೌಡ ಬಾದರ್ಲಿಯ ಹೆಸರೆತ್ತಿದ್ದರೆ ಸಾಕು ಜನರ ಮನಸ್ಸಿನಲ್ಲಿ ದೊಡ್ಡಗೂಂಡಾ ಎಂಬ ಬಹುಪರಾಕು ತಾನಾಗೇ ರಿಂಗಣಿಸಲು ಶುರುವಾಗುತ್ತದೆ. ಹಾಲಿ ಜಿ.ಪಂ. ಸದಸ್ಯನಾಗಿರುವ ಈತ ತನ್ನ ಚಿಕ್ಕಪ್ಪನ ವಿರುದ್ಧ ಮಾತನಾಡುವವರು ಯಾರೇ ಆಗಲಿ ಮುಗಿಸಿಬಿಡುತ್ತೇನೆ ಅಂತ ಓಪನ್ನಾಗಿ ಒದರಾಡುತ್ತಾ ಧಿಮಾಕು ತೋರಿಸುತ್ತಾನೆ. ಕಳೆದ ಕೆಲವು ವರ್ಷಗಳ ಹಿಂದೆ ಇದೇ ಕ್ಷೇತ್ರದಲ್ಲಿ ಶಾಸಕನಾಗಿದ್ದ ಮಾಜಿ ಎಂಎಲ್‌ಎ ಜೆಡಿಎಸ್‌ನ ವೆಂಕಟರಾವ್ ನಾಡಗೌಡನ ಮೇಲೆ ಹಲ್ಲೆಗೂ ಈತ ಯತ್ನಿಸಿದ್ದುಂಟು. ತನ್ನ ಸುತ್ತ ವಯಸ್ಸಿಗೆ ಬಂದ ಪಡ್ಡೆ ಹುಡುಗರ ಗ್ಯಾಂಗ್ ಕಟ್ಟಿಕೊಂಡಿರುವ ಈತನದು ವಸೂಲಿ ಕೆಲಸವೇ ಪ್ರಧಾನ ಕಾಯಕ.

ಇನ್ನು ಹಂಪನಗೌಡನ ಸಹೋದರ ಸಂಬಂಧಿ ಮಗ ಪಂಪನಗೌಡ ಬಾದರ್ಲಿ ಈಗಾಗಲೇ ಒಮ್ಮೆ ರಾಯಚೂರು ಜಿ.ಪಂ ಮಾಜಿ ಅಧ್ಯಕ್ಷನಾಗಿ ಅಧಿಕಾರದ ರುಚಿ ಅನುಭವಿಸಿದ್ದು ಕಳೆದ ಚುನಾವಣೆಯಲ್ಲಿ ಸೋತರೂ ಹಾಲಿ ರಾಯಚೂರು ಜಿಲ್ಲಾ ಸಹಕಾರ ಸಂಘಗಳ (ಆರ್‌ಡಿಸಿಸಿ) ಬ್ಯಾಂಕ್ ಅಧ್ಯಕ್ಷನಾಗಿ ಅಧಿಕಾರದ ರೇಸಿನಲ್ಲಿದ್ದಾನೆ. ಸಾಲ ಹಂಚಿಕೆ, ಸಾಲ ವಸೂಲಿ ಇದರಲ್ಲಿ ತಮ್ಮವರಿಗೆ ಬೇಕಾದ ರಿಯಾಯಿತಿ ನೀಡುತ್ತಾನೆ ಎನ್ನುವ ಆರೋಪ ಕೇಳಿಬಂದರೂ ಇದ್ಯಾವುದಕ್ಕೂ ಈತ ತಲೆಕೆಡಿಸಿಕೊಂಡಿಲ್ಲ. ಅದೇರೀತಿ ಮತ್ತೊಬ್ಬ ಸಹೋದರನ ಮಗ ರಾಜುಗೌಡ ಬಾದರ್ಲಿ ಯುವ ಕಾಂಗ್ರೆಸ್ ಮುಖಂಡ ಎಂದು ಪೋಜು ಕೊಡುತ್ತಾ ಪಡ್ಡೆ ಹೈಕಳಿಗೆ ಕಾಸು ಕೊಟ್ಟು ಕಟೌಟ್ ಹಾಕಿಸಿಕೊಂಡು ರಾಜಕೀಯಕ್ಕೆ ಎಂಟ್ರಿಕೊಟ್ಟಿದ್ದಾನೆ. ಸಿಂಧನೂರು ತುಂಬಾ ತನ್ನದೇ ಫೋಟೋವಿರುವ ದೊಡ್ಡದೊಡ್ಡ ಕಟೌಟ್ ಹಾಕಿಸಿಕೊಂಡಿರುವ ಈತ ತನ್ನ ತಂದೆಯಂತಿರುವ ಹಂಪನಗೌಡನ ನಂತರ ಸಿಂಧನೂರಿಗೆ ನಾನೇ ರಾಜ ಎಂದು ಕನಸು ಕಾಣುತ್ತಾ ಸಮಾಜ ಸುಧಾರಕನ ಥರ ಬಿಲ್ಡಪ್ ಕೊಡುತ್ತಿದ್ದಾನೆ. ಈ ಕುಟುಂಬದ ಕುಡಿಗಳೆಲ್ಲರಿಗೂ ಹಂಪನಗೌಡನದೇ ಕೃಪಾಕಟಾಕ್ಷ. ಸಿಂಧನೂರು, ರಾಯಚೂರು ಎಲ್ಲಾ ಕಡೆ ತನ್ನ ಕುಟುಂಬ ರಾಜಕಾರಣದ ಕೋಟೆ ಕಟ್ಟಿಕೊಂಡು ಮೆರೆಯುತ್ತಿದ್ದಾನೆ.

ಇಷ್ಟು ದೊಡ್ಡದಾಗಿ ತನ್ನ ಸಾಮ್ರಾಜ್ಯ ವಿಸ್ತರಿಸಿಕೊಂಡಿರುವ ಈತನದು ಮನೆಯೇ ಕಾರ್ಯಾಲಯ. ಹೆಸರಿಗೆ ಮಾತ್ರ ಸಿಂಧನೂರಿನಲ್ಲಿ ಶಾಸಕರ ಕಚೇರಿ ಇದ್ದರೂ ಯಾರಿಗೆ ಏನೇ ಆಗಬೇಕಾದರೂ ಈತನ ಮನೆಗೆ ಅಲೆಯಬೇಕಾದುದ್ದು ಸರ್ವೇಸಾಮಾನ್ಯ ಸಂಗತಿಯಾಗಿದೆ. ಎಂಎಲ್‌ಎ ಅಧಿಕಾರವಿರುವ ಯಾವುದೇ ಸಣ್ಣ ಸಾಲಗಳಿರಲಿ, ಸಣ್ಣಗುತ್ತಿಗೆ ಕಾಮಗಾರಿಗಳಿರಲಿ ಎಲ್ಲವೂ ಹಂಪನಗೌಡ ಹೇಳಿದ ಹಾಗೆಯೇ ನಡೆಯಬೇಕು.

ಇನ್ನು ಹಂಪನಗೌಡನ ನಿರ್ಲಕ್ಷ್ಯದಿಂದಾಗಿ ಅಭಿವೃದ್ಧಿ ಕೆಲಸಗಳಲ್ಲಿ ಸಿಂಧನೂರು ಸದಾ ಹಿಂದೆ ಉಳಿದಿದೆ. ಯಥೇಚ್ಛ ಭತ್ತ ಬೆಳೆಯುವ ತಾಲ್ಲೂಕುಗಳಲ್ಲಿ ಒಂದಾಗಿರುವ ಸಿಂಧನೂರು ಹೆಚ್ಚಿನ ಆದಾಯ ತರುವ ಕೇಂದ್ರವೂ ಹೌದು. ಆದರೆ ಸಿಂಧನೂರಿಗೆ ಯಾರೇ ಬಂದರೂ ಇಲ್ಲಿನ ಅವಸ್ಥೆ ಕಂಡು ಈ ಕ್ಷೇತ್ರದ ಎಂಎಲ್‌ಎ ಇದ್ದಾರೋ ಇಲ್ಲವೋ ಎಂದು ಪ್ರಶ್ನಿಸುವಂತೆ ಕ್ಷೇತ್ರ ಅವ್ಯವಸ್ಥೆಯ ಆಗರವಾಗಿದೆ. ಕ್ಷೇತ್ರದ ಬಹುತೇಕ ರಸ್ತೆಗಳು ಹದಗೆಟ್ಟಿದ್ದು ರಿಪೇರಿ ಕಾಣದೆ ಹಾಳಾಗಿವೆ. ಇಂತಹ ಹಾಳು ರಸ್ತೆಯಲ್ಲಿ ಒಮ್ಮೆ ಮಸ್ಕಿಯಿಂದ ಸಿಂಧನೂರಿನ ತಾಲ್ಲೂಕು ಆಸ್ಪತ್ರೆಗೆ ತುಂಬು ಬಸುರಿಯೊಬ್ಬರು ಬಸ್‌ನಲ್ಲಿ ಬರುತ್ತಿದ್ದಾಗಲೇ ಮಗುವಿಗೆ ಜನ್ಮಕೊಡಬೇಕಾದ ದುಸ್ಥಿತಿ ಬಂದೊದಗಿತ್ತು. ಈ ಕುರಿತು ಮಾಧ್ಯಮಗಳಲ್ಲಿ ವ್ಯಾಪಕವಾದ ಪ್ರಚಾರ, ಟೀಕೆಗಳು ಬಂದ ನಂತರವೇ ಈ ರಸ್ತೆ ಅಭಿವೃದ್ಧಿಗೆ ಶಾಸಕ ಮುಂದಾಗಿದ್ದು. ಇನ್ನು ಕೆಲವು ರಸ್ತೆಗಳಲ್ಲಿ ನೆಪ ಮಾತ್ರಕ್ಕೆ ದುರಸ್ಥಿ ತೋರಿಸಿ ಬಿಲ್ ಎತ್ತಲಾಗಿದೆ. ತಾಲ್ಲೂಕಿನ ಬಹಳಷ್ಟು ಹಳ್ಳಿಗಳಿಗೆ ಇನ್ನೂ ಬಸ್ ಸಂಪರ್ಕ ಇಲ್ಲ ಎಂದರೆ ನೀವು ನಂಬಲೇಬೇಕಿದೆ.

ತಾಲ್ಲೂಕಿನ ಬಹುತೇಕ ಪದವಿಪೂರ್ವ ಕಾಲೇಜುಗಳ ಪರಿಸ್ಥಿತಿ ತೀರಾಕೆಟ್ಟದಾಗಿದೆ. 2009ರಲ್ಲಿ ಸಿಂಧನೂರಿನ ಶಾಸಕನಾಗಿದ್ದ ವೆಂಕಟರಾವ್ ನಾಡಗೌಡ ಹಲವು ಪದವಿಪೂರ್ವ ಕಾಲೇಜುಗಳನ್ನು ತಾಲ್ಲೂಕಿಗೆ ಮಂಜೂರು ಮಾಡಿಸಿದ್ದರು. ಆದರೆ ಕಟ್ಟಡ ನಿರ್ಮಾಣದ ಗುತ್ತಿಗೆದಾರರ ಭ್ರಷ್ಟಚಾರದಿಂದಾಗಿ ಅತ್ಯಂತ ಕಳಪೆ ಸಾಮಗ್ರಿಗಳಿಂದ ನಿರ್ಮಾಣವಾಗಿರುವ ಬಹುತೇಕ ಕಾಲೇಜುಗಳು ಕೇವಲ 7-8 ವರ್ಷಗಳಲ್ಲಿಯೇ ಶಿಥಿಲಾವಸ್ಥೆ ತಲುಪಿವೆ. ನೆಲಹಾಸು, ಮೇಲ್ಛಾವಣಿಗಳು ಕಿತ್ತುಹೋಗಿದ್ದು ಹಲವಾರು ಕಡೆ ಗೋಡೆಗಳು ಸಹ ಬಿರುಕು ಬಿಟ್ಟಿವೆ. ಇವುಗಳನ್ನು ರಿಪೇರಿ ಮಾಡಿಸಿಕೊಡಿ ಎಂದು ಅಲ್ಲಿನ ಗ್ರಾಮಸ್ಥರು ಅನೇಕ ಬಾರಿ ಪ್ರತಿಭಟನೆ ನಡೆಸಿ ಹಂಪನಗೌಡನಿಗೆ ಮನವಿ ಕೊಟ್ಟಿದ್ದಾರೆ. ಆ ಕಟ್ಟಡಗಳ ದುಸ್ಥಿತಿ ನೋಡಿ ಹಂಪನಗೌಡ ಅವುಗಳ ದುರಸ್ಥಿಗೆ ಶಾಸಕರ ಅನುಧಾನದಿಂದ ಹಣ ಬಿಡುಗಡೆ ಮಾಡಲು ಸಹ ತಿಳಿಸಿದ್ದ. ಆದರೆ ಯಾರೋ ಅವನ ಕಿವಿಯಲ್ಲಿ ಆ ಕಾಲೇಜುಗಳು ನಿಮ್ಮ ವಿರೋಧಿ ವೆಂಕಟರಾವ್ ನಾಡಗೌಡನ ಕಾಲದಲ್ಲಿ ನಿರ್ಮಾಣಗೊಂಡಿರುವಂಥವು, ನೀವು ಅವುಗಳನ್ನು ರಿಪೇರಿ ಮಾಡಿಸಿದರೂ ಹೆಸರು ಮಾತ್ರ ಆತನಿಗೆ ಹೋಗುತ್ತದೆ, ಅದರಬದಲು ಹಾಗೇಬಿಟ್ಟರೆ ನೋಡಿದವರೆಲ್ಲ ಆತನಿಗೇ ಬೈಯುತ್ತಾರೆ ಅಂತ ಕಿವಿಚುಚ್ಚಿದ್ದೇ ತಡ ಕನಿಷ್ಠ ಕಾಮನ್‌ಸೆನ್ಸೂ ಇಲ್ಲದೆ ಅಂತಹ ದುರಸ್ಥಿ ಕಾರ್ಯಕ್ಕೇ ಕೊಕ್ಕೆ ಹಾಕಿಕೊಂಡು ಕುಳಿತಿದ್ದಾನೆ. ಅಲ್ಲಿನ ಮಕ್ಕಳ, ಗ್ರಾಮಸ್ಥರ ಅರಣ್ಯರೋಧನ ಯಾರಿಗೂ ಕೇಳುತ್ತಿಲ್ಲ, ಹಂಪನಗೌಡನ ರಾಜಕೀಯದಾಟಕ್ಕೆ ತಾಲ್ಲೂಕಿನ ವಿದ್ಯಾರ್ಥಿಗಳು ಬಲಿಯಾಗುತ್ತಿದ್ದಾರೆ.



ಪದವಿ ಪೂರ್ವ ಕಾಲೇಜುಗಳ ಪರಿಸ್ಥಿತಿ

ಇನ್ನು ತಾಲ್ಲೂಕಿನ ಅಧಿಕಾರಿಗಳು ಸಹ ಹಂಪನಗೌಡ ಹೇಳಿದಂತೆ ಕೇಳಬೇಕಿದೆ. ತಾಲ್ಲೂಕು ಮಾತ್ರವಲ್ಲ ಇಡೀ ಜಿಲ್ಲೆಯ ಅಧಿಕಾರಿಗಳನ್ನೂ ಸಹ ತನ್ನ ಅಂಕೆಯಲ್ಲಿಟ್ಟುಕೊಂಡಿರುವ. ಹಂಪನಗೌಡ ತನಗೆ ಬೇಕಾದವರನ್ನು ಎಸಿ, ಡಿಸಿಗಳಾಗಿ ಬರುವಂತೆ ನೋಡಿಕೊಳ್ಳುವುದರಲ್ಲಿ ನಿಷ್ಣಾತ. ಈ ಅಧಿಕಾರಿಗಳು ತಾವು ನುಂಗಿದ್ದರಲ್ಲಿ ಪ್ರತಿ ತಿಂಗಳು ಇಂತಿಷ್ಟು ಕಪ್ಪದ ಗಂಟನ್ನು ಹಂಪನಗೌಡನ ಪಾದಾರವಿಂದಗಳಿಗೆ ಅರ್ಪಿಸಿ ಋಣಮುಕ್ತರಾಗುವುದನ್ನು ಬಿಡಿಸಿಹೇಳುವ ಜರೂರತ್ತೇ ಇಲ್ಲ, ಈತನ ದುರಂಹಕಾರ ಎಷ್ಟಿದೆಯೆಂದರೆ ಕಳೆದ ಕೆಲವು ವರ್ಷಗಳ ಹಿಂದೆ ಜನಪ್ರಿಯ ತಹಶೀಲ್ದಾರ್ ಎಂದು ಹೆಸರು ಗಳಿಸಿದ್ದ ಗಂಗಪ್ಪ ಕಲ್ಲೂರರನ್ನು ತನ್ನ ಫೋನ್ ಎತ್ತಲಿಲ್ಲ ಎಂಬ ಕಾರಣಕ್ಕಾಗಿಯೇ ದ್ವೇಷ ಸಾಧಿಸಿ ರಾಜಕೀಯ ಬಳಸಿ ಅಮಾನತು ಆಗುವಂತೆ ಮಾಡಿದ್ದ, ನಂತರ ಅವರು ಮಲ್ಲಿಕಾರ್ಜುನ ಖರ್ಗೆಯವರ ಬೆಂಬಲದಿಂದ ಅಮಾನತ್ತು ರದ್ದುಗೊಳಿಸಿದ್ದು ಬೇರೆ ಮಾತು.

ಕೆಲವು ವರ್ಷಗಳ ಹಿಂದೆಯೇ ಸಿಂಧನೂರಿನ ಸಬ್ ಇನ್ಸ್‌ಪೆಕ್ಟರ್‌ನನ್ನೇ ಮನೆಗೆ ಕರೆದುಕೊಂಡು ಹೋಗಿ ಬಡಿದಿದ್ದ ದುಷ್ಟ ಸಂತತಿ ಇವರದು ಅಂತ ಜನ ಮಾತಾಡಿಕೊಳ್ಳುತ್ತಿರುವುದು ಈ ಫ್ಯಾಮಿಲಿಯ ಪಾಳೇಗಾರಿಕೆ ಸಂಸ್ಕೃತಿಯನ್ನು ಬಿಚ್ಚಿಡುತ್ತದೆ.

ತನ್ನ ದೊಡ್ಡ ಕುಟುಂಬದ ಹೆಸರಿನಲ್ಲಿ ಹಾಗೂ ಬೇನಾಮಿ ಹೆಸರಿನಲ್ಲಿ ಹಂಪನಗೌಡ ಸಿಕ್ಕಾಪಟ್ಟೆ ಆಸ್ತಿ ಮಾಡಿದ್ದಾನೆ. ತನ್ನ ಊರು ಬಾದರ್ಲಿ ಸೇರಿದಂತೆ ಬಳ್ಳಾರಿ ಕಡೆ ಬಹಳಷ್ಟು ಜಮೀನು ಈತನ ಸುಪರ್ದಿಯಲ್ಲಿದೆ. ಸಿಂಧನೂರಿನ ಬಹಳಷ್ಟು ಕಾಂಪ್ಲೆಕ್ಸ್‌ಗಳೆಲ್ಲ ಇವರ ಒಡೆತನದಲ್ಲೇ ಇವೆ. ಇಷ್ಟೆಲ್ಲಾ ಅನಾಹುತಗಳನ್ನು ಮಾಡುತ್ತಿರುವ ಹಂಪನಗೌಡನ ವಿರುದ್ಧ ಎದುರು ಮಾತನಾಡುವ ಯಾವೊಬ್ಬ ರಾಜಕಾರಣಿಯೂ ಕಂಡುಬರುತ್ತಿಲ್ಲ, ಈತನ ಅವ್ಯವಹಾರಗಳನ್ನು ಕೆಲವು ಪ್ರಗತಿಪರ ಸಂಘಟನೆಗಳು ಬಯಲಿಗೆಳೆಯುತ್ತಿವೆಯೇ ವಿನಃ ಪರ್ಯಾಯ ರಾಜಕಾರಣಿಗಳನ್ನು ಬೆಳೆಯಲು ಹಂಪನಗೌಡ ಬಿಟ್ಟುಕೊಟ್ಟಿಲ್ಲ, ಒಂದು ಕಾಲದಲ್ಲಿ ಈತನ ದುರ್ವರ್ತನೆಗಳ ವಿರುದ್ಧ ಕಮ್ಯುನಿಸ್ಟ್ ಪಕ್ಷದಿಂದ ಶಾಸಕರಾಗಿದ್ದ ಅಮರೇಗೌಡ ಗದ್ದರಟಗಿ ಎನ್ನುವವರು ಸಮರ ಸಾರಿದ್ದರು. ನೇರ ನುಡಿಗಳಲ್ಲಿ ಈತನ ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಮತ್ತು ಅಭಿವೃದ್ಧಿ ಕೆಲಸಗಳಲ್ಲಿನ ನಿರ್ಲಕ್ಷ್ಯತನವನ್ನು ಖಂಡಿಸುತ್ತಿದ್ದ ಇವರು ಒಮ್ಮೆ ಈತನ ಜನವಿರೋಧಿ ಕಾರ್ಯಗಳ ವಿರುದ್ಧ ಇಡೀ ಕ್ಷೇತ್ರದ ಜನರನ್ನು ಸಂಘಟಿಸಿ ಹಂಪನಗೌಡನ ಮನೆಗೆ ಮುತ್ತಿಗೆ ಹಾಕುವ ಮೂಲಕ ಬಿಸಿ ಮುಟ್ಟಿಸಿದ್ದೂ ಉಂಟು. ಅವರ ನಂತರ ಅವರ ಅನುಯಾಯಿ ಎಂದು ಹೇಳಿಕೊಂಡ ಬಂದ ಕೆ. ವಿರೂಪಾಕ್ಷಪ್ಪ ಆರಂಭದಲ್ಲಿ ಪ್ರಬಲ ಎದುರಾಳಿಯಾಗಿ ಕಂಡುಬಂದರೂ ನಂತರ ಕಾಂಗ್ರೆಸ್ ಸೇರಿ ಎಂಪಿಯಾಗಿ ಮೆತ್ತಗಾದರು. ತದನಂತರ ಬಿ.ಎಸ್.ಆರ್ ಪಕ್ಷ ಸೇರಿದ್ದಲ್ಲದೇ ಅಲ್ಲಿಂದ ಬಿ.ಜೆ.ಪಿ ಹೊಕ್ಕು ಈಗ ಈಶು ನೇತೃತ್ವದ ರಾಯಣ್ಣ ಬಿಗ್ರೇಡ್‌ನಲ್ಲಿ ಬ್ಯುಸಿಯಾಗಿ ಗಬ್ಬೆದ್ದುಹೋಗಿದ್ದಾರೆ. ವಿಪರ್ಯಾಸವೆಂದರೆ ಹಂಪನಗೌಡನ ಕುಟುಂಬ ರಾಜಕಾರಣದ ವಿರುದ್ಧ ಸೊಲ್ಲೆತ್ತಿದ್ದ ಅಮರೇಗೌಡರ ಶಿಷ್ಯನೆಂದುಕೊಂಡು ರಾಜಕೀಯಕ್ಕೆ ಬಂದ ವಿರೂಪಾಕ್ಷಪ್ಪ ಇವತ್ತು ಅದೇ ಕುಟುಂಬ ರಾಜಕಾರಣದ ಫಲಾನುಭವಿಯಂತೆ ತಮ್ಮ ಸಂಬಂಧಿಕ ರಾಯಪ್ಪನನ್ನು ರಾಜಕೀಯಕ್ಕೆ ತಂದು ನೀರೆರೆಯುತ್ತಿದ್ದಾರೆ. ಸ್ವಜನ ಪಕ್ಷಪಾತದ ಜೊತೆಗೆ ಅಕ್ರಮ ಭೂಮಿ ನುಂಗುವುದರಲ್ಲೂ ತಲ್ಲೀನನಾಗಿರುವ ವಿರೂಪಾಕ್ಷಪ್ಪ ಹಂಪನಗೌಡನ ವಿರುದ್ಧ ಮಾತಾಡುವ ನೈತಿಕ ಹಕ್ಕನ್ನೇ ಕಳೆದುಕೊಂಡಿದ್ದಾನೆ. ಇನ್ನು ಬೇರೆ ಯಾರು ತಾನೆ ಹಂಪನಗೌಡನನ್ನು ಪ್ರಶ್ನಿಸಲು ಸಾಧ್ಯ.

ಇದು ಸಿಂಧನೂರು ಜನತೆಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಊಳಿಗಮಾನ್ಯ ಪಾಳೇಗಾರನ ರೀತಿಯಲ್ಲಿ ವರ್ತಿಸುತ್ತಿರುವ ಹಂಪನಗೌಡ ಬಾದರ್ಲಿಯ ಕಾಟ ತಡೆದುಕೊಳ್ಳಲಾಗದ ಪರಿಸ್ಥಿತಿ ತಲುಪಿದ್ದಾರೆ. ಈತನನ್ನು ಸೋಲಿಸೋಣ ಎಂದರೆ ಸೂಕ್ತ ಪರ್ಯಾಯ ವ್ಯಕ್ತಿಯೂ ಜನರಿಗೆ ಕಾಣುತ್ತಿಲ್ಲ, ಒಟ್ಟಾರೆ ಜನರ ಮನಸ್ಸಿನಲ್ಲಿ ಮನೆ ಮಾಡಿರುವ ಕೋಪ ತಾಪ ಸಿಡಿಯುವ ಕಾಲ ಸನ್ನಿಹಿತವಾಗಿದೆ ಅನ್ನಿಸುತ್ತದೆ.

■ ಮುತ್ತುರಾಜು

ಕೊಡಗು: ನರೇಶ್ ಶೆಣೈ ರಕ್ಷಣೆಗೊಂದು ಸುಲಿಗೆ ಯೋಜ

ಕಾಶಿ ಮಠ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಪ್ರತಿಷ್ಠಿತ ಮಠ. ಅತ್ಯಂತ ಶ್ರೀಮಂತ ಕುಳಗಳು ಮಠದ ಸ್ವಾಮೀಜಿಗಳ ಸುತ್ತ ಗಿರಕಿ ಹೊಡೆಯುತ್ತಾ ಇರುತ್ತಾರೆ. ಒಂದು ರೀತಿಯ ಮಾಫಿಯಾ ಇದಾಗಿದೆ. ಸಾಕಷ್ಟು ಶ್ರೀಮಂತ ಕುಳಗಳ ಕೈಯಲ್ಲಿ ಇರುವ ಹಣ ಮಠಕ್ಕೆ ಅಥವ ಇವರ ವೆಂಕಟರಮಣ ದೇವಾಲಯಕ್ಕೆ ಸೇರಿದ ಹಣ ಎಂಬುದು ಸಾರ್ವತ್ರಿಕವಾಗಿ ಚರ್ಚೆಯಲ್ಲಿರುವ ವಿಚಾರವಾಗಿದೆ. ಕೇವಲ ಕಾಶಿ ಮಠದ ಹಣ ಮಾತ್ರವಲ್ಲ ಬಹುತೇಕ ಎಲ್ಲಾ ಮಠಗಳ ಹಣ ಆಯಾ ಮಠಗಳಿಗೆ ಸೇರಿದ ಸ್ವಾಮೀಜಿಗಳ ನಿಕಟವರ್ತಿಗಳ ಕೈಯಲ್ಲಿ ಚಲಾವಣೆಯಾಗಿ ಅವರು ಮತ್ತಷ್ಟು ಶ್ರೀಮಂತರಾಗುವ ದಂಧೆ ನಡೆಯುತ್ತಲೇ ಇರುತ್ತದೆ.

ಕೆಲ ಸಮಯದ ಹಿಂದೆ ದಕ್ಷಿಣ ಕನ್ನಡದಲ್ಲಿ ಸುದ್ದಿಯಾದದ್ದು ವಿನಾಯಕ ಬಾಳಿಗ ಕಗ್ಗೊಲೆ. ಈತನ ಕೊಲೆಯಲ್ಲಿ ನರೇಶ್ ಶೆಣೈ ಎಂಬ ಚಿಡ್ಡಿ ಚತುರನೇ ಪ್ರಥಮ ಆರೋಪಿ. ವಿನಾಯಕ ಬಾಳಿಗ ಕಾಶಿ ಮಠದ ಚಟುವಟಿಕೆ ಮತ್ತು ವೆಂಕಟರಮಣ ದೇವಸ್ಥಾನದ ಚಟುವಟಿಕೆಯ ಜೊತೆಯಲ್ಲಿ ಸಹಕಾರ ಬ್ಯಾಂಕಿನ ಕಾರ್ಯಾಚರಣೆಯ ಬಗ್ಗೆ ಆಕ್ಷೇಪಗಳನ್ನು ಎತ್ತಿದ್ದೇ ಅವರ ಕೊಲೆಗೆ ಕಾರಣವಾಗಿತ್ತು. ಈ ಕೊಲೆಯ ಹಿಂದೆ ಇರುವ ನರೇಶ್ ಶೆಣೈ ಬಹಳಷ್ಟು ಸಮಯ ತಲೆಮರೆಸಿಕೊಂಡಿದ್ದ. ಆ ಸಂದರ್ಭದಲ್ಲಿ ಯಾವುದೇ ರಾಜಕೀಯ ಪಕ್ಷ ಈ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ, ಆದರೆ ಕೆಲವು ಪ್ರಗತಿಪರರು ನಡೆಸಿದ ಹೋರಾಟದ ಫಲವಾಗಿ ನರೇಶ್ ಶೆಣೈನ ಬಂಧನವಾಗಿತ್ತು.

ಈ ಪ್ರಕರಣವನ್ನು ಆಡಳಿತ ಪಕ್ಷ ಬಹಳ ಲಘುವಾಗಿ ತೆಗೆದುಕೊಂಡಿದೆ ಮತ್ತು ಕೋಟ್ಯಾಂತರ ರೂಪಾಯಿ ಡೀಲ್ ಆಗಿದೆ ಎಂಬ ಮಾತು ಆ ಸಂದರ್ಭದಲ್ಲಿ ಕೇಳಿ ಬಂದಿತ್ತು. ನರೇಂದ್ರ ನಾಯಕ್ ಅವರು ಸಮಾನ ಮನಸ್ಕರ ಜೊತೆಯಲ್ಲಿ ಕೂಡಿಕೊಂಡು ಹೋರಾಟ ಮಾಡಿದ ಫಲವಾಗಿ ನರೇಶ್ ಶೆಣೈನ ಬಂಧನವಾಗಿತ್ತು. ಈ ಪ್ರಕರಣದಲ್ಲಿ ಸಂಘ ಪರಿವಾರದ ಕೈವಾಡವೂ ಇತ್ತು ಎಂಬುದಕ್ಕೆ ಸಾಕಷ್ಟು ಸಾಂದರ್ಭಿಕ ಸಾಕ್ಷ್ಯಾಧಾರಗಳು ದೊರೆತಿದ್ದವು.

ನರೇಶ್ ಶೆಣೈ ಜಾಮೀನು ಪಡೆದು ಬಂಧನದಿಂದ ಬಿಡುಗಡೆಯಾದಾಗ ಸಂಘಪರಿವಾರದ ಚಕ್ರವರ್ತಿ ಸೂಲಿಬೆಲೆ ಆತನನ್ನು ಸ್ವಾಗತಿಸಲು ಜೈಲಿನ ಬಾಗಿಲಿಗೆ ತೆರಳಿದ್ದು ದೊಡ್ಡ ಸುದ್ದಿಯಾಗಿತ್ತು. ಇದು ಸಂಘ ಪರಿವಾರದ ಕೈವಾಡವನ್ನು ಪುಷ್ಟೀಕರಿಸುವಂತೆ ಇತ್ತು.

ಬಾಳಿಗ ಕಗ್ಗೊಲೆ ಹಾಗೂ ಆನಂತರದ ಬೆಳವಣಿಗೆಗಳಲ್ಲಿ ಕೋಟ್ಯಾಂತರ ರೂಪಾಯಿ ಕೈಬದಲಾದ ವಿಚಾರಗಳು ಮಂಗಳೂರು ಸುತ್ತಮುತ್ತ ಮತ್ತು ಬೆಂಗಳೂರಿನಲ್ಲಿಯೂ ಚರ್ಚೆಯ ವಿಚಾರವಾಗಿತ್ತು. ಇಷ್ಟೊಂದು ಪ್ರಮಾಣದ ಹಣವನ್ನು ಏಕಾಏಕಿ ಹೊಂದಿಸುವುದು ಮಠಕ್ಕೂ ಕಷ್ಟದ ವಿಚಾರವಾಗಿತ್ತು. ಸಾಕಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆದಿದ್ದರು.

ಈಗ ಈ ಸಾಲವನ್ನು ಮುಗಿಸುವ ಮತ್ತು ಇತರೇ ವೆಚ್ಚಗಳಿಗೆ ಹಣವನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಕಾಶಿ ಮಠ ಹೊಸದಾದ ಒಂದು ಯೋಜನೆಯನ್ನು ರೂಪಿಸಿದೆ.

ಕೊಡಗಿನ ಭಾಗಮಂಡಲದಲ್ಲಿ ಕಾಶಿ ಮಠದ ಶಾಖೆಯೊಂದು ಇದೆ. ಇಲ್ಲಿಗೆ ಕಾಶಿ ಮಠದ ಸ್ವಾಮೀಜಿಗಳು ಐದೋ, ಹತ್ತೋ ವರ್ಷಕ್ಕೆ ಒಮ್ಮೆ ಭೇಟಿ ನೀಡುತ್ತಾರೆ. ಕೊಡಗಿನಲ್ಲಿ ಗೌಡ ಸಾರಸ್ವತ ಬ್ರಾಹ್ಮಣರ ಕುಟುಂಬಗಳು ನೂರರ ಒಳಗೆ ಇದೆ. ಇಲ್ಲಿ ಸ್ವಾಮೀಜಿಗಳು ಆಗಮಿಸಿದಾಗಲೂ ಹೊರ ಜಿಲ್ಲೆಯವರು ಮತ್ತು ಹೊರ ರಾಜ್ಯದವರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ ಮತ್ತು ಅವರದೇ ಪಾರುಪತ್ಯ ಇರುತ್ತದೆ. ಇಲ್ಲಿ ಕಡಿಮೆ ಜನ ಇರುವ ಕಾರಣ, ಮೈಸೂರು ಮತ್ತು ಸುತ್ತಮುತ್ತ ಇರುವ ಮಠದ ಭಕ್ತಾದಿಗಳು ಇಲ್ಲಿಗೆ ಭೇಟಿ ನೀಡಿ ಶ್ರೀಗಳ ದರ್ಶನ ಪಡೆಯುತ್ತಾರೆ. ಹಲವಾರು ಸೇವೆಗಳು ಮತ್ತು ಪಾದಪೂಜೆಯ ಹೆಸರಿನಲ್ಲಿ ಹಣ ಸಂಗ್ರಹ ಆಗುತ್ತದೆ. ಹೇಳಿ ಕೇಳಿ ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ಶೇ. 99ರಷ್ಟು ಮಂದಿ ಸಂಘ ಪರಿವಾರದ ಸುಳಿದಲ್ಲಿ ಇರುವವರು. ಹಾಗಾಗಿ ಸಂಘ ಪರಿವಾರವು ಈ ಚಟುವಟಿಕೆಗೆ ಸಂಪೂರ್ಣ ಬೆಂಬಲವನ್ನು ನೀಡುತ್ತಾ ಬಂದಿದೆ.

ಇಲ್ಲಿ ಯಾವಾಗ ಸ್ವಾಮೀಜಿಗಳು ಬಂದರೂ ಅವರು ತಂಗುವುದು ಮಠದ ಗೆಸ್ಟ್‌ಹೌಸ್‌ನಲ್ಲಿ. ಈ ಗೆಸ್ಟ್‌ಹೌಸ್ ದೊಡ್ಡದಾಗಿಯೇ ಇದೆ. ಇತ್ತೀಚೆಗಷ್ಟೇ ಇದರ ನವೀಕರಣ ಆಗಿ ಮಠದ ಕೆಲವು ಆತ್ಮೀಯರು ಅದರಲ್ಲಿಯೂ ಹಣವನ್ನು ಕೊಳ್ಳೆ ಹೊಡೆದಿದ್ದಾರೆ. ದೇವರ ದುಡ್ಡು ದೇವರಿಗೇಕೆ ಎಂಬ ನಿಲುವು ಅವರದ್ದಾಗಿದೆ. ಆದರೆ ಮಠದ ಯಾವುದೇ ಒಬ್ಬ ಸದಸ್ಯ ಈ ಬಗ್ಗೆ ಮಾತನಾಡುವುದಿಲ್ಲ. ಮಾತನಾಡಿದರೆ ವಿನಾಯಕ ಬಾಳಿಗನ ಪರಿಸ್ಥಿತಿ ತಮಗೂ ಬರಬಹುದು ಎಂಬ ಆತಂಕ ಅವರಲ್ಲಿ ಇದೆ. ಜೊತೆಗೆ "ನಮ್ಮವನೇ ಕಾಸು ಮಾಡಿಕೊಂಡಿದ್ದಾನೆ. ನಾವೇಕೆ ಈ ಬಗ್ಗೆ ತಲೆಕೆಡಿಸಿ ಕೊಳ್ಳಬೇಕು" ಎಂಬ ಭಾವನೆ ಅವರಲ್ಲಿ ಮನೆಮಾಡಿದೆ.


ಬರುವ ನವೆಂಬರ್ 6ರಂದು ಭಾಗಮಂಡಲದಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ಮಠದ ವತಿಯಿಂದ ರೂಪಿಸಲಾಗಿದೆ. ಅದೇನೆಂದರೆ 'ಶ್ರೀಮದ್ ಭುವನೇಂದ್ರ ಆಯುರ್ವೇದಿಕ್ ವೃಕ್ಷ ವಾಟಿಕ' ಎಂಬ ಯೋಜನೆ. ಭಾಗಮಂಡಲದಲ್ಲಿ ಮಠಕ್ಕೆ ಸಂಬಂಧ ಪಟ್ಟಂತೆ ಇರುವ ಸುಮಾರು 30 ಎಕರೆ ಪ್ರದೇಶದಲ್ಲಿ ಆಯುರ್ವೇದಿಕ್ ಗಿಡಗಳನ್ನು ನೆಟ್ಟು ಬೆಳೆಸುವ ಯೋಜನೆ ಇದು. ನೋಡಲು ಅತ್ಯಂತ ಸುಂದರವಾದ ಈ ಯೋಜನೆಯ ಉದ್ದೇಶ, ಇದರ ನೆಪದಲ್ಲಿ ಹಣ ಸಂಗ್ರಹಿಸಿ ನರೇಶ್ ಶೆಣೈ ಬಿಡುಗಡೆಗೆ ಆದ ವೆಚ್ಚವನ್ನು ಭರಿಸುವುದು.


ಭಾಗಮಂಡಲದಲ್ಲಿ ಇಂತಹ ಯಾವುದೇ
ಸಸ್ಯಗಳು ಬೆಳೆಯಲು ಸಾಧ್ಯವಿಲ್ಲ, ಅತ್ಯಂತ
ಇರುವ ಪ್ರದೇಶ ಇದಾಗಿದ್ದು ಇಲ್ಲಿ ಯಾವುದೇ
ಬೆಳೆಯಲು ಸಾಧ್ಯವಿಲ್ಲ, ನೈಸರ್ಗಿಕವಾಗಿ ಬೆಳೆದ
ಬಿಟ್ಟು ಬೇರೆ ಗಿಡಗಳು, ಅದೂ ಹೊರ ಪ್ರ
ತಂದು ನೆಡುವ ಔಷಧೀಯ ಗಿಡಗಳು ಬೆಳೆಯಲು
ಇಲ್ಲ, ಆದರೆ ಈಗ ಇಂತಹ ಒಂದು ಯೋ
ಕಾಶಿ ಮಠ ರೂಪಿಸಿದೆ.

ಇದು ಶ್ರೀಮದ್ ಸಯ್ಯಮೀಂದ್ರ ತೀರ್ಥ
ಎಂದು ಹೇಳುತ್ತಾ ಶ್ರೀಮದ್ ಭುವನೇಂ
ಸ್ವಾಮೀಜಿ ಮತ್ತು ಶ್ರೀಮದ್ ಸುಧೀಂದ
ಸ್ವಾಮೀಜಿಯವರ ಕನಸನ್ನು ನನಸು ಮಾಡುವ ಕ
ಎಂದು ಹೇಳಿಕೊಂಡು ಜನರನ್ನು ವಂಚಿಸಲು ಹ
ಸುಂದರವಾದ ಆಮಂತ್ರಣ ಪತ್ರದಲ್ಲಿ "ಕಾಶಿ
ಇಬ್ಬರು ಹಿರಿಯ ಸ್ವಾಮೀಜಿಗಳು ಆಯು
ಔಷಧಿಗಳ ಮೂಲಕ ಚಿಕಿತ್ಸೆಯನ್ನು ನೀಡುವ ಕ
ಮಾಡುತ್ತಿದ್ದರು. ಅವರಿಗೆ ಇಂತಹ ಒಂದು
ಗಿಡಗಳ ಪಾರ್ಕ್ ನಿರ್ಮಾಣ ಮಾಡಬೇಕು ಎಂ
ಇತ್ತು. ಅದನ್ನು ಈಡೇರಿಸುವ ಉದ್ದೇಶದ
ಯೋಜನೆಯನ್ನು ಜಾರಿಗೊಳಿಸುತ್ತಿದ್ದೇವೆ"
ಹೇಳಲಾಗಿದೆ.

ವಾಸ್ತವದಲ್ಲಿ ಈ ಜಾಗವನ್ನು ಸಯ್ಯಮೀಂದ್ರ
ಖರೀದಿಸಿದ್ದು ಅವರು ಸುಧೀಂದ್ರ ತೀರ್ಥರ
ಆಯ್ಕೆಯಾಗುವ ಮುನ್ನ. ಇದು ಇಲ್ಲಿ ಇದ್ದ
ಮಹಾ ಭ್ರಷ್ಟ ಮತ್ತು ಸಕಲ ಗುಣ ಸಂಪ
ಸ್ವಾಮೀಜಿ ಮಠದ ಹಣದಿಂದ ಖರೀದಿಸಿದ್ದ
ವ್ಯಕ್ತಿಗೆ ಇಂತಹ ಯಾವುದೇ ಕಲ್ಪನೆ ಇರಲಿಲ್ಲ
ಮಸ್ತಿಯಲ್ಲಿಯೇ ಸಮಯ ಕಳೆಯುತ್ತಿದ್ದ ಆ ವ್ಯಕ್ತಿ
ಮಠದ ಹೆಸರಿನಲ್ಲಿ ಅದನ್ನು ಖರೀದಿಸಿರಲಿಲ್ಲ
ಅವರ ಪದಚ್ಯುತಿಯ ನಂತರ ಈ ಜಾಗ ಮಠ
ಈಗ ಇದನ್ನು ಬಳಕೆ ಮಾಡಿಕೊಂಡು ಮಠ
ಭಕ್ತಾದಿಗಳು ಮತ್ತು ಮಠದ ಆಡಳಿತ ನಡೆಸು
ಭಕ್ತಾದಿಗಳಿಗೆ ಟೋಪಿ ಹಾಕಿ ಹಣ ಮಾಡು
ಹೊರಟಿದ್ದಾರೆ. ಈ ಬಗ್ಗೆ ಭಕ್ತಾದಿಗಳು ಎಚ್ಚೆತ್ತು
ಕಾಗಿದೆ. ಇದು ಖಂಡಿತವಾಗಿಯೂ ಹಣ ಸಂಗ್ರಹ
ಒಂದು ಯೋಜನೆ. ಇದರ ಹಿಂದೆ ಸಂಘ
ಕೈವಾಡವೂ ಇದೆ. ಏಕೆಂದರೆ ಬಿಜೆಪಿಯ
ಮುಖಂಡರು "ಕೊಡವ ಜನಾಂಗಕ್ಕೆ ಕಾವೇರಿಯ
ಅದರಿಂದ ಮುಕ್ತಿ ಪಡೆಯಲು ನಿರಂತರ
ನಡೆಯಬೇಕು" ಎಂದು ಹೇಳಿಕೊಂಡು, ಇದೇ
ಒಂದಷ್ಟು ಸ್ಥಳವನ್ನು ಖರೀದಿಸಿದ್ದಾರೆ.
ಕೈಜೋಡಿಸಿಕೊಂಡು ಮಾಡುತ್ತಿರುವ ದಂಧೆ
ಈ ಬಗ್ಗೆ ಸರಿಯಾದ ರೀತಿಯಲ್ಲಿ ವಿಚಾರಣೆಗಳ
ಸಾಕಷ್ಟು ವಿಷಯಗಳು ಬೆಳಕಿಗೆ ಬರುವ ಸಾ
ನರೇಶ್ ಶೆಣೈನನ್ನು ಬಚಾವು ಮಾಡಿದ ಕಾ
ಬಳಸಿದ ಹಣವನ್ನು ಸರಿದೂಗಿಸಲು ಮಾ
ತಂತ್ರಗಾರಿಕೆ ಇದು ಎನ್ನುವುದರಲ್ಲಿ ಸಂಶಯ

■ ಬಿ.ಎನ್. ಮನು





02 ◀◀

ಕಾಣುವೆ ಎಂದು ಅಣ್ಣನ ವಚನದಲ್ಲಿ ಪೇಜಾವರಶ್ರೀಗಳಿಗೆ ಪ್ರಶ್ನೆಯಂತೂ ನನಗೆ ಕಾಣುತ್ತದೆ.

ತಮ್ಮನ್ನು ತಾವು ಎಂದಿಗೂ ನಿರ್ಣಯ ನೀಡುವಂತಹ ಎತ್ತರದ ಸ್ಥಾನಕ್ಕೆ ಇರಿಸಿಕೊಳ್ಳದ ಬಸವಣ್ಣನವರನ್ನು ಪೇಜಾವರರಿಗೆ ಬಾಗಿ ನೋಡಲು ಅಥವಾ ಬೀಗಿ ನೋಡಲೂ ಕಷ್ಟವಾಗುತ್ತದೆ. ಮರದ ನೆರಳಿನಲ್ಲಿ ನಿಂತಿದ್ದು ತನ್ನ ನೆರಳನ್ನು ಹುಡುಕುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ಶರಣರ ಸಮೂಹದಲ್ಲಿ ತನ್ನ ಗುರುತನ್ನು ಕಳೆದುಕೊಳ್ಳುವಂತ ವಿನಯ ಅವರಿಗಿತ್ತು. "ಮರದ ನೆಳಲಲಿದ್ದು ತನ್ನ ನೆಳಲನರಸಬಹುದೆ? ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ? ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ? ಆನು ಭಕ್ತನೆಂಬ ನುಡಿ ಸುಡದೆ, ಕೂಡಲಸಂಗಮದೇವಾ."

ಇನ್ನೂ ಮುಂದುವರಿದು, "ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ, ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ, ಕೂಡಲಸಂಗಮದೇವಾ, ಎನಗಿದೇ ದಿಬ್ಯ" ಎನ್ನುವ ಅವರು ಸಹಜ ಮತ್ತು ಸರಳವಾಗಿರುವಂತಹ ಎಂತೆಂತಹ ಭಕ್ತರನ್ನು ಕಂಡರೋ, ತಾನು ಭಕ್ತನೆಂದು ಕರೆದುಕೊಳ್ಳುವುದಕ್ಕೇ ನಾಚಿಕೊಂಡುಬಿಡುವರು. "ಆನು ಭಕ್ತನಲ್ಲಯ್ಯಾ, ಆನು ವೇಷಧಾರಿಯಯ್ಯಾ, ಕಾಟುಗ, ಕೇತುಗ, ಪೋಲುಗ ಎಂಬುದು ಎನ್ನ ಹೆಸರು, ಕೂಡಲಸಂಗಮದೇವಾ ನಿಮ್ಮ ಶರಣರ ಮನೆಯ ಮಗ ನಾನಯ್ಯಾ" ಕಟುವಾದ ವಿಮರ್ಶೆಗೆ ತಮ್ಮನ್ನು ಒಳಮಾಡಿಕೊಂಡು ತಗ್ಗಿ ಬಗ್ಗಿ ಹೋಗುತ್ತಾರೆ ಬಸವಣ್ಣ.

"ಕಂಡ ಭಕ್ತಂಗೆ ಕೈ ಮುಗಿವಾತನೇ ಭಕ್ತ" ಎಂದು ಹೇಳುವ ಬಸವಣ್ಣನವರಿಗೆ ತಮ್ಮನ್ನು ಕಂಡು "ಶರಣು" ಎಂದ ಹರಳಯ್ಯನೆಂಬ ಚಮ್ಮಾರನಿಗೆ "ಶರಣು ಶರಣಾರ್ಥಿ ಶಿವಶರಣ ಹರಳಯ್ಯಾ" ಎಂದು ಬಾಗಿ ನಮಿಸಲು ಸಾಧ್ಯವಾಗುತ್ತದೆ. ತಾವು ಸ್ವಾಮಿಗಳೆಂದು, ಸಭೆ ಸಮಾರಂಭಗಳಲ್ಲಿ, ಛೇರಿನ ಮೇಲೆ ತಾವು ತಂದಿರುವ ಹೊದಿಕೆಯನ್ನು ಹಾಸಿಕುಳಿತುಕೊಳ್ಳುವ, ಭಾಷಣ ಮಾಡುವ ಸಮಯ ಬಂದಾಗಲೂ ಎದ್ದು ಪೋಡಿಯಂಗೆ ಹೋಗದೇ ಕುಳಿತಲ್ಲೇ ಮೈಕ್ ತರಿಸಿಕೊಂಡು ಮಾತಾಡುವ, ತಮ್ಮ ಕಾಲಿಗೆ ಬಿದ್ದವರ ಆಶೀರ್ವಾದಿಸುವ, ತಮ್ಮ ಪಾದಗಳನ್ನು ಭಕ್ತರು ತಟ್ಟೆಯಲ್ಲಿಟ್ಟುಕೊಂಡು ತೊಳೆದು ಪೂಜಿಸುತ್ತಿದ್ದರೂ ಆತ್ಮರತಿಯನ್ನು ಅನುಭವಿಸುವ ಯಾವುದೇ ಸ್ವಾಮಿಗಳಿಗೆ, "ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು. ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ ಹಿಂದೆ ಮಾಡಿದ ಭಕ್ತಿಗೆ ಹಾನಿ. ಲಕ್ಯಗಾವುದ ದಾರಿಯ ಹೋಗಿ ಭಕ್ತನು ಭಕ್ತನ ಕಾಂಬುದು ಸದಾಚಾರ. ಅಲ್ಲಿ ಕೂಡಿ ದಾಸೋಹವ ಮಾಡಿದಡೆ ಕೂಡಿಕೊಂಬನು ನಮ್ಮ ಕೂಡಲಸಂಗಯ್ಯ" ಅಂದರೆ ಒಬ್ಬ ಭಕ್ತನು ಮತ್ತೊಬ್ಬ ಭಕ್ತನ ಮನೆಗೆ ಬಂದರೆ ಉಪಚಾರ ಮಾಡಬೇಕು. ಆದರೆ, ತಾನೊಬ್ಬ ದೇವರಂತೆ, ಒಡೆಯನಂತೆ ಕಾಲತೊಳೆಯಿಸಿಕೊಂಡರೆ ಈ ಹಿಂದೆ ಮಾಡಿರುವ ಭಕ್ತಿಯ ಪುಣ್ಯವೆಲ್ಲಾ ನಾಶವಾಗಿ ಹೋಗುವುದು ಎಂದು ಹೇಳುವ ಬಸವಣ್ಣ ಅರ್ಥವಾಗುವುದಿಲ್ಲ. ಇನ್ನೂ ಮುಂದುವರಿದು, ಕೃಷ್ಣಾಜಿನದ ಮೇಲೋ ಅಥವಾ ಹುಲಿ ಚರ್ಮದ ಮೇಲೋ ಕುಳಿತುಕೊಂಡು ಹುಲಿ ರಾಷ್ಟ್ರೀಯ ಪ್ರಾಣಿಯಾಗಿರುವುದರಿಂದ ದೇಶದಲ್ಲಿ ಭಯೋತ್ಪಾದನೆ ಹೆಚ್ಚಿದೆ ಎನ್ನುವಂತಹ ಪೇಜಾವರಶ್ರೀಗಂತೂ ಅರ್ಥವೇ ಆಗುವುದಿಲ್ಲ. ಅದಕ್ಕೇ ಅವರು ತಾವೇ ನಿಲ್ಲಿಸುವ ಸಾಮಾಜಿಕ ಪಿಡುಗಾದ ಅಸ್ಪೃಶ್ಯತೆಯ ಆಚರಣೆಯ ಅಂಗವಾದ ಪಂಕ್ತಿಬೇಧಕ್ಕೆ ಬಸವಣ್ಣನನ್ನು ಎಳೆದು ತರುವ ಧಾರ್ಷ್ಟ್ಯ ಪ್ರದರ್ಶಿಸುತ್ತಾರೆ.

ನಿಜ ಹೇಳಬೇಕೆಂದರೆ, "ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ" ಹಾಲು ಕೊಡದ ಹಸುವಿಗೆ ಹಾಲು ಕುಡಿಯದ ಕರುವ ಬಿಡುವಂತೆ ಅವರ ಘನಪಂಕ್ತಿಯಲ್ಲಿ ಕುಳಿತು ಉಂಡು ಸಾರ್ಥಕವಾಗುವುದೇನೂ ಇಲ್ಲ, ಅವರ ಪಂಕ್ತಿಯೂ ಹಿಡಿಸದು, ಅವರ ಊಟವೂ ಬೇಡದ್ದು. ಆದರೆ ಶತಶತಮಾನಗಳ ಅವರ ಮೈಲಿಗೆಯ ಮನಸ್ಥಿತಿಯ ಕಂಡು ಮಡಿಯಾಗುವುದು ಎಂದೋ ಎಂದು ಜಿಗುಪ್ಸೆ ಮೂಡುತ್ತದೆ.

ಅಂದ್ಯಾವುದೋ ದಿನ ಕಲ್ಯಾಣದಲ್ಲಿ ಅದಾರೋ ಹಸಿದವರು ಅಣ್ಣನ ಮನೆಗೆ ಊಟಕ್ಕೆಂದು ಹೋಗುವಾಗ ಕಂಡವರಾರೋ ಹೇಳಿದರು, ಲಿಂಗದೀಕ್ಷೆ ಪಡೆದ ಶರಣರಿಗಲ್ಲಿ ಪ್ರಸಾದವೆಂದು. ಅದಕ್ಕೆ ಆ ಹಸಿದವರು ಕಾಯಿಗಳನ್ನು ಲಿಂಗಗಳಂತೆ ಕೊರಳಲ್ಲಿ ಕಟ್ಟಿಕೊಂಡು ಪ್ರಸಾದಕ್ಕೆ ಬಂದರಂತೆ. ಅದನ್ನು ಗುರುತಿಸಿದ ಇತರರು ಇವರು ಕಳ್ಳರೆಂದು ಅಣ್ಣನೆದುರಲ್ಲಿ ಕೊರಳ ಬಟ್ಟೆಯ ಬಿಚ್ಚೆ ಕಾಯಿಗಳು ಲಿಂಗಗಳಾಗಿದ್ದವಂತೆ. ಇದು ಒಂದು ರೂಪಕ. ಬರಿಯ ಲಿಂಗದೀಕ್ಷೆ ಪಡೆದ ಶರಣರಿಗೆ ಮಾತ್ರವೇ ಮಹಾಮನೆಯಲ್ಲಿ ಸ್ಥಾನ ಎಂದುಕೊಂಡಿದ್ದವರಿಗೆ ಇದೊಂದು ಉತ್ತರದ ರೂಪಕ, ಶರಣರಲ್ಲದವರು ಸೋಗಿನಲ್ಲಿ ಅಲ್ಲಿಗೆ ಹೋದರೂ ಅಲ್ಲಿನ ಸಂಸರ್ಗದಿಂದ ನಿಜವಾದ ಶರಣರೇ ಆಗುತ್ತಿದ್ದರು ಎಂದು.

"ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ ಕೂಡಲಸಂಗಯ್ಯನಲ್ಲದೆ ಮತ್ತಾರೂ ಅಲ್ಲ" ಎನ್ನುವ ಅಣ್ಣನಿಗೆ ಮನೆಗೆ ಬಂದು ವಡವೆ ಕದಿಯುವಾಗ ಆವನಿಗೆ ಕದಿಯಲು ಬಿಡದೇ ಹೋದಳೆಂದು ಮಡದಿಯ ಮೇಲೇ ಮುನಿಸು.

ವ್ಯಕ್ತಿಗತವಾಗಿ ಆಗುವಂತಹ ಆಧ್ಯಾತ್ಮಿಕ ಸಾ
ಸಾಮಾಜಿಕ ಜೀವನ ಪದ್ಧತಿಯನ್ನಾಗಿಸಿದ ಅಣ್ಣ
ಎನಿಸದೇ ದಾಸೋಹಂ ಎಂದೆನಿಸಯ್ಯಾ" ಎಂದು
ಕಡೆಗೆ ತಿರುಗಬಹುದಾದ ಆಚರಣೆಗಳನ್ನು ಜ
ತಿರುಗಿಸುವ ವಿಚಾರ ಮಾಡುತ್ತಾರೆ. ಹಾಗೆ
"ಕುಲವನರಸುವರೇ ಶರಣರಲ್ಲಿ, ಜಾತಿ ಸಂಕರವಾ
ಎಂದು ನೇರ ಜಾತಿಯ ಚೌಕಟ್ಟನ್ನು
ವರ್ಣಾಶ್ರಮಧರ್ಮದ ಶೃಂಖಲೆಯನ್ನು ಕಿತ್ತೊ
ಇಂತಹ ಅಣ್ಣನ ಪಂಕ್ತಿಬೇಧಕ್ಕೆ ಎಳೆವ ಸಣ್ಣವರಿಗೆ
ಆ ದಾರಿಯಲ್ಲಿ ಹೋಯಿತ್ತೆಂದಡೆ, ಆಡೂ ಆ
ಹೋಯಿತ್ತೆನ್ನಬಹುದೆ?" ಎಂದು ಅಣ್ಣನ ಮಾ
ಕೇಳಬಲ್ಲೆ.


ಪೇಜೂ ಪುಟ್ಟನಿಗೆ ಅಣ್ಣನ ಪಾಠದ
ಬಹುಶಃ ದೇವತೆಗಳಲ್ಲೂ ಶ್ರೇಣಿ ಭೇದ ಮಾಡು
ಸಮಾನತೆಯ ಪಾಠ ಆಗಿರಲಿಕ್ಕೇನೋ. ಅಣ್ಣನ
"ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ
ಎಂದು ಬಿಟ್ಟುಬಿಟ್ಟರೆ ಪೇಜಾವರರ ಮಾಗಿದ
ಪೇಜೂ ಪುಟ್ಟ ಸಣ್ಣದಾಗಿಯೇ ಲೆ
ಉಳಿದುಕೊಂಡುಬಿಡುತ್ತದೆ.

ಅಣ್ಣನು ಹೇಳಿಕೊಟ್ಟಿರುವುದು ಹೊರಗಿನ
ನಿರ್ಧಾರ ತೆಗೆದುಕೊಳ್ಳಬೇಡ ಎಂದು.

ಮನೆ ನೋಡಾ ಬಡವರು: ಮನ ನೋ
ಸೋಂಕಿನಲ್ಲಿ ಶುಚಿ: ಸರ್ವಾಂಗ ಕಲಿಗಳು, ಪಸ
ಬಂದ ತತ್‌ಕಾಲಕೆ ಉಂಟು, ಕೂಡಲಸಂಗ
ಸ್ವತಂತ್ರಧೀರರು.

■ ಯೋಗೇಶ್ ಮ

ಕೊಪ್ಪಳ: ಇಳಿ ವಯಸ್ಸಿನ ಜೆಡಿಎಸ್‌ಗೆ ಯೌವ್ವನದ 'ಲೇಹ್ಯ'?





ಕೊಪ್ಪಳದಲ್ಲಿ ಒಂದು ಕಾಲಕ್ಕೆ ಜನತಾ ಪರಿವಾರದ ಬೇರು ಜೋರಾಗೇ ಇತ್ತು. ಇವತ್ತು ಬೇರೆಬೇರೆ ಪಾರ್ಟಿಗಳಲ್ಲಿ ಹುಲುಸಾಗಿ ಬೆಳೆದುನಿಂತಿರುವ ಸಚಿವ ಬಸವರಾಜ ರಾಯರೆಡ್ಡಿ, ಸಂಸದ ಸಂಗಣ್ಣ ಕರಡಿ, ಮಾಜಿಮಂತ್ರಿ ಅಮರೇಗೌಡ ಬಯ್ಯಾಪೂರ ಇನ್ನಿತರರು ಜನತಾ ಪರಿವಾರದಿಂದ ಬಂದವರು. ಆದರೆ ಈಗ ಜನತಾ ಪರಿವಾರದ ಪಳೆಯುಳಿಕೆ ಜೆಡಿಎಸ್ ಜಿಲ್ಲೆಯಲ್ಲಿ ಆ ಪರಿವರ್ಚಸ್ಸು ಉಳಿಸಿಕೊಂಡಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಜಿಲ್ಲೆಯ ಮಟ್ಟಿಗೆ ಜೆಡಿಎಸ್ ಇಳಿವಯಸ್ಸಿನ ಹಾದಿಯಲ್ಲಿದೆ. ಇಡೀ ಜಿಲ್ಲೆಯಲ್ಲಿ ಜೆಡಿಎಸ್‌ನ ಶಾಸಕ ಅಂತ ಇರೋದು ಇಕ್ಬಾಲ್ ಅನ್ಸಾರಿ ಮಾತ್ರ. ಅವರು ಕೂಡಾ ಇತ್ತೀಚೆಗೆ ಗೌಡರ ಹಟ್ಟಿಯ ಜೊತೆ ಮುನಿಸಿಕೊಂಡು ಪಕ್ಷದಿಂದ ಒಂದು ಕಾಲು ಹೊರಗಿಟ್ಟು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಈ ನಡುವೆ ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ಶತಾಯಗತಾಯ ಅಧಿಕಾರ ಹಿಡಿಯಲೇಬೇಕು ಅಂತ ಹಠಕ್ಕೆ ಬಿದ್ದಿರುವ ಎಚ್.ಡಿ.ಕುಮಾರಸ್ವಾಮಿ ಉತ್ತರ ಕರ್ನಾಟಕದ ಗುತ್ತಿಗೆ ಪಡೆದವರಂತೆ ಹುಬ್ಬಳ್ಳಿಯಲ್ಲೇ ಮನೆ ಮಾಡಿ ತಿಂಗಳಲ್ಲಿ ಹತ್ತು ದಿನ ಉತ್ತರ ಕರ್ನಾಟಕದ ಉದ್ಧಕ್ಷಣೆಗೆ ಮೀಸಲಿಟ್ಟ ನಂತರ ಕೊಪ್ಪಳದಲ್ಲಿ ಮತ್ತೆ ಜೆಡಿಎಸ್ ಚಿಗುರಿಕೊಳ್ಳಲು ಸಾಧ್ಯವಿದೆಯಾ ಅಂತ ರಾಜಕೀಯ ಪರಿಣಿತರು ಲೆಕ್ಕಾಚಾರ ಹಾಕುತ್ತಿದ್ದಾರೆ.

1999ರಲ್ಲಿ ಅಖಂಡ ಜನತಾದಳವು ಜೆ.ಡಿ.ಎಸ್, ಜೆ.ಡಿ.ಯು ಅಂತ ಇಬ್ಭಾಗ ಆದಾಗ ಜೆ.ಡಿ.ಎಸ್ ಜೊತೆ ಗುರುತಿಸಿಕೊಂಡದ್ದು ಕೊಪ್ಪಳದ ಕುರುಬ ಸಮಾಜದ ನಾಯಕ ಹನುಮಂತಪ್ಪ ಅಂಗಡಿ, ಎಂ.ವಿ.ಪಾಟೀಲ್ ಹಲಗೇರಿ, ಕುಷ್ಟಗಿಯ ಮಾಜಿ ಶಾಸಕ ಕೆ.ಶರಣಪ್ಪ ವಕೀಲ, ಯಲಬುರ್ಗಾದ ತಾಲೂಕಾ ಕುರುಬ ಸಮಾಜದ ಮುಖಂಡ ವೀರನಗೌಡ ಪೋಲಿಸ್ ಪಾಟೀಲ್ ಹಾಗೂ ಕೊಪ್ಪಳದ ಮಾಜಿ ಶಾಸಕ ಬಸವರಾಜ ಹಿಟ್ನಾಳ. ಆ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಕುಷ್ಟಗಿಯಿಂದ ಕೆ. ಶರಣಪ್ಪ ವಕೀಲ, ಕೊಪ್ಪಳದಿಂದ ಕೆ. ಬಸವರಾಜ ಹಿಟ್ನಾಳ, ಯಲಬುರ್ಗಾದಿಂದ ವೀರನಗೌಡ ಪೋಲಿಸ್ ಪಾಟೀಲ್ ಸ್ಪರ್ಧಿಸಿ ಸೋಲುಂಡರು. 2004ರ ಚುನಾವಣೆ ವೇಳೆಗೆ ಜಿಲ್ಲೆಯಲ್ಲಿ ಜೆ.ಡಿ.ಎಸ್.ಗೆ ಒಂದಿಷ್ಟು ಬಲಬಂದಂತಿತ್ತು. ಗಂಗಾವತಿಯಿಂದ ಇಕ್ಬಾಲ ಅನ್ಸಾರಿ ಗೆದ್ದರೆ, ಯಲಬುರ್ಗಾದಿಂದ ಸ್ಪರ್ಧಿಸಿದ್ದ ಸಿ.ಎಚ್.ಪಾಟೀಲ್, ಕುಷ್ಟಗಿಯಿಂದ ಸ್ಪರ್ಧಿಸಿದ್ದ ಶರಣಪ್ಪ ವಕೀಲರು ಸೋತರೂ ಮತಗಳಿಕೆಯಲ್ಲಿ ಗಂದದ್ದು ಪರಿಣಾಮಕಾರಿ ಹೋರಾಟ ನಡೆಸಿ ಜೆಡಿಎಸ್‌ನ ಬಲ ಹೆಚ್ಚಿಸಿದ್ದರು. ಗೆದ್ದ ಇಕ್ಬಾಲ ಅನ್ಸಾರಿ ಜಿಲ್ಲೆಯಿಂದ ಮಂತ್ರಿಯಾದ ನಂತರ ಜೆ.ಡಿ.ಎಸ್. ಚೆನ್ನಾಗೇ ಚಿಗುರಿತು. ಫಲವಾಗಿ 2005ರ ಜಿ.ಪಂ ಚುನಾವಣೆಯಲ್ಲಿ ಸಿ.ಎಚ್.ಪಾಟೀಲ್ ಸೇರಿದಂತೆ 7 ಕ್ಕೂ ಹೆಚ್ಚು ಜಿ.ಪಂ. ಸದಸ್ಯರು ಜೆ.ಡಿ.ಎಸ್‌ನಿಂದ ಆಯ್ಕೆಯಾಗಿದ್ದರು.

ಚೇತರಿಕೆಯ ಹಾದಿಯಲ್ಲಿದ್ದ ಜೆಡಿಎಸ್‌ಗೆ ದೊಡ್ಡ ಆಘಾತ ಕೊಟ್ಟದ್ದು ಎಚ್.ಡಿ.ಕುಮಾರಸ್ವಾಮಿ! ಬಿಜೆಪಿಗಳೊಂದಿಗೆ ಸಮ್ಮಿಶ್ರ ಸರಕಾರದ ಸುಖ ಅನುಭವಿಸಿ, ಕೊನೆಗೆ ಚೆಡ್ಡಿಗಳಿಗೇ ಕೈಕೊಟ್ಟದ್ದು ಜೆಡಿಎಸ್ ಅನ್ನು ಇಡೀ ರಾಜ್ಯದಲ್ಲಿ ಅಡ್ಡಡ್ಡ ಮಲಗಿಸಿತು. ಕೊಪ್ಪಳದಲ್ಲೂ ಅದರ ಎಫೆಕ್ಟಿನಿಂದಾಗಿ ಅಂದಿನ ಮಂತ್ರಿ ಇಕ್ಬಾಲ ಅನ್ಸಾರಿ ಗಂಗಾವತಿಯಲ್ಲಿ ಬಿ.ಜೆ.ಪಿ.ಯ ಅನಾಮಧೇಯ ಅಭ್ಯರ್ಥಿ ಪರಣ್ಣ ಮನವಳ್ಳಿ ವಿರುದ್ಧ ಸೋಲು ಕಂಡರೆ, ಕುಷ್ಟಗಿಯಲ್ಲಿ ಜೆ.ಡಿ.ಎಸ್‌ನ ಖಾಯಂ ಅಭ್ಯರ್ಥಿ ಶರಣಪ್ಪ ವಕೀಲರು ಬಯ್ಯಾಪೂರ ವಿರುದ್ಧ 700 ಮತಗಳ ಅಂತರದಿಂದ ಸೋಲುಂಡರು. ಇದ್ದುದರಲ್ಲಿ ಕೊಪ್ಪಳದಲ್ಲಿ ಗೆಲುವಿನ ನಗೆ ಬೀರಿದ್ದ ಸಂಗಣ್ಣ ಕರಡಿ ಮಾತ್ರ ಜೆ.ಡಿ.ಎಸ್.ನ ಮಾನ ಉಳಿಸಿದ್ದರು. ಈ ನಡುವೆ ದೇವೆಗೌಡರು ಟಿ.ವಿ. ಸಂದರ್ಶನವೊಂದರಲ್ಲಿ ತಮ್ಮ ಬಗ್ಗೆ ಹಗುರವಾಗಿ ಮಾತನಾಡಿದರೆಂದು ಸಿಟ್ಟಿಗೆದ್ದ ಇಕ್ಬಾಲ್ ಅನ್ಸಾರಿ ಜೆ.ಡಿ.ಎಸ್.ಗೆ ಗುಡ್‌ಬೈ ಹೇಳಿ ಕಾಂಗ್ರೆಸ್ ಸೇರಿಕೊಂಡರೆ, ಆಪರೇಷನ್ ಕಮಲಕ್ಕೆ ಬಿಕರಿಯಾದ ಸಂಗಣ್ಣ ಕರಡಿ ಬಿಜೆಪಿ ಪಾಲಾಗುವ ಮೂಲಕ ಜೆಡಿಎಸ್ ಜಿಲ್ಲೆಯಲ್ಲಿ ಸಂಪೂರ್ಣ ನಾಮಾವಶೇಷವಾಗುವ ಹಂತಕ್ಕೆ ಬಂದು ನಿಂತಿತ್ತು. ಆದರೆ ಕಾಂಗ್ರೆಸ್ ಸೇರಿದ್ದ ಇಕ್ಬಾಲ್ ಸಾಹೇಬರು ಕೈ ಪಾರ್ಟಿಯ ಪುರಾತನ ಕುಳಗಳಾದ ಮಾಜಿ ಶಾಸಕ ಎಚ್.ಆರ್.ಶ್ರೀನಾಥ, ಮಾಜಿ ಮಂತ್ರಿ ಎಂ.ಮಲ್ಲಿಕಾರ್ಜುನ ನಾಗಪ್ಪರ ಕಾಟ ತಾಳದೆ ಹಳೆಗಂಡನ ಪಾದವೇ ಗತಿಯೆಂಬಂತೆ ಜೆ.ಡಿ.ಎಸ್‌ಗೆ ವಾಪಾಸಾಗಿ 2013ರ ಚುನಾವಣೆಯಲ್ಲಿ ಗಂಗಾವತಿಯಿಂದ ಮತ್ತೆ ಗೆದ್ದಿದ್ದರಿಂದ ಜಿಲ್ಲೆಯಲ್ಲಿ ಜೆಡಿಎಸ್ ಗುಟುಕು ಜೀವ ಉಳಿಸಿಕೊಂಡಿದೆ.

ಹಾಗೆ ನೋಡಿದರೆ 2013ರ ಚುನಾವಣೆಯಲ್ಲಿ ಯಲಬುರ್ಗಾ ಕ್ಷೇತ್ರದಲ್ಲಿ ಜೆ.ಡಿ.ಎಸ್‌ಗೆ ಉತ್ತಮ ವಾತಾವರಣವಿತ್ತು, ಆದರೆ ಅದನ್ನು ಹಾಳುಗೆಡವಿದ್ದು ಸ್ವತಃ ಎಚ್.ಡಿ.ಕುಮಾರಸ್ವಾಮಿ. ಈ ಕ್ಷೇತ್ರದಲ್ಲಿ ಜೆ.ಡಿ.ಎಸ್‌ಗೆ ಭದ್ರ ಬುನಾದಿ ಹಾಕಿದ್ದು ಅಂದಿನ ಜಿ.ಪಂ. ಸದಸ್ಯ ಸಿ.ಎಚ್.ಪೋಲಿಸ್ ಪಾಟೀಲ್‌ರು. ಈ ಮೊದಲು ಕಟ್ಟಾ ಕಾಂಗ್ರೆಸ್ಸಿನವರಾಗಿದ್ದ ಅವರು 2003ರಲ್ಲಿ ಅಂದಿನ ಕಾಂಗ್ರೆಸ್ ಶಾಸಕ ಶಿವಶರಣಪ್ಪಗೌಡ ಪಾಟೀಲ್‌ರೊಂದಿಗೆ ಮುನಿಸಿಕೊಂಡು ಜೆ.ಡಿ.ಎಸ್‌ಗೆ ಬಂದಿದ್ದರು. 2004ರ ಎಂಎಲ್‌ಎ ಚುನಾವಣೆಯಲ್ಲಿ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಸೋತರೂ ನಂತರ ನಡೆದ ಜಿ.ಪಂ ಚುನಾವಣೆಯಲ್ಲಿ ಗೆದ್ದರು. 7 ವರ್ಷ ಜೆ.ಡಿ.ಎಸ್. ಜಿಲ್ಲಾಧ್ಯಕ್ಷರಾಗಿ ಪಕ್ಷ ಸಂಘಟಿಸಿದ್ದ ಅವರಿಗೆ 2013ರ ಎಲೆಕ್ಷನ್‌ನಲ್ಲಿ ಗೆಲುವಿನ ಛಾನ್ಸು ದಟ್ಟವಾಗಿತ್ತು, ಆದರೆ ಅಂತವರಿಗೆ ಟಿಕೇಟು ಕೊಟುವುದು ಬಿಟ್ಟು ಸ್ವತಃ ಕುಮಾರಸ್ವಾಮಿಯವರು ಬಳ್ಳಾರಿಯ ಗಣಿಕುಳ ಜಿ.ಟಿ.ಪಂಪಾಪತಿಗೆ ಬರೋಬ್ಬರಿ 50 ಲಕ್ಷಕ್ಕೆ ಟಿಕೇಟು ಮಾರಿಕೊಂಡು ಒಂದು ಕ್ಷೇತ್ರವನ್ನು ಸುಖಾಸುಮ್ಮನೆ ಸೋಲಿನ ದವಡೆಗೆ ತಳ್ಳಿದರು. ಸಿಟ್ಟಿಗೆದ್ದ ಸಿ.ಎಚ್.ಪಾಟಿಲ್‌ರು ಯಡಿಯೂರಪ್ಪ ಸ್ಥಾಪಿತ ಕೆ.ಜೆ.ಪಿಗೆ ವಲಸೆ ಹೋಗಬೇಕಾಯ್ತು.

ಇನ್ನು ಕುಷ್ಟಗಿಯಲ್ಲಿ 18 ವರ್ಷಗಳ ಕಾಲ ಜೆ.ಡಿ.ಎಸ್. ಪಕ್ಷದಲ್ಲಿಯೇ ಗುರುತಿಸಿಕೊಂಡಿದ್ದ ಮಾಜಿ ಶಾಸಕ ಕೆ.ಶರಣಪ್ಪ ವಕೀಲರು 2013ರ ಚುನಾವಣೆಯಲ್ಲಿ ಸೋಲುಂಡು ಸತತ 4 ವಿಧಾನಸಭಾ ಚುನಾವಣೆಯಲ್ಲಿ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಪರಾಭವಗೊಂಡ ಹತಾಶೆಯಲ್ಲಿ ಜನತಾ ಪರಿವಾರಕ್ಕೆ ವಿದಾಯ ಹೇಳಿ ಬಿ.ಜೆ.ಪಿ ಸೇರಿಕೊಂಡರು. ಈಗವರ ಮಗ ಕೆ.ಮಹೇಶ ಜಿ.ಪಂ ಸದಸ್ಯ. ಹೀಗೆ ನಾಯಕರನ್ನು ಕಳೆದುಕೊಂಡು ಅನಾಥವಾಗುತ್ತಲೇ ಬಂದ ಜೆಡಿಎಸ್‌ಗೆ ಈಗ ಇಕ್ಬಾಲ್ ಅನ್ಸಾರಿಯೂ ವಿದಾಯ ಹೇಳಲು ಸಜ್ಜಾಗಿರುವುದು ದೊಡ್ಡ ಹೊಡೆತವೇ ಸರಿ.

ಸದ್ಯ ಎಂ.ಎಸ್ ಮಹಾಂತಯ್ಯ ಮಠ, ಎಂ.ವಿ.ಪಾಟೀಲ ಹಲಗೇರಿಯಂತಹ ನಾಯಕರು ಜೆಡಿಎಸ್‌ಗೆ ಆಸರೆಯಾಗಿದ್ದಾರಷ್ಟೆ. ಕುಮಾರಸ್ವಾಮಿಯವರ ಉತ್ತರ ಕರ್ನಾಟಕ ವಾಸ್ತವ್ಯ ಯಾವ ಪರಿಣಾಮ ಬೀರುತ್ತೋ ಕಾದುನೋಡಬೇಕು. ಅಂದಹಾಗೆ, ಇತ್ತೀಚೆಗಷ್ಟೆ ಯಲಬುರ್ಗಾ ಕ್ಷೇತ್ರದ ಹಿರಿಯ ಮುಖಂಡ ಹಾಗೂ ರಾಜ್ಯ ಪಂಚಮಸಾಲಿ ಸಮಾಜದ ರಾಜ್ಯ ಉಪಾಧ್ಯಕ್ಷರಾದ ಶ್ರೀಪಾದಪ್ಪ ಅಧಿಕಾರಿಯವರು ಬಿ.ಜೆ.ಪಿಗೆ ಟಾಟ ಮಾಡಿ ಜೆ.ಡಿ.ಎಸ್ ಸೇರಿಕೊಂಡಿರುವುದು ಪಕ್ಷಕ್ಕೆ ಒಂದಿಷ್ಟು ಭರವಸೆ ತಂದಿರಬಹುದು. ಶ್ರೀಪಾದಪ್ಪ ಅಧಿಕಾರಿ ಈ ಹಿಂದೆ ಮೂರು ಬಾರಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತವರು. ಹಾಗಾಗಿ ಹೆಚ್ಚಿನ ಭರವಸೆ ಇಟ್ಟುಕೊಳ್ಳುವುದೂ ಪಕ್ಷಕ್ಕೆ ದುಬಾರಿಯಾದೀತು. ಕುಮಾರಸ್ವಾಮಿ ಮಾಡಿದ ಟಿಕೆಟ್ ದ್ರೋಹದಿಂದಾಗಿ ಜೆಡಿಎಸ್‌ನಿಂದ ಸಿಡಿದು ಹೋಗಿದ್ದ ಮಾಜಿ ಜಿಪಂ ಸದಸ್ಯ ಸಿ.ಎಚ್. ಪಾಟೀಲ್‌ರು ಮತ್ತೆ ತೆನೆ ಪಕ್ಷದತ್ತ ಮುಖಮಾಡಿದ್ದಾರೆ ಎನ್ನುವ ವದಂತಿಗಳು ಹರಿದಾಡುತ್ತಿದ್ದು ಇನ್ನು ಯಾವುದೂ ದೃಢವಾಗಿಲ್ಲ. ಕುಷ್ಟಗಿ ವಿಧಾನಸಭಾ ಕ್ಷೇತ್ರದಲ್ಲಿ ದೇವೇಗೌಡರು ಜನತಾ ಪಕ್ಷ ಕಟ್ಟಿದಾಗ ಅವರೊಂದಿಗೆ ಹೆಜ್ಜೆ ಹಾಕಿದ್ದ ಪ್ರಖ್ಯಾತ ವಕೀಲ ನಾಗಪ್ಪ ಸೂಡಿ ಹಾಗೂ ಸಿ.ಎಂ.ಹಿರೇಮಠ ಮತ್ತಿತರರು ಪಕ್ಷ ಸಂಘಟನೆಗೆ ಓಡಾಡುತ್ತಿದ್ದಾರೆ. ತಾಲ್ಲೂಕು ಪಕ್ಷಾಧ್ಯಕ್ಷನೂ ಆಗಿರುವ ಹಿರೇಮಠರು ಕ್ಷೇತ್ರದ ಬಹುಸಂಖ್ಯಾತ ಪಂಚಮಸಾಲಿ ಸಮಾಜಕ್ಕೆ ಸೇರಿದವರಾಗಿದ್ದು ಅವರಿಗೇ ಟಿಕೇಟು ನಿಕ್ಕಿ ಎನ್ನಲಾಗುತ್ತಿದೆ. ಅತ್ತ ಬಂಡಾಯವೆದ್ದಿರುವ ಇಕ್ಬಾಲ್ ಅನ್ಸಾರಿಗೆ ಪೆಟ್ಟುಕೊಡಲು ಮಾಜಿ ಜಿ.ಪಂ ಉಪಾಧ್ಯಕ್ಷ ಕಂ ಪ್ರಬಲ ಲಿಂಗಾಯತ ರೆಡ್ಡಿ ಸಮಾಜದ ವಿರೂಪಾಕ್ಷಗೌಡ ಹೇರೂರಗೆ ಜೆಡಿಎಸ್ ಮಣೆ ಹಾಕುತ್ತಿದೆ. ವಿರೂಪಾಕ್ಷಗೌಡರ ಜೆ.ಡಿ.ಎಸ್ ಸೇರ್ಪಡೆಯಿಂದಾಗಿ ಗಂಗಾವತಿಯ ರಾಜಕಾರಣದಲ್ಲಿ ಸಣ್ಣ ಸಂಚಲನ ಶುರುವಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಜೆಡಿಎಸ್‌ಗೆ ನವಚೈತನ್ಯದ ಲೇಹ್ಯ ತಿನ್ನಿಸುವ ಕೆಲಸ ಇನ್ನೂ ಆರಂಭವಾಗಿಲ್ಲ. ಆದರೆ ಚುನಾವಣೆ ಸಮೀಪಿಸಿದಂತೆ ಬೇರೆಬೇರೆ ಪಕ್ಷಗಳ ಅತೃಪ್ತರು ನಿರಾಶ್ರಿತ ಶಿಬಿರಕ್ಕೆ ಹುಡುಕಾಟ ನಡೆಸುವುದರಿಂದ ಜೆಡಿಎಸ್ ಕೊಂಚ ಸದ್ದು ಮಾಡುತ್ತಾ ಕಾದು ನೋಡಬೇಕು.

■ ಸ. ಶರಣಪ್ಪ ಪಾಟೀಲ್

ಇದು ಕೇವಲ ಸಿಮ್ಮನ ಸಂಶೋಧನೆಯಷ್ಟೇ ಆಗಿದ್ದರೆ ಹುಚ್ಚಾಸ್ಪತ್ರೆಯತ್ತ ಕೈ ತೋರಿಸಿ ಸುಮ್ಮನಾಗಬಹುದಿತ್ತು, ಆದ
ಇಡೀ ಬಿಜೆಪಿ, ಸಂಘ ಪರಿವಾರ, ಅದರ ಮೀಡಿಯಾ ಸಮಿತಿಗಳೆಲ್ಲರೂ ಟಿಪ್ಪೂ ಕುರಿತಂತೆ ಇದೇ ವಾದ ಮಂಡಿಸ
ತ್ತಾರೆ. ಅದು ಮನುವಾದದ ಪ್ರೇರಿತ ವಾದ ಕೂಡ. ಇದರ ಅತಿರೇಕ ಮತ್ತು ಹುಚ್ಚಾಟ ಹೇಗಿದೆಯೆಂದರ
ಮದಕರಿನಾಯಕ ಕರ್ನಾಟಕದ ಬೇಡರ ಪ್ರತಿನಿಧಿ ಮತ್ತು ಟಿಪ್ಪೂ ಮುಸ್ಲೀಮರ ಸಂಕೇತ
ಆವತ್ತು ಚಿತ್ರದುರ್ಗದ ಮೇಲೆ ಹೈದರಾಲಿ ದಂಡೆತ್ತಿ ಬಂದದ್ದು ವಾಲ್ಮೀ
ಬೇಡರ ವಿರುದ್ಧದ ಆತನ ದ್ವೇಷದಿಂದಾದರೆ, ಮದಕರಿ ನಾಯಕನ ಸೇನೆಯಲ್ಲಿ
ಮುಸ್ಲೀಮರೇನು ಬೇಡರ ಮತ್ತಾತನ ಸಂಬಂಧಿಕರ

ಟಿಪ್ಪೂ ತ್ಯಾಗಕ್ಕೂ ಬ್ರಾಗಳ ಮಸಿ



ಟಿಪ್ಪೂ ಸುಲ್ತಾನ್

ಇಮ್ಮಡಿ ಕೆಂಪೇಗೌಡರ 'ಭೈರವ' ನಾಣ್ಯದ ತಪ್ಪಿಗೆ ವಿಜಯನಗರದ ದೊರೆ ರಾಮರಾಯ ಅವರನ್ನು ಐದು ವರ್ಷ ಕಾಲ ಜೈಲಲ್ಲಿಟ್ಟ ಸೇಡಿಗೆ ಈಗ ಒಕ್ಕಲಿಗರು ಗೊಲ್ಲರನ್ನೆಲ್ಲ ಅಟ್ಟಾಡಿಸಿ ಹೊಡೆಯಲು ಸಾಧ್ಯವೆ? ಕೆಳದಿಯ ರಾಣಿ ಚೆನ್ನಮ್ಮನ ವಿರುದ್ಧ ಶಿವಾಜಿಯ ಸೇನೆ ಮಾಡಿದ ಅಪಚಾರಕ್ಕೀಗ ಲಿಂಗಾಯತರೆಲ್ಲ ಮರಾಠರ ಮಾರಣಹೋಮ ಮಾಡಬೇಕೆಂದರೆ ಹೇಗೆ? ಅದೇ ರೀತಿ ಶೃಂಗೇರಿಯನ್ನು ಲೂಟಿಗೈದ ಮರಾಠರ ವಿರುದ್ಧ ಬ್ರಾಹ್ಮಣರು ಪರಿಹಾರ ಕೋರಿ ಕೋರ್ಟ್ ಕಟಕಟೆ ಹತ್ತಲು ಸಾಧ್ಯವೆ? ಬ್ರಿಟಿಷರ ವಿರುದ್ಧ ಕಿತ್ತೂರು ಚನ್ನಮ್ಮನ ಕುಲಜರಾದ ಲಿಂಗಾಯತರೆಲ್ಲ ಸೇಡಿಗೆ ನಿಂತು ಕ್ರಿಶ್ಚಿಯನ್ನರನ್ನೋ ಆಂಗ್ಲೋ ಇಂಡಿಯನ್ನರನ್ನೋ ಕೊಲ್ಲುತ್ತೇವೆಂದು ಹೊರಟರೆ ಏನಾಗಬಹುದು?


ಇದೇ ವಾದವನ್ನು ಇನ್ನೂ ಕೊಂಚ ಹಿಂದಕ್ಕೆ ಅಂದರೆ ಪೌರಾಣಿಕ ಯುಗಕ್ಕೆ ಕೊಂಡೊಯ್ದು ರಾಮ-ರಾವಣರ ಯುದ್ಧ, ಕೌರವ-ಪಾಂಡವರ ಕುರುಕ್ಷೇತ್ರ, ಕೃಷ್ಣ-ಜಾಂಬವಂತರ ಕಾಳಗ, ವಾಲಿ ವಧೆ; ಹಿರಣ್ಯಕಶಪು-ಉಗ್ರನರಸಿಂಹ ಕಾಳಗ, ಬಲಿ-ವಾಮನ ಸಮರ-ಇತ್ಯಾದಿಗಳೆಲ್ಲದರ ಜಾತಿ ಮೂಲವನ್ನಾಧರಿಸಿ ಈಗ ಒಬ್ಬೊಬ್ಬರು ಒಂದೊಂದು ಜಾತಿಯೆಂದು ಮತ್ತೊಂದು ಜಾತಿ ಮುಗಿಸ ಹೊರಟರೆ ಬಹುಶಃ ಭಾರತದಲ್ಲಿ ಪ್ರಾಣಿಪಕ್ಷಿ ಗಿಡಮರಗಳ ಹೊರತಾಗಿ ಮನುಷ್ಯರ್‍ಯಾರೂ ಉಳಿಯಲು ಸಾಧ್ಯವೇ ಇಲ್ಲವೇನೋ!

ಇದೆಲ್ಲ ಹೇಗೆ ಹುಚ್ಚಾಟವಾಗಿ, ತಲೆ ಕೆಟ್ಟವರ ವಿಕೃತಿಯಾಗಿ, ದುರುಳರ ಷಡ್ಯಂತ್ರವಾಗಿ ಈ ಕಾಲದ ನಾಗರಿಕರಿಗೆಲ್ಲ ಅರ್ಥವಾಗುತ್ತೋ; ಅಂಥದ್ದೇ ದುರ್ಬುದ್ಧಿಯೀಗ ಬಿಳಿಕಾಲರ್ 'ಭಟ್ಟಂಗಿ'ಗಳ ವಲಯದಲ್ಲಿ ಎಗ್ಗಾಮುಗ್ಗಾ ವಿಜೃಂಭಿಸಲಾರಂಭಿಸಿದೆ. ಭಟ್ಟಂಗಿಗಳೆಂದರೆ ವಿಷವಾಣಿಯ ವಿಷಭಟ್ಟ, ಆತನ ಒಡಹುಟ್ಟು ಬಚ್ಚಾ ಚೆತ್ತಲೆ ಸಿಂಹ, ಇವರ ರಕ್ತ ಸಂಬಂಧಿಗಳಾದ ಎರಡು ಡಜನ್ ಮೀಡಿಯಾ ಚಡ್ಡಿಗಳು, ಇವರೆಲ್ಲರ ಪಿತ್ರಾರ್ಜಿತರೂ ಪಿತೃಪಿಂಡಗಳೂ ಆದ ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪ ಆಪ್ತ ಸಖಿ ಕರಂದ್ಲಾಜೆ, ಮಾಜಿ ಡಿಸಿಎಂ ಆರ್. ಅಶೋಕ್, ವಿರೋಧಿ ನಾಯಕ ಶೆಟ್ಟರ್, ಬಿಜೆಪಿ ಮಾಜಿ ಅಧ್ಯಕ್ಷ ಪ್ರಹ್ಲಾದ್ ಜೋಷಿ, ಸದಾನಂದ ಗೌಡ, ಲಿಂಬಾವಳಿ, ಸೀಟಿ ರವಿ ಇತ್ಯಾದಿಗಳೆಲ್ಲ ಕನ್ನಡ ತಾಯಿಯ ಶವಪೆಟ್ಟಿಗೆ ಮಾಡಿಟ್ಟಂತೆ ಮೈಸೂರು ಹುಲಿ ಟಿಪ್ಪೂ ಸುಲ್ತಾನರ ರಾಶಿಗೆ ಪ್ರವೇಶಿಸಿದ್ದಾರೆ.

ಬ್ರಿಟಿಷರ ವಿರುದ್ಧ ಟಿಪ್ಪೂ ಮಾಡಿದ ಸುದೀರ್ಘ ಯುದ್ಧ ರಾಜಿರಹಿತವಾಗಿ ಕೊನೆತನಕ ನಡೆದ ಆತನ ಛಲ, ತನ್ನಿಬ್ಬರು ಮಕ್ಕಳನ್ನು ಒತ್ತೆ ಇಟ್ಟು ನಡೆಸಿದ ಯುದ್ಧ, ಅಂತಿಮವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟ ಮಹಾನ್ ತ್ಯಾಗಗಳೆಲ್ಲವನ್ನೂ ಇತಿಹಾಸದ ಕಸದಬುಟ್ಟಿಗೆ ಎಸೆಯುವ ಪಾಷಾಣ ತಂತ್ರ ನಿರಾತಂಕವಾಗೇ ಸಾಗುತ್ತಿದೆ.

ವಿಷಭಟ್ಟನ ವ್ಯಾಪ್ತಿ

ನವೆಂಬರ್ ಹತ್ತರ ಟಿಪ್ಪೂ ಜಯಂತಿಯ ದಿನವನ್ನು ಮತ್ತೊಂದು ದತ್ತಪೀಠವಾಗಿ, ಹುಬ್ಬಳ್ಳಿಯ ಈದ್ಗಾ ಮಾಡಿ, ಮುಂಬರುವ ಚುನಾವಣೆ ಹೊತ್ತಿಗೆ ಮತ್ತಷ್ಟು ಕೋಮು



ವಿಷಭಟ್ಟ

ಗಲಭೆ ಹುಟ್ಟಿ ಹಾಕುವ ರಾಷ್ಟ್ರೀಯ ಬಿಜೆಪಿ ಅಧ್ಯಕ್ಷ ಅಮಿತ್ ಷಾನ ಯುಪಿ ತಂತ್ರದ ಲೇಟೆಸ್ಟ್ ವರಸೆಯೇ ಟಿಪ್ಪೂ ತೇಜೋವಧೆ. ಒಂದೆಡೆ ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪ ಸರ್ಕಾರದ ಟಿಪ್ಪೂ ಜಯಂತಿ ಆಚರಣೆ ವಿರುದ್ಧ ನೇರವಾಗೇ ವಿಷ ಕಾರಿದರೆ ಆತನ ಆಪ್ತೆ ಶೋಭಕ್ಕ ಟಿಪ್ಪೂ ಮತಾಂಧ, ಕ್ರೂರಿ, ಅತ್ಯಾಚಾರಿ ಅನ್ನುವ ಧಾಟಿಯಲ್ಲಿ ನಾಲಿಗೆ ಚೀಪ್ಪೆಗಿಳಿಯುತ್ತಾಳೆ. ವಿರೋಧಿ ನಾಯಕ ಶೆಟ್ಟರ್, ಲಿಂಬಾವಳಿ, ಅಶೋಕ್, ಪ್ರಹ್ಲಾದ್ ಜೋಷಿ ಮುಂತಾದವರದ್ದು ಇದೇ ಧಾಟಿಯ ಟಿಪ್ಪೂ ದ್ವೇಷ ಮತ್ತು ಮುಸ್ಲಿಂ ವಿರೋಧಿ ವಿಷ.

ನಾಡಿನ ಅಸಂಖ್ಯಾತ ಪ್ರಜ್ಞಾವಂತರು, ಮಾನವತಾವಾದಿಗಳೆಲ್ಲ ಸಂಘ ಪರಿವಾರ ಬಿಜೆಪಿಗಳ 'ಟಿಪ್ಪೂ ಕುಚೋದ್ಯ'ದ ವಿರುದ್ಧ ಕಾಲಾನುಕಾಲಕ್ಕೆ ಸೂಕ್ತ ಪ್ರತ್ಯುತ್ತರ, ವಾಸ್ತವ ವಿಚಾರ, ಸತ್ಯಾಸತ್ಯತೆಗಳ ಮಂಥನದ ಮೂಲಕ ಅಪಪ್ರಚಾರವನ್ನು ನಿಷ್ಫಲಗೊಳಿಸುತ್ತಲೇ ಬಂದಿದ್ದಾರೆ. ಆದರೆ ಈಗ ಮೈಸೂರು ನರಿಯೊಂದು ಮೈಸೂರು ಹುಲಿ ವಿರುದ್ಧ ಹೊಸ ಕ್ಯಾತೆಗಿಳಿದಿದೆ. ಅದು ಮೈಸೂರು ನರಿಯೋ ಅಥವಾ ಇಲಿಯೋ ಎಂಬುದೇ ಸ್ಪಷ್ಟವಾಗುತ್ತಿಲ್ಲ, ಆತ ವಿಷವಾಣಿಯ ವಿಷಭಟ್ಟನ ವಿಷ ರಕ್ತಬಂಧ ಚೆತ್ತಲೆ ಸಿಂಹ. ಮನುವಾದ, ಬ್ರಾಹ್ಮಣವಾದ, ವೈದಿಕ ತಂತ್ರ, ಪುರೋಹಿತ ಪಟ್ಟುಗಳ ಪರವಾಗಿ ಕಾಲಕಾಲಕ್ಕೆ ಮಾನವತಾವಾದಿಗಳು, ದಲಿತರು, ಕಾರ್ಮಿಕರು, ರೈತರು, ಮಹಿಳಾ ಪರ ಧ್ವನಿಗಳೆಲ್ಲರನ್ನೂ ತನ್ನ ಕೊಳಕು ಲೇಖನಿಯಿಂದ ಪೀಡಿಸುತ್ತಲೇ ಬಂದ ಚೆತ್ತಲೆ ಸಿಂಹನಿಗೆ ಈಗ ಟಿಪ್ಪೂ ತೇಜೋವಧೆಯ ತಿಮಿರು.

ವಾರದ ಹಿಂದಷ್ಟೇ ವಿಷವಾಣಿಯ ತನ್ನ ಚೆತ್ತಲೆ ಕಾಲಂನಲ್ಲಿ ಸಿಂಹ ಟಿಪ್ಪೂ ವಿರುದ್ಧ ಹೊಲಸಾಗಿ ವಾಂತಿ ಮಾಡಿದ್ದಾನೆ.

ಚೆತ್ತಲೆ ಸಿಂಹ ಚೇಷ್ಟೆ

ವಿಷಭಟ್ಟನ ವಿಷವಾಣಿಯಲ್ಲಿ ಚೆತ್ತಲೆ ಸಿಂಹ ಟಿಪ್ಪೂ ವಿರುದ್ಧ ರಾತ್ರೋರಾತ್ರಿ ಜ್ಞಾನೋದಯವಾದಂತೆ ಕಂಡುಹಿಡಿದ ವಿಚಿತ್ರಾಂಶಗಳು ಹೀಗಿವೆ. ಟಿಪ್ಪೂ ತಂದೆ ಹೈದಲಾಲಿ ಮೈಸೂರು ಒಡೆಯರ ಸೈನ್ಯದಲ್ಲಿ ಓರ್ವ ಸಾಮಾನ್ಯ ಕುದುರೆ ಲಾಯದ ಕೆಲಸಗಾರನಾಗಿದ್ದು ಕಾಲ ಕ್ರಮೇಣ ದಣಿಗೇ ದ್ರೋಹ ಬಗೆದು ರಾಜ್ಯ ಲಪಟಾಯಿಸಿದನಂತೆ! ಹೈದರಾಲಿಯ ಬಲವಂತದ ಮತಾಂತರ ವಿಕೃತಿಗೆ ಮೊದಲು ಬಲಿಯಾಗಿದ್ದೇ ಚಿತ್ರದುರ್ಗದ ಮದಕರಿ ನಾಯಕನ ಕೋಟೆಯಂತೆ. ಹೈದರಾಲಿಯ ನಯನಾಜೂಕತನವೇ ಕಾಲಕ್ರಮೇಣ ಮೈಸೂರು ಸೇನೆಯ ತುಕಡಿಯೊಂದಕ್ಕೆ ದಳಪತಿಯನ್ನಾಗಿಸಿತೆಂದೂ, ಅದೇ ಕಾರಣಕ್ಕಾತ ಈತನಿಗಿಂತಲೂ ಪರಾಕ್ರಮಿಗಳಾದ ಬೇಡ ಅಥವಾ ವಾಲ್ಮೀಕಿಗಳ ನಾಯಕನಾದನಂತೆ. ಹೀಗೆ ಹೇಳುತ್ತಲೇ ಚೆತ್ತಲೆ ಸಿಂಹ ಕ್ರಮೇಣ ಹೈದರಾಲಿ ಬೇಡರನ್ನೇ ಲೂಟಿ ಮಾಡಲಾರಂಭಿಸಿದ ಎನ್ನುತ್ತಾನೆ.

ಚೆತ್ತಲೆ ಸಿಂಹನಿಗೆ ತಾನೇನು ಬರೆಯುತ್ತಿದ್ದೇನೆಂಬ ಪ್ರಜ್ಞೆ ಕೂಡ ಇದ್ದಂತಿಲ್ಲ, ಬೇಡ ವಾಲ್ಮೀಕಿಗಳ ಪ್ರೀತಿ ಸಂಪಾದಿಸಿ ಮೈಸೂರು ಸೇನೆಯ ತುಕಡಿಗೆ ಹೈದರಾಲಿ ದಳಪತಿಯಾಗುವುದಾದರೆ ತನ್ನನ್ನು ನಾಯಕನನ್ನಾಗಿಸಿದ ಬೇಡರನ್ನೇ ಅದ್ಹೇಗೆ ಹೈದರಾಲಿ ಲೂಟಿ ಮಾಡಲು ಸಾಧ್ಯ?

ಕೊಡಗಿನಲ್ಲಿ ಹೈದರಾಲಿ ಟಿಪ್ಪೂ ಸೇರಿ ಕೊಡವರನ್ನು



ಚೆತ್ತಲೆ ಸಿಮ್ಮ

ಮತಾಂತರ-ಲೂಟಿ ಮಾಡಿದ ಹಾಗೆಯೇ ಹಳೇ ಮೈಸೂರಿನಲ್ಲಿ ಬೇಡ-ವಾಲ್ಮೀಕಿ ಜನಾಂಗದವರನ್ನೇ ಹಿಡಿಹಿಡಿದು ದೌರ್ಜನ್ಯವೆಸಗಿದನಂತೆ. ಬಿದನೂರು ಎಂಬುದು ಬೇಡರ ಭದ್ರಕೋಟೆಯಾಗಿತ್ತಂತೆ. ಹಾಗೇ ಚಿತ್ರದುರ್ಗದ ಮದಕರಿ ನಾಯಕನೂ ಬೇಡರ ಪಾಳೆಯದ ದೊರೆಯಂತೆ. ಅಂದರೆ ಬಿದನೂರಿನ ಬೇಡ ಮತ್ತು ಚಿತ್ರದುರ್ಗದ ವಾಲ್ಮೀಕಿ ದೊರೆಗಳು ಬೇಡರ ಹೊರತಾಗಿ ಬೇರೆಲ್ಲ ಜಾತಿಯವರನ್ನೂ ತುಳಿಯುತ್ತಿದ್ದರೆಂದೇ ತಾನೇ ಅರ್ಥ?

ಆದರೆ ಚೆತ್ತಲೆ ಸಿಂಹನ ವಿಷವಾಣಿಯ ವಾದ ಇನ್ನೂ ವಿಚಿತ್ರ. ಹೈದರಾಲಿ ಚಿತ್ರದುರ್ಗಕ್ಕೆ ಲಗ್ಗೆ ಹಾಕಿದಾಗ ಒನಕೆ ಓಬವ್ವ ತೋರಿದ ಪ್ರತಿರೋಧ ಮತ್ತು ಬೇಡರ ರಕ್ಷಣಾ ತಂತ್ರಗಳ ಮುಂದೆ ಹೈದರಾಲಿ ಹೆಣಗಾಡಲಾಗಲಿಲ್ಲವಂತೆ. ಅದೇ ಹೊತ್ತಿಗೆ ಮರಾಠರು ಶ್ರೀರಂಗಪಟ್ಟಣದ ಮೇಲೆ

ದಾಳಿ ಮಾಡುತ್ತಾರೆಂಬ ಮಾಹಿತಿ ಸಿಕ್ಕಿದ್ದೇ ಆತುರಾತುರವಾ
ಹೈದರಾಲಿ ಮದಕರಿ ನಾಯಕನಿಂದ ಚಿಲ್ಲರೆ ಕಪ್ಪ ಪಡೆ
ಹಿಂತಿರುಗಿದನಂತೆ. ಹಾಗಂತ ಮದಕರಿ ನಾಯಕನ ಮೇ
ದ್ವೇಷವಿತ್ತಲ್ಲ; ಸಮಯ ಕಾದು ಚಿತ್ರದುರ್ಗದ ಬೇ
ಪಡೆಯಲ್ಲಿದ್ದ ಮೂರು ಸಾವಿರದಷ್ಟು ಮುಸ್ಲಿಂ ಸೈನಿಕರ
ಧರ್ಮದ ಕಾರಣಕ್ಕೇ ತನ್ನ ಪರ ವಾಲುವಂತೆ ಪಿತೂ
ಮಾಡಿ 'ತಾಳಿಕೋಟೆ ಮಾದರಿ' ಅನುಕರಿಸಿದ್ದೇ ಮದ
ನಾಯಕನನ್ನು ಕೊಂದು ಚಿತ್ರದುರ್ಗವನ್ನು ಲೂಟಿಗೈದನ
ಚಿತ್ರದುರ್ಗದ ಬೇಡರ ಮೇಲಿನ ಆತನ ಸಿಟ್ಟು ಇಷ್ಟ
ಕಮ್ಮಿಯಾಗದ ಕಾರಣ ಮದಕರಿಯ ಸೈನ್ಯದಲ್ಲಿ
ಸರಿಸುಮಾರು 20 ಸಾವಿರ ಮಂದಿ ಬೇಡ ಸೈನಿಕರ
ಸೆರೆಹಿಡಿದು ಶ್ರೀರಂಗಪಟ್ಟಣದ ಗಂಜಾಂಗೆ ಎಳೆದೊಯ
ಮತಾಂತರ ಮಾಡಿಬಿಟ್ಟನಂತೆ.

ಬೇಡಾಂಧನ ಪಡೆಯಲ್ಲಿ ಮುಸ್ಲಿಮರು

ಆಗಿನ್ನೂ ಟಿಪ್ಪೂ ನವಾಬನಾಗಿರದೇ ತಂದೆಯ ಎ
ಕ್ರೌರ್ಯಕ್ಕೆ ಬೆಂಬಲವಾಗಿದ್ದರಿಂದ ಚಿತ್ರದುರ್ಗಕ್ಕೂ ಮು
ಮಲಬಾರ್‌ನಲ್ಲಿ ನಾಯರ್‌ಗಳನ್ನು ಹೈದರಾಲಿ ಮತಾಂ
ಮಾಡಿದ್ದನ್ನು ಕಣ್ಣಾರೆ ಕಂಡಿದ್ದ ಟಿಪ್ಪೂ ಮುಂದೆ ಇ
ಮಾದರಿಯನ್ನು ಕೊಡವರ ಮೇಲೂ ಪ್ರಯೋಗಿ
ಮತಾಂತರ ಮಾಡಿದನಂತೆ. ಅವರೇ ಮಾಪಿಳ್ಳೆಗಳಂತೆ

ಇಲ್ಲಿ ಪ್ರಶ್ನೆಯೆಂದರೆ ಚಿತ್ರದುರ್ಗದ ಮದಕ
ನಾಯಕನನ್ನು ಬೇಡರ ಜಾತ್ಯಾಂಧನೆಂದು, ಬೇ
ಪಕ್ಷಪಾತಿಯೆಂದೂ ಹೇಳುವ ಚೆತ್ತಲೆ ಸಿಂಹನೇ ಆತ
ಸೈನ್ಯದಲ್ಲಿ ಮೂರು ಸಾವಿರದಷ್ಟು ಮುಸ್ಲಿಂ ಸೈನಿಕರಿದ್ದರೆಂ
ಹೇಳುತ್ತಾನೆ. ಮದಕರಿ ನಾಯಕ ಬೇಡಾಂಧನೋ ಬೇರೆ
ಜಾತಿಗಳ ದಮನಕನೂ ಆಗಿದ್ದರೆ ಆತನ ಸೈನ್ಯದಲ್ಲಿ
ಮೂರು ಸಾವಿರ ಮುಸ್ಲಿಂ ಸೈನಿಕರಿರುತ್ತಿದ್ದರು? ಆ ಕಾಲದ
ಮದಕರಿ ನಾಯಕನ ಬಳಿ ಇಪ್ಪತ್ತು ಸಾವಿರ ಬೇ
ಸೈನಿಕರಿದ್ದದ್ದೇ ಆಗಿದ್ದರೆ ಚಿತ್ರದುರ್ಗದ ಕೋಟೆಯ
ಇಕ್ಕಟ್ಟು ವಸತಿಯಲ್ಲಿ ಅಷ್ಟೊಂದು ಮಂದಿಯನ್ನಿಡ
ಸ್ಥಳಾವಕಾಶವಾದರೂ ಎಲ್ಲಿತ್ತು? ಹಾಗೆ ಇಪ್ಪತ್ತು ಸಾ
ಸೈನಿಕರನ್ನು ಗಜಾಂಗೆ ಕರೆತಂದು ಮತಾಂತ
ಮಾಡಿಸಬೇಕೆಂದರೆ ಅದರ ದುಪ್ಪಟ್ಟು ಸಂಖ್ಯೆಯಲ್ಲಾದರ
ಹೈದರಾಲಿಯ ಸೈನಿಕರಿಸಬೇಕಲ್ಲವೆ?



ಮದಕರಿ ನಾಯಕ


ಯಡಿಯೂರಪ್ಪ

ಲ್ಲಿ ಬೆತ್ತಲೆ ಸಿಂಹನಿಗೆ ಏನು ಬೇಕಾದರೂ ಹೇಳುವ ತವಿದೆ ಮತ್ತು ಯಾವುದಕ್ಕೂ ಯಾವುದೇ ಪುರಾವೆಗಳ ಎಲ್ಲ!


ಮಧ್ಯೆ ಸಿಂಹ ತನಗರಿವಿಲ್ಲದಂತೆ ಸತ್ಯವನ್ನೂ ತ್ತಾನೆ. ಆದು ಟಿಪ್ಪೂ ವಿರುದ್ಧ ಕೊಡವರು ಬ್ರಿಟಿಷರನ್ನು ಲಿಸಿದ್ದು ಮತ್ತು ಬ್ರಿಟಿಷರಿಗೂ ಕೊಡುವರಿಗೂ ಇದ್ದ ಕೆ. ಬ್ರಿಟಿಷರ ವಿರುದ್ಧ ಟಿಪ್ಪೂ ವಿಶ್ವದ ಬೇರೆಬೇರೆ ಷ್ಟಗಳ ಜೊತೆ ಸಂಬಂಧ ಕುದುರಿಸಲೆತ್ನಿಸಿದ್ದು ಸಿಮ್ಮನ ಗೆ ಮುಸ್ಲಿಂ ಧರ್ಮಾಂಧತೆಯ ಫಲವಂತೆ. ಬಾದಿನ ನಿಜಾಮ, ಮೊಘಲರು ದೇಶದ ಇತರೇ ದೊರೆಗಳ ಜೊತೆ ಟಿಪ್ಪೂ ಬ್ರಿಟಿಷರ ವಿರುದ್ಧ ಗೆ ಯತ್ನಿಸಿದ್ದನ್ನು ಕಾಫೀರರನ್ನು ಸೋಲಿಸಲಂತೆ. ಸಿಮ್ಮನ ಕಾಫೀರರು ಎಂದರೆ ಹಿಂದೂಗಳು. ಹಿಂದೂಗಳಿಗೆ ರ ಬೆಂಬಲವಿದ್ದುದರಿಂದಲೇ ಬ್ರಿಟಿಷರ ಸಮೇತ ೂಗಳನ್ನು ದೇಶ ಬಿಟ್ಟೋಡಿಸುವುದು ಟಿಪ್ಪೂ ಶವಾಗಿತ್ತೆಂಬುದು ಸಿಮ್ಮನ ಹೊಸ ಸಂಶೋಧನೆ.

ಸ್ವಾತಂತ್ರ ಸಂಗ್ರಾಮದೇ ತಪ್ಪು!

ಪ್ಪೂವನ್ನು ಹಣಿಯುವ ಭರದಲ್ಲಿ ಈ ದೇಶದ ೂಗಳೆಲ್ಲರೂ ಟಿಪ್ಪೂ ವಿರುದ್ಧ ಬ್ರಿಟಿಷರ ಜೊತೆ ಡಿಸಿದ್ದರಂತೆ. ಬ್ರಿಟಿಷರ ವಿರುದ್ಧ ಆತ ಫ್ರೆಂಚರ ಕೈಜೋಡಿಸಿದ್ದು ಕೇವಲ ಸ್ವಾರ್ಥಕ್ಕಂತೆ. ಟಿಪ್ಪೂಗೆ ಭಾರತದುದ್ದಕ್ಕೂ ಒಬ್ಬನೇ ಒಬ್ಬ ಮಿತ್ರ ರದಿದ್ದುದೇ ಆತನನ್ನು ಬ್ರಿಟಿಷರು ಸುಲಭವಾಗಿ ಸಲು ಸಾಧ್ಯವಾಯಿತೆಂದೂ, ಟಿಪ್ಪೂವಿನ ಕಿರುಕುಳದ ರೋಸತ್ತಿದ್ದ ದಕ್ಷಿಣ ಭಾರತದ ಇತರೇ ಹಿಂದೂ ರಾಜರು ಪಾಳೇಗಾರರೆಲ್ಲ ಸಹಜವಾಗೇ ಬ್ರಿಟಿಷರ ಜೊತೆ ಮಲಬಾರ್‌ನ ನಾಯಕರ್‌ಗಳೂ ಕೊಡವರೂ ಇತರೇ ಸಣ್ಣಪುಟ್ಟ ರಾಜರುಗಳು ಇದ್ದದ್ದೇ ಬ್ರಿಟಿಷರು ಟಿಪ್ಪೂವನ್ನು ಕೊಲ್ಲಲು ಸಾಧ್ಯವಾಯಿತಂತೆ.

ಅಂದರೆ ಟಿಪ್ಪೂ ಹೊರತಾಗಿ ಬಹುತೇಕ ರಾಜರುಗಳು ಬ್ರಿಟಿಷರ ಚೇಲಾಗಳಾಗಿದ್ದರೆಂಬುದನ್ನು ಸಿಮ್ಮ ತನಗರಿವಿಲ್ಲದಂತೆ ಬಿಚ್ಚಿಡುತ್ತಿದ್ದಾನೆ!

ನಾಲ್ವಡಿ ಕೃಷ್ಣರಾಯರ ಕಾಲವೇ ಬೇರೆ ಟಿಪ್ಪೂ ಕಾಲವೇ ಬೇರೆಯಾದರೂ ಸಿಮ್ಮನ ತಲೆಗೆ ಟಿಪ್ಪೂ ಜನ್ಮದಿನಾಚರಣೆಯೆಂಬುದು ನಾಲ್ವಡಿ ಕೃಷ್ಣರಾಯರಿಗೆ ಮಾಡಿದ ಅಪಚಾರ




ದಂತೆ ಕಾಣಿಸುತ್ತಿದೆ. ಏಕೆಂದರೆ ಟಿಪ್ಪೂ ಯದುವಂಶದಿಂದ ಅಧಿಕಾರ ಕಿತ್ತಿದ್ದೇ ನಾಲ್ವಡಿ ಕೃಷ್ಣರಾಯರಿಗೆ ಮಾಡಿದ ಘಾತವಂತೆ. ಆ ಕಾರಣಕ್ಕೇ ಟಿಪ್ಪೂ ಜಯಂತಿ ಎಂಬುದು ಮೈಸೂರರಸರಿಗೆ, ಕೊಡವರಿಗೆ, ಮಲಬಾರಿಗಳಿಗೆ ಮಾಡಿದ ಅಪಚಾರವೆಂಬುದು ಸಿಮ್ಮನ ಆದೇಶ. ಹಾಗಾದರೆ ಟಿಪ್ಪೂ ದೌರ್ಜನ್ಯದಿಂದ ಹಿಂದೂ ರಾಜರನ್ನು ರಕ್ಷಿಸಿದ ಬ್ರಿಟಿಷರ ವಿರುದ್ಧ ಭಾರತೀಯರು ಸ್ವಾತಂತ್ರ ಸಂಗ್ರಾಮ ನಡೆಸಿದ್ದೇ ಮಹಾಪರಾಧವೆಂದಾಯ್ತು?

ಇದು ಕೇವಲ ಸಿಮ್ಮನ ಸಂಶೋಧನೆಯಷ್ಟೇ ಆಗಿದ್ದರೆ ಹುಚ್ಚಾಸ್ಪತ್ರೆಯತ್ತ ಕೈ ತೋರಿಸಿ ಸುಮ್ಮನಾಗಬಹುದಿತ್ತು, ಆದರೆ ಇಡೀ ಬಿಜೆಪಿ, ಸಂಘ ಪರಿವಾರ, ಅದರ ಮೀಡಿಯಾ ಸಮಿತಿಗಳೆಲ್ಲರೂ ಟಿಪ್ಪೂ ಕುರಿತಂತೆ ಇದೇ ವಾದ ಮಂಡಿಸುತ್ತಾರೆ. ಅದು ಮನುವಾದದ ಪ್ರೇರಿತ ವಾದ ಕೂಡ. ಇದರ ಅತಿರೇಕ ಮತ್ತು ಹುಚ್ಚಾಟ ಹೇಗಿದೆಯೆಂದರೆ, ಮದಕರಿನಾಯಕ ಕರ್ನಾಟಕದ ಬೇಡರ ಪ್ರತಿನಿಧಿ ಮತ್ತು ಟಿಪ್ಪೂ ಮುಸ್ಲೀಮರ ಸಂಕೇತ. ಆವತ್ತು ಚಿತ್ರದುರ್ಗದ ಮೇಲೆ ಹೈದರಾಲಿ ದಂಡೆತ್ತಿ ಬಂದದ್ದು ವಾಲ್ಮೀಕಿ ಬೇಡರ ವಿರುದ್ಧದ ಆತನ ದ್ವೇಷದಿಂದಾದರೆ, ಮದಕರಿ ನಾಯಕನ ಸೇನೆಯಲ್ಲಿದ್ದ ಮುಸ್ಲೀಮರೇನು ಬೇಡರ ಮತ್ತಾತನ ಸಂಬಂಧಿಕರೆ?

ಆವತ್ತು ಮದಕರಿ ವಿರುದ್ಧ ಹೈದರಾಲಿ ಯುದ್ಧ ಮಾಡಿದ ಸೇಡಿಗೆ ಇವತ್ತು ಚಿತ್ರದುರ್ಗದ ವಾಲ್ಮೀಕಿ ನಾಯಕರು


ಬ್ರಿಟಿಷರ ವಿರುದ್ಧ ಟಿಪ್ಪೂ ಕಾಳಗ



ಟಿಪ್ಪೂ ವಿರುದ್ಧ ಪ್ರತಿಕಾರಕ್ಕಿಳಿಯಬೇಕೆ? ಆದೂ ತಂದೆ ಮಾಡಿದ ತಪ್ಪಿಗೆ ಮಗ ಶಿಕ್ಷೆ ಅನುಭವಿಸಬೇಕು!

ಇದರರ್ಥ ಇಮ್ಮಡಿ ಕೆಂಪೇಗೌಡರನ್ನು ಜೈಲಲ್ಲಿಟ್ಟ ತಪ್ಪಿಗೆ ಈಗ ಒಕ್ಕಲಿಗರೆಲ್ಲ ಗೊಲ್ಲರನ್ನು ಅಟ್ಟಾಡಿಸಿ ಜಿದ್ದು ತೀರಿಸಬೇಕೆ? ಕೆಳದಿ ಚನ್ನಮ್ಮನ ಮೇಲೆ ಮರಾಠರ ದಾಳಿಯ ಸೇಡನ್ನು ಲಿಂಗಾಯತರು ಆ ಭಾಗದಲ್ಲಿ ಅಳಿದುಳಿದ ಮರಾಠರ ಮೇಲೆ ಸಾಧಿಸಬೇಕೆ? ಹಾಗಾದರೆ ಹೈದರಾಲಿಗೂ ಮುನ್ನ ಮೈಸೂರು ಅರಸರೇ ಚಿತ್ರದುರ್ಗದ ಪಾಳೇಗಾರರ ಮೇಲೆ ದಂಡೆತ್ತಿ ಬಂದಿದ್ದರಲ್ಲವೆ? ಮೊದಲಿನ ಲೆಕ್ಕ ಮೊದಲು ಚುಕ್ತಾ ಅನ್ನುವ ಸೂತ್ರದ ಪ್ರಕಾರವೇ ವಾಲ್ಮೀಕಿ ಬೇಡರು ಮೊದಲು ಅಟ್ಟಾಡಿಸಿ ಬಡಿಯಬೇಕಿರುವುದು ಮೈಸೂರನ್ನು ಪ್ರತಿನಿಧಿಸುವ ಬೆತ್ತಲೆ ಸಿಮ್ಮನನ್ನೇ!

ತಾನೊಬ್ಬ ಸಂಸದನೆಂಬ ಕನಿಷ್ಠ ಪ್ರಜ್ಞೆಯಿಲ್ಲದೆ ತನ್ನ ನಾಡು, ಜನರ ಭವಿಷ್ಯದ ಬಗ್ಗೆ ಕನಿಷ್ಠ ಕಾಳಜಿಯೂ ಇಲ್ಲದ ಇಲಿಯಷ್ಟೇ ಇಂಥಾದ್ದೊಂದು ಸಾಮಾಜಿಕ ಅಪಚಾರವೆಸಗಲು ಸಾಧ್ಯ? ದೇಶವೊಂದರ ಕಲ್ಪನೆಯೇ ಇರದ, ಧರ್ಮವೆಂದರೇನೆಂದೇ ಗೊತ್ತಿರದ ನಾಡು-ನುಡಿಗಳ ಹಂಗೇ ಇಲ್ಲದ ಕತ್ತಿಯ ಅಲುಗಿನಿಂದಲೇ ಪ್ರತಿಯೊಂದನ್ನು ಸಾಧಿಸಹೊರಟ ಯಾವುದೋ ಕಾಲಘಟ್ಟದ ಘಟನಾವಳಿಗಳನ್ನೇ ಈಗಿನ ಪರಿಸ್ಥಿತಿಗೆ ಆರೋಪಿಸಿ ಇನ್ನಾರದೋ ಬೇಳೆ ಬೇಯಿಸಿಕೊಳ್ಳಲು ಹೊರಟ ಸಿಂಹನಂಥ ನರಿಗಳಿಗೆ ಇತಿಹಾಸವೊಂದು ಲೆಕ್ಕವೆ? ಸತ್ಯವೊಂದು ವಿಷಯವೇ? ದೇಶದ ಹಂಗೇನು ನಾಡಿನ ಭವಿತವ್ಯ ಏನಾದರೇನು?

ಹುಲಿ ಹುಲಿಯೇ ನರಿ ನರಿಯೇ....!

■ ರಾ. ಸೋಮನಾಥ್

ೂದ್ರ, ದಲಿತ ಯುವಕರ ಬಲಿಗೆ ಸಂಘಪರಿವಾರದ ಸಂಚು

ರ್ನಾಟಕ ರಾಜ್ಯ ಸರ್ಕಾರ ಕಳೆದ ವರ್ಷದಿಂದ ಬರ್ 10 ರಂದು ಟಿಪ್ಪು ಸುಲ್ತಾನ್ ಂತಿಯನ್ನು ಆಚರಿಸುತ್ತಿದೆ. ಇದನ್ನು ೇಧಿಸುವ ಹೆಸರಿನಲ್ಲಿ ಬಿಜೆಪಿ ಪಕ್ಷ ಕೊಡಗಿನಲ್ಲಿ ಕರ್ನಾಟಕದ ಹಲವಾರು ಭಾಗಗಳಲ್ಲಿ ಕಳೆದ ದೊಡ್ಡ ಉದ್ವಿಗ್ನತೆಯನ್ನು ನಿರ್ಮಾಣ ಮಾಡಿ, ಗಿನಲ್ಲಿ ಜೀವವೊಂದನ್ನು ಬಲಿ ತೆಗೆದುಕೊಂಡಿದ್ದು ಲ್ಲಾ ನೆನಪಿದೆ. ಈ ವರ್ಷ ಮತ್ತೆ ಅದೇ ರೀತಿ ಮು ಗಲಭೆಯನ್ನು ಸೃಷ್ಟಿಸಲಿಕ್ಕೆ ಬಹಳ ದೊಡ್ಡ ತ್ರ ರೂಪುಗೊಂಡಿದೆ. ಶೂದ್ರ, ದಲಿತ ದಾಯಗಳಿಗೂ ಮತ್ತು ಅಲ್ಪಸಂಖ್ಯಾತ ದಾಯಗಳಿಗೂ ನಡುವೆ ಕಲಹ ತಂದಿಡುವ ಸಂಚನ್ನು ಹೆಣೆಯಲಾಗಿದೆ. ಚಿತ್ರದುರ್ಗದಲ್ಲಿ ಸುಲ್ತಾನ್ ಮದಕರಿ ನಾಯಕನನ್ನು ಮಾತುಕತೆಗೆ ವಿಷವಿಕ್ಕಿ ಕೊಂದ ಎಂದೂ, ಮಾರಮ್ಮನ ವನ್ನು ಕೆಡವಿ ಮಸೀದಿಯನ್ನು ಕಟ್ಟಲಾಗಿದೆ ಹುಸಿಹುಸಿ ಸುಳ್ಳು ಪ್ರಚಾರವನ್ನು ನಡೆಸಿ ನಾಯಕ ದಲಿತ ಸಮುದಾಯಗಳಿಗೂ ಮತ್ತು ಂಖ್ಯಾತ ಸಮುದಾಯಕ್ಕೂ ನಡುವೆ ದ್ವೇಷ ನ ಹಲವು ಪ್ರಯತ್ನಗಳನ್ನು ನಡೆಸುತ್ತಿದೆ. ಟಿಪ್ಪು ರಣೆ ನಡೆಸಿದರೆ ಒನಕೆ ಹಿಡಿದುಕೊಂಡು ಬನ್ನಿ ಬಹಿರಂಗವಾಗಿ ಹಿಂಸೆಗೆ ಪ್ರಚೋದನೆ ಿದ್ದಾರೆ. ಮಡಿಕೇರಿಯಲ್ಲಿ ಕೊಡವ ಲಿನನ್ನು ಮುಂದಿಟ್ಟುಕೊಂಡು ಟಿಪ್ಪು ರಣೆ ನಡೆ... ಎಂದು ಪ್ರಚೋದನಕಾರಿ ಹಾಕಿದ್ದಾರೆ. ಶಾಲೆಗಳಲ್ಲಿ ಬುರ್ಖಾ ಮುಂದಿಟ್ಟುಕೊಂಡು ವಿದ್ಯಾರ್ಥಿಗಳ ನಡುವೆ ಕಂದಕ ುವ ಕೆಲಸ ನಡೆದಿದೆ. ಕಳೆದ ವರ್ಷ ಇದೇ ಟಿಪ್ಪು ಹೆಸರಿನಲ್ಲಿ ಹೊಸಪೇಟೆಯಲ್ಲಿ ... ಸಂಘಪರಿವಾರದ ಮುಸ್ಲಿಂ, ಅದನ್ನು



ಮುಸ್ಲಿಂ ಯುವಕನೊಬ್ಬನ ಅಂಗಡಿಯಲ್ಲಿ ಬಿಸಾಕಿದ್ದ ಷಡ್ಯಂತ್ರ ಬಯಲಾಗಿದೆ. ನವೆಂಬರ್ 10 ರಂದು ಸಂಘ ಪರಿವಾರದ ಶಕ್ತಿಗಳು ಟಿಪ್ಪು ವಿರೋಧದ ಹೆಸರಿನಲ್ಲಿ ರಕ್ತದೋಕುಳಿ ನಡೆಸಿ ರಾಜ್ಯದ ಹಲವಾರು ಕಡೆ ನಮ್ಮ ಶೂದ್ರ ಮತ್ತು ದಲಿತ ಯುವಜನತೆಯನ್ನು ಬಲಿಕೊಡಲು ಸಿದ್ಧತೆ ಮಾಡಿಕೊಂಡಿದೆ ಎಂಬುದು ಬಲ್ಲ ಮೂಲಗಳಿಂದ ತಿಳಿದು ಬರುತ್ತಿದೆ. ಮೇಲ್ಕಂಡ ವಿದ್ಯಮಾನಗಳು ಈ ಸುದ್ದಿಯನ್ನು ಧೃಢೀಕರಿಸುತ್ತವೆ. ಉದ್ವಿಗ್ನ ವಾತಾವರಣ ಸೃಷ್ಟಿಸಿ ಗೋಲಿಬಾರಿನಲ್ಲೋ ಅಥವ ಗಲಭೆಯಲ್ಲೋ ಕೆಲವರನ್ನು ಬಲಿಕೊಟ್ಟು ಭಾವೋದ್ರೇಕದ ರಾಜಕಾರಣವನ್ನು ಸೃಷ್ಟಿಸುವ, ಬರುವ ವಿಧಾನಸಭಾ ಅಧಿವೇಶನವನ್ನೂ ಈ ರಾಜಕಾರಣದ ಕೇಂದ್ರವನ್ನಾಗಿ ಮಾಡಿಕೊಳ್ಳುವ ಎಲ್ಲಾ ಸಾಧ್ಯತೆಗಳು ಎದ್ದು ಕಾಣುತ್ತಿವೆ. ಇದು ಬಹಳ ಅಘಾತಕಾರಿಯಾದ ಮತ್ತು ಆತಂಕಕಾರಿಯಾದ ವಿಚಾರವಾಗಿದೆ.

ಇತಿಹಾಸದ ಭೂತಕಾಲದಲ್ಲಿ ನಡೆದು ಹೋದ ಘಟನೆಗಳನ್ನು ವರ್ತಮಾನದ ಜತೆಗೆ ಜೋಡಿಸಿ ಒಡೆದಾಳುವ ಷಡ್ಯಂತ್ರವನ್ನು ಸಂಘಪರಿವಾರ ಮಾಡುತ್ತಿದೆ. ಕೋಮು ಸೌಹಾರ್ದತೆಗೆ ಮಾದರಿಯಾಗಿದ್ದ ಟಿಪ್ಪುವಿನ ದಿನಾಚರಣೆ ಭವಿಷ್ಯದಲ್ಲಿ ಕೋಮು ಸಂಘರ್ಷಕ್ಕೆ ಕಾರಣವಾಗುವ ದಿನವಾಗಿ ಪರಿವರ್ತನೆಯಾಗುವ ಅಪಾಯವಿದೆ. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಈ ರಕ್ತ ರಾಜಕಾರಣವನ್ನು ಅತಿ ಕಟುವಾದ ಮಾತುಗಳಲ್ಲಿ ಖಂಡಿಸುತ್ತದೆ. ದ್ವೇಷ ಬಿತ್ತಿ, ಜನ ಸಮುದಾಯಗಳ ನಡುವೆ ಬೆಂಕಿ ಹಚ್ಚುವ ಶಕ್ತಿಗಳ ವಿರುದ್ಧ ತೀವ್ರ ಕ್ರಮ ಕೈಗೊಂಡು, ಸಂಭವಿಸಬಹುದಾದ ದುರಂತವನ್ನು ತಡೆಯಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತದೆ. ಈ ದುಸ್ಥಿತಿಗೆ ರಾಜ್ಯ ಸರ್ಕಾರವೂ ಸಹ ನೇರವಾಗಿ ಹೊಣೆಯಾಗಿದೆ. ಟಿಪ್ಪು ಸುಲ್ತಾನ್ ಜಯಂತಿಯ ಆಚರಣೆ ಬಹಳ ಸ್ವಾಗತಾರ್ಹವಾದ ವಿಚಾರವೆಂದು ನಾವೆಲ್ಲರೂ ಭಾವಿಸುತ್ತೇವೆ. ಆದರೆ ಟಿಪ್ಪು ಜಯಂತಿಯನ್ನು ಯಾವ ರೀತಿ ಇಡೀ ಕನ್ನಡದ ಒಬ್ಬ ರಾಜ, ಕರ್ನಾಟಕದ ಕ್ರಾಂತಿಕಾರಿಯಾದ ಸೆಕ್ಯುಲರ್ ಆದ ರಾಜ ಎಂದು ಬಿಂಬಿಸುವುದನ್ನು ಕೈಬಿಟ್ಟು, ಕೇವಲ ಅಲ್ಪಸಂಖ್ಯಾತರ ಇಲಾಖೆಯ ಮೂಲಕ ಟಿಪ್ಪು ಜಯಂತಿಯನ್ನು ನಡೆಸುತ್ತಿರುವುದು ಮತ್ತು ಸೂಕ್ತ ತಯಾರಿಗಳಿಲ್ಲದೆ, ಅದನ್ನು ನಡೆಸುತ್ತಿರುವುದು ಕಾಂಗ್ರೆಸ್ ಸರ್ಕಾರದ ಬೇಜವಾಬ್ದಾರಿಯನ್ನು ತೋರಿಸುತ್ತದೆ. ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ. ನಮ್ಮ ಮುಂದೆ ಕೋಮುವಾದಿಗಳು ತಂದೊಡ್ಡುತ್ತಿರುವ ಮತ್ತೊಂದು ಅಪಾಯದ ಗಾಂಭೀರ್ಯತೆಯನ್ನು, ಜನಪರ ಸಂಘಟನೆಗಳು, ಜನಸಾಮಾನ್ಯರು, ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯದ ಬಂಧುಗಳು ಎಚ್ಚರಿಕೆಯ ಜೊತೆ ಗಮನಿಸಬೇಕಾಗಿ ಮನವಿ. ಎಲ್ಲಾ ಶಾಂತಿಪ್ರಿಯ ಶಕ್ತಿಗಳು ಜನರನ್ನು ಜಾಗೃತಗೊಳಿಸುವ ಮೂಲಕ ಹಾಗೂ ಸರ್ಕಾರದ ಮೇಲೆ ಒತ್ತಡ ತರುವ ಮೂಲಕ ಈ ಅಪಾಯವನ್ನು ತಡೆಯಲು ಮುಂದಾಗಬೇಕಿದೆ. ಹೆಣವನ್ನು ಮುಂದಿಟ್ಟುಕೊಂಡು ರಕ್ತರಾಜಕಾರಣ ಮಾಡುವ ಸಂಘಪರಿವಾರದ ಷಡ್ಯಂತ್ರವನ್ನು ಶೂದ್ರ-ದಲಿತ ಸಮುದಾಯದ ಯುವಜನರು ಅರ್ಥಮಾಡಿಕೊಳ್ಳಬೇಕೆಂದು ಕೋರುತ್ತೇವೆ. ಎಲ್ಲಾ ಮುಸ್ಲಿಂ ಯುವಕರು ಆದಷ್ಟು ಸಂಯಮದೊಂದಿಗೆ ನಡೆದುಕೊಳ್ಳುವ ಮೂಲಕ ಸಮಾಜದಲ್ಲಿ ಶಾಂತಿ ಕಾಪಾಡುವ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗಿ ವಿನಂತಿಸುತ್ತೇವೆ. ಸಂಘಪರಿವಾರದ ಷಡ್ಯಂತ್ರದ ಬಗ್ಗೆ ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಂಡು, ಕೂಡಲೇ ಸಂಘಪರಿವಾರದ ಸಂಚನ್ನು ವಿಫಲಗೊಳಿಸಬೇಕು. ಆ ಮೂಲಕ ಶೂದ್ರ ಮತ್ತು ದಲಿತ ಯುವಕರ ಜೀವವನ್ನು ರಕ್ಷಿಸಬೇಕು. ಗೃಹ ಇಲಾಖೆಯು ಕೋಮುಗಲಭೆಯನ್ನು ಸೃಷ್ಟಿಸುವ ಸಂಚನ್ನು ಹೂಡಿರುವ ವ್ಯಕ್ತಿಗಳು ಮತ್ತು ಸಂಘಟನೆಗಳನ್ನು ಕೂಡಲೇ ನಿರ್ಬಂಧಿಸಬೇಕು. ಮುಂಜಾಗ್ರತಾ ಕ್ರಮವಾಗಿ ಬಂಧಿಸಬೇಕು ಮತ್ತು ಯಾವುದೇ ಅನಾಹುತಗಳು ನಡೆದರೆ ಅದಕ್ಕೆ ಸಂಘ ಪರಿವಾರ ಮತ್ತು ಸರ್ಕಾರಗಳೇ ಕಾರಣವಾಗುತ್ತವೆ. ಕರ್ನಾಟಕದ ಶೂದ್ರ ಮತ್ತು ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಂಘಟನೆಗಳು ಇದನ್ನೆಲ್ಲಾ ಹೀಗೇ ನೋಡುತ್ತಾ ಸುಮ್ಮನೆ ಕೂರುವುದಿಲ್ಲ ಎಂಬ ಮಾತನ್ನು ಒತ್ತಿಹೇಳಲು ಬಯಸುತ್ತೇವೆ.

-ಕೆ.ಎಲ್.ಅಶೋಕ್. ಸುರೇಶ್ ಭಟ್ ಬಾಕ್ರಬೈಲ್. ರಾಬಿನ್ ಕ್ರಿಸ್ಟೋಫರ್
(ರಾಜ್ಯ ಪ್ರಧಾನ ಕಾರ್ಯದರ್ಶಿಗಳು)
ಕರ್ನಾಟಕ ಕೋಮು ಸೌಹಾರ್ದ ವೇದಿಕೆ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

'ಅನಾಮಧೇಯ' ಮೈಸೂರಿಗೆ ಅಭಿಮಾನದ ಟಿಪ್ಪು ಸುಲ್ತಾನ ಅಂತಾರಾಷ್ಟ್ರೀಯ ಸ್ಥಾನಗಳಿಸಿಕೊ

ಮೈಸೂರು ಹುಲಿ ಟಿಪ್ಪು ಸುಲ್ತಾನ ಪತ್ರ ವ್ಯವಹಾರ ಸಂಗತಿಗಳು ವಿವಾದವೆಬ್ಬಿಸುತ್ತಿದ್ದಾರೆ. ಕಿಡಿಗೇಡಿಗಳು ಟಿಪ್ಪು ಎಂತಹ ವ್ಯಕ್ತಿಯಾಗಿದ್ದ ಎಂದು ತಿಳಿಯಲು ಶ್ರೀ ತಾರಾನಾಥ್ ... ಅವರು ಬರೆದ 'ಮೈಸೂರು ಗತಿಸಿದ ಹುಲಿಯ ... ' ಪುಸ್ತಕದಲ್ಲಿ ತೆರೆದಿಟ್ಟಿದ್ದಾರೆ. ನಮ್ಮ ಓದುಗರಿಗೆ ಆ ಪುಸ್ತಕದ ಒಂದು ಅಧ್ಯಾಯವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಅಧರ್ಮ ಯುದ್ಧಕ್ಕೆ ಕಾರಣ!

"ನಾವು ಧೈರ್ಯ ಮಾಡಿ, ಮುಂದುವರಿದು, ಮೇಲೆ ಬಿದ್ದು ಹೊಡೆದಾಡದೆ, ಆತ್ಮಸಂರಕ್ಷಣೋಪಾಯದಲ್ಲೇ ಕಾಲ ಕಳೆದಿದ್ದರೆ, ಕೆಲವು ವಾರಗಳಲ್ಲಿ ಆಗಿಹೋದ ಕೆಲಸಕ್ಕೆ ತಿಂಗಳುಗಟ್ಟಲೆ ಕಾದಾಡಬೇಕಾಗುತ್ತಿತ್ತು. ಅಪಾರ ಹಣ ವೆಚ್ಚ ಮಾಡಬೇಕಾಗುತ್ತಿತ್ತು. ಆಗ ನಮಗೆ ಮಿತ್ರರ ಬದಲಾಗಿ ಶತ್ರುಗಳಿರುತ್ತಿದ್ದರು; ನಿಶ್ಚಿಂತೆಗೆ ಬದಲಾಗಿ ನಿತ್ಯ ಭಯವಿರುತ್ತಿತ್ತು; ವೃದ್ಧಿಗತ ಸಂಪತ್ತು, ಶಕ್ತಿ, ಕೀರ್ತಿಗೆ ಬದಲಾಗಿ ಮಾನಹಾನಿ, ಬಲಹಾನಿ, ದಿವಾಳಿಪಟ್ಟ, ಬರುತ್ತಿತ್ತು."

- ಎಂ. ವುಡ್


"ಈ ದೇಶದ ಯೋಗಕ್ಷೇಮ, ಈ ದೇಶದ ಮರ್ಯಾದೆಯಲ್ಲಿ ಅಭಿಮಾನಬದ್ಧನಾದ ಯಾವನೊಬ್ಬನೂ ಫ್ರೆಂಚ್ ಸರಕಾರ, ಗತಿಸಿದ ಟೀಪುಸುಲ್ತಾನ, ಇಬ್ಬರೂ ಕಲೆತು ಕೈಕೊಂಡ ಸಾಹಸಪೂರಿತವೂ, ಪ್ರಚಂಡವೂ, ಆದ ದಂಡಯಾತ್ರೆಯ ಯೋಜನೆಯನ್ನು ಉದಾಸೀನ ಭಾವದಿಂದ ವಿಚಾರ ಮಾಡಲಾಗದು. ಭಾರತದಲ್ಲಿ ಬ್ರಿಟಿಶರ ಹೆಸರನ್ನು ಬೇರುಸಹಿತ ಕಿತ್ತು ಹಾಕುವುದೇ ಆ ಭಯಂಕರ ಯೋಜನೆಯ ಉದ್ದೇಶವಾಗಿತ್ತಲ್ಲದೆ ಮತ್ತೇನಲ್ಲ."

"ನಮ್ಮ ಅದೃಷ್ಟ: ಅವರ ಯೋಜನೆಗಳೆಲ್ಲ ತಮಗೆ ಗೊತ್ತಾದುವು: ಅವು ಫಲಿಸುವುದಕ್ಕೆ ಮೊದಲೇ ಅವುಗಳನ್ನೆಲ್ಲ ಎದುರಿಸಿ, ನಿವಾರಿಸಿದ್ದಾಯಿತು. ಇಲ್ಲವಾಗಿದ್ದರೆ ಭಾರತದಲ್ಲಿ ಈ ಕ್ಷಣ ಭದ್ರತೆ, ಸುಖ, ಶಾಂತಿಯ ಚಿತ್ರವಿರುತ್ತಿರಲಿಲ್ಲ; ಪ್ರಾಣಭಯ, ಸರ್ವನಾಶ, ಪ್ರಳಯಚಿತ್ರ ಕಾಣಬರುತ್ತಿತ್ತು. ನೆಪೋಲಿಯನ್ ಬೋನಾಪಾರ್ಟ ಕೈರೋನಗರ ಮುಟ್ಟುವುದಕ್ಕೆ ಮುನ್ನ ಸುಯೇಜ್ ಬಳಿ ಅವನಿಗೆ ಸಾಕಷ್ಟು ಸಾರಿಗೆ ಸೌಕರ್ಯ ದೊರೆತಿದ್ದರೆ, ತನ್ನ ಸೈನ್ಯದ, ಆರಿಸಿದ ಹತ್ತು ಸಾವಿರ ಯೋಧರನ್ನು ಮಲಬಾರ ಕರಾವಳಿಗೆ ಕಳುಹಿಸುತ್ತಿದ್ದ; ಅವರೆಲ್ಲ ಟೀಪುಸುಲ್ತಾನನ ಕೈಗೆ ಸಿಗುತ್ತಿದ್ದರು. ಅಲೆಗ್ಸಾಂಡ್ರಿಯದಲ್ಲಿ ಫ್ರೆಂಚರ ಸೈನ್ಯ ಬಂದಿಳಿಯಿತೆಂಬ ಸುದ್ದಿ ನಮಗೆ ಬಂದ ಕೂಡಲೆ ಈ ಕೆಲಸವಾಗಿ ಹೋಗುತ್ತಿತ್ತು." ಈ ರೀತಿಯಾಗಿ ಕರ್ನಲ್ ಎಂ.ವುಡ್ ತಾನು 1800ರಲ್ಲಿ ಬರೆದ 'ಮೈಸೂರಿನಲ್ಲಿ ಸಂಗ್ರಾಮ' ಎಂಬ ಪುಸ್ತಕದಲ್ಲಿ ಹೇಳಿದ್ದಾನೆ.

ಟೀಪುಸುಲ್ತಾನನ ಪಾಲಿಗೆ ಬಂದು "ಅನುಕೂಲದೈವ"ವೇ ಇದ್ದಿದ್ದರೆ, ನೆಪೋಲಿಯನ್ನಿಗೆ ಸುಯೇಜ್ ಕಾಲುವೆ ಬಳಿ ಸಾಕಾದಷ್ಟು ಜಹಜುಗಳು ಸಿಗುತ್ತಿದ್ದವು. 'ಅನುಕೂಲ ಪವನ'ನು ಹತ್ತು ಸಾವಿರ ಸೈನಿಕರನ್ನು ಹೊತ್ತು ತಂದು ಸುಲ್ತಾನನಿಗೆ ಒದಗಿಸುತ್ತಿದ್ದ. ಯಾರು ಬಲ್ಲರು? ನೆಪೋಲಿಯನ್, ಟೀಪುಸುಲ್ತಾನ್, ಇಬ್ಬರೂ ಭೇಟಿಯಾಗುತ್ತಿದ್ದರೋ ಏನೋ! ಹಾಗೆ ಆಗಿದ್ದರೆ ಭಾರತದಲ್ಲಿ ಬ್ರಿಟಿಶರ ಹೆಸರೇ ಇರುತ್ತಿರಲಿಲ್ಲ.

27.1.1799ನೆಯ ದಿನ, ಕೈರೋದಿಂದ ನೆಪೋಲಿಯನ್ ಟೀಪುವಿಗೊಂದು ಪತ್ರ ಬರೆದ. ಅದನ್ನು ಮೆಕ್ಕಾದ ಷರೀಫನಿಗೆ ಕಳುಹಿಸಿ, ಟೀಪುವಿಗೆ ಮುಟ್ಟಿಸುವಂತೆ ಸೂಚನೆ ಮಾಡಿದ. ದುರ್ದೈವದಿಂದ ಆ ಪತ್ರ ಟೀಪುವಿನ ಕೈಸೇರುವುದು ತಡವಾಯಿತು. ಆ ವೇಳೆಗೆ ಟೀಪು ವೀರಸ್ವರ್ಗವಾಸಿಯಾಗಿದ್ದ!

ಅರಬಿ ಭಾಷೆಯಲ್ಲಿ ನೆಪೋಲಿಯನ್ ಮಕ್ಕಾ ಷರೀಫನಿಗೆ ಪತ್ರ ಬರೆದು, ಟೀಪುವಿಗೆ ಫ್ರೆಂಚ್ ಭಾಷೆಯಲ್ಲಿ ಪತ್ರ ಬರೆದು ಕಳುಹಿಸಿದ್ದ. ಶ್ರೀರಂಗಪಟ್ಟಣದ ಪತನಾನಂತರ ಟೀಪುವಿನ ಅರಮನೆಯಲ್ಲಿ ಬ್ರಿಟಿಷರು ವಶಪಡಿಸಿಕೊಂಡ



ಅಮೂಲ್ಯ ವಸ್ತುಗಳಲ್ಲಿ ಅತ್ಯಮೂಲ್ಯವಾದವುಗಳೆಂದರೆ "ರಾಜ್ಯದ ರಹಸ್ಯ ಕಾಗದಪತ್ರಗಳು." ಆ ಕಟ್ಟುಗಳಲ್ಲಿ ಅನೇಕ ಪತ್ರಗಳಿವೆ. ಆ ಪತ್ರಗಳಲ್ಲಿ ಬರೆದ ಪತ್ರವೂ ಒಂದು. ಆಂಗ್ಲರು ಹೊರಗಿಡದೆ ರಹಸ್ಯವಾಗಿಯೇ ಉಳಿಸಿಕೊಂಡಿರುವ ಪತ್ರಗಳಿನ್ನೆಷ್ಟಿವೆಯೋ?

ಫ್ರೆಂಚ್ ಗಣರಾಜ್ಯ ಸ್ವಾತಂತ್ರ್ಯ ಸಮಾನಸ್ಕಂಧತೆ

ತಂಗುವೀಡು, ಕೈರೋ

27.1.1799

ಏಕೈಕ ಮತ್ತು ಅವಿಭಾಜ್ಯ, ನೆಪೋಲಿಯನ್ ಬೋನಪಾರ್ಟ್, ರಾಷ್ಟ್ರೀಯ ಪರಿಷತ್ತಿನ ಸದಸ್ಯ ಮತ್ತು ದಂಡನಾಯಕನಿಂದ.

ಮಹೋತ್ತಮ ಉದಾರಿ ಸುಲ್ತಾನ ಮತ್ತು ನಮ್ಮ ಪರಮೋತ್ತಮ ಮಿತ್ರ ಟಿಪ್ಪೂ ಸಾಹೇಬರಿಗೆ:

ಅಸಂಖ್ಯಾತವೂ, ಅಜೇಯವೂ, ಆದ ಸೈನ್ಯದಿಂದೊಡಗೂಡಿ, ಇಂಗ್ಲೆಂಡಿನ ಕಬ್ಬಿಣದ ನೊಗದಿಂದ ತಮ್ಮನ್ನು ಮುಕ್ತಗೊಳಿಸುವ ಉತ್ಕಟ ಅಪೇಕ್ಷೆಯಿಂದ, ನಾನು ಕೆಂಪು ಸಮುದ್ರದ ತೀರ ಪ್ರದೇಶಕ್ಕೆ ಬಂದಿರುವೆನೆಂಬ ಸಮಾಚಾರವನ್ನು ಈಗಾಗಲೇ ನಿಮಗೆ ತಿಳುಹಿಸಲಾಗಿದೆ. ತಮ್ಮ ರಾಜಕೀಯ ಪರಿಸ್ಥಿತಿಯೇನೆಂಬುದನ್ನು ಮಸ್ಕತ್ ಮಕ್ಕಾ ಮೂಲಕ ತಮ್ಮಿಂದ ತಿಳಿಯಲು ಈ ಸಮಯದಲ್ಲಿ ವಿಶೇಷ ಕುತೂಹಲದಿಂದ ಕೂಡಿದ್ದೇನೆ. ತಮ್ಮ ಅಂತರಂಗಕ್ಕೆ ಸೇರಿದ, ಬುದ್ಧಿವಂತನಾದೊಬ್ಬ ಗೃಹಸ್ಥನನ್ನು ತಾವು ನನ್ನ ಬಳಿಗೆ ಕಳುಹಿಸಬೇಕೆಂದು ಆಶಿಸುತ್ತೇನೆ. ಆತನೊಂದಿಗೆ ನಾನು ಮಾತುಕತೆ ನಡೆಸಬಹುದು.

ಜಗದೀಶ್ವರನು ತಮ್ಮ ಬಲವನ್ನು ಬೆಳೆಸಲಿ.

ತಮ್ಮ ಶತ್ರುಗಳನ್ನು ಧ್ವಂಸ ಮಾಡಲಿ.

(ಸಹಿ)

ಬೋನಾಪಾರ್ಟ್.

ಈ ಒಂದು ಪತ್ರವು ಟೀಪು-ನೆಪೋಲಿಯನ್ ಇಬ್ಬರು ಮಹಾವೀರರ ಪರಸ್ಪರ ಸ್ನೇಹಬಾಂಧವ್ಯವೆಂತಹುದೆಂಬುದನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತದೆ. ಟೀಪುವಿನ ಪತನದೊಂದಿಗೆ, ರಾಜ್ಯಾಪಹಾರದೊಂದಿಗೆ, ಅರಮನೆಯ ಗ್ರಂಥ ಭಂಡಾರದೊಂದಿಗೆ, ಅಮೂಲ್ಯ ಪತ್ರ ವ್ಯವಹಾರ ಸಾಹಿತ್ಯಾಪಹಾರವೂ ಆಯಿತು. ಅಪಹೃತ ಸಾಹಿತ್ಯದಲ್ಲಿ ತಮಗೆ ಅನುಕೂಲವಾದಷ್ಟನ್ನು ಆಂಗ್ಲರು ಪ್ರಕಟಿಸಿದರು. 1.8.1799ರಲ್ಲಿ ಮದರಾಸಿನ ಸೆಂಟ್ ಜಾರ್ಜ್ ಕೋಟೆಯಲ್ಲಿ

1) ಟೀಪು ಸುಲ್ತಾನನಿಗೂ ಫ್ರೆಂಚ್ ಜನಾಂಗಕ್ಕೂ ನಡೆದ ಪತ್ರ ವ್ಯವಹಾರ;

2) ಟೀಪು ಸುಲ್ತಾನನಿಗೂ ತುರ್ಕಿ, ಪರ್ಶಿಯ ಮೊದಲಾದ ವಿದೇಶಗಳಿಗೂ ನಡೆದ ಪತ್ರವ್ಯವಹಾರ;

ಎಲ್ಲ ಇಂಗ್ಲೀಷಿಗೆ ಭಾಷಾಂತರವಾಗಿ ಪ್ರಕಟವಾಯಿತು. ಅನಂತರ ಕರ್ಕ್ ಪ್ಯಾಟ್ರಿಕ್ ಎಂಬಾತ ಟೀಪು ಸುಲ್ತಾನನ ಪರ್ಶಿಯನ್ ಪತ್ರಗಳಲ್ಲಿ ಹಲವನ್ನಾಯ್ದು ಇಂಗ್ಲಿಷಿಗೆ ಭಾಷಾಂತರ ಮಾಡಿ ಪ್ರಕಟಿಸಿದ. ಅಪ್ರಕಟಿತ ಸಾಹಿತ್ಯ ಅಪಾರವಾಗಿದೆ. ಈ ಐತಿಹಾಸಿಕ ಸಾಹಿತ್ಯವನ್ನೆಲ್ಲ ಸಂಗ್ರಹ ಮಾಡಿ, ಸಂಶೋಧನೆ ನಡೆಸಿದಾಗ, ಸತ್ಯ ದರ್ಶನವಾದೀತು; ಟೀಪು ಸುಲ್ತಾನನು ಆಂಗ್ಲ ಇತಿಹಾಸಕಾರರು ಹೇಳುವಂತೆ ಮೃಗವೆ, ಭೂತವೆ, ಕಿರಾತನೇ; ಇಲ್ಲ ಮನುಷ್ಯನೇ, ನಾಗರಿಕನೇ, ಪ್ರಾಮಾಣಿಕನೇ, ದೇಶಭಕ್ತನೇ; ಮಾನಧನೇ ಎಂಬುದು ಸ್ಪಷ್ಟವಾದೀತು.

ಫ್ರೆಂಚರೂ ಇಂಗ್ಲಿಷರೂ ಆಗರ್ಭ ಶತ್ರುಗಳು. ಅಮೆರಿಕದಲ್ಲಿ ವಸಾಹತುಗಳನ್ನು ಕಳೆದುಕೊಂಡರು. ಅಲ್ಲಿ ಅವರ ರಕ್ತಬಾಂಧವರೇ ಅವರ ಪಾಲಿಗೆ ಮೃತ್ಯುವಾದರು.

ಪೂರ್ವಾರ್ಧಗೋಳದಲ್ಲಿ ಭಾರತದಲ್ಲಾದರೂ ನಿರುಪಾಧಿಕವಾಗಿ ಸಾಮ್ರಾಜ್ಯಧ್ವಜ ಹಾರಿಸೋಣವೆಂದರೆ ಹಾಳು ಫ್ರೆಂಚರ ಕಾಟ! 10.6.1798ರಲ್ಲಿ ವಿಲಾಯಿತಿಯ 'ಕೋರ್ಟ್ ಆಫ್ ಡೈರೆಕ್ಟರ್'ಗಳ ರಹಸ್ಯ ಸಮಿತಿಯವರು ಬಂಗಾಳದ ಗವರ್ನರ್ ಜನರಲ್‌ಗೆ ದೀರ್ಘವಾದೊಂದು ಪತ್ರ ಬರೆಯುತ್ತಾ:

"ಪೂರ್ವದೇಶದ ನಮ್ಮ ಸಾಮ್ರಾಜ್ಯ ಕುರಿತು ಫ್ರೆಂಚರಿಗೆ ಮೊದಲಿನಿಂದಲೂ ಅಸೂಯೆ ಇದ್ದೇ ಇದೆ. ಗುಡ್ ಹೋಪ್ ಭೂಶಿರ ಬಳಸಿ ಬರುವ ಮಾರ್ಗಕ್ಕಿಂತ ಹತ್ತಿರದ ಮಾರ್ಗವೊಂದನ್ನು ಹುಡುಕುವುದರಲ್ಲಿ ಸರಕಾರದವರು ಕುತೂಹಲಿಗಳಾಗಿದ್ದರು. ಇಂದಿನ ಫ್ರೆಂಚ್ ಸರಕಾರವಾದರೂ ಎಂತಹ ಕಷ್ಟನಷ್ಟಗಳನ್ನಾದರೂ ಸಹಿಸಿ, ಎಂತಹ ವಿಪತ್ತನ್ನಾದರೂ ಎದುರಿಸಿ, ಅಸಾಧಾರಣ ಸಾಹಸೋದ್ಯಮಗಳನ್ನೂ ಹೂಡಿ, ಪ್ರಪಂಚದ ಆ ಭಾಗದಲ್ಲಿ ಬ್ರಿಟಿಷ್ ಪ್ರಭುತ್ವ ಪ್ರಭಾವವನ್ನು ನಿರ್ಮೂಲಗೊಳಿಸಲಾರದೆ ಹೋದರೆ ಹೋಗಲಿ, ನಿರ್ಬಲಗೊಳಿಸಲು, ಪ್ರಯತ್ನ ಮಾಡುತ್ತಿದೆ. ಈ ಕಾರ್ಯಸಾಧನೆಗೆ ಭಾರತದ ಪ್ರಭುತ್ವಗಳ ಪೂರ್ವಭಾವಿ ಸಂಪರ್ಕ-ಸಹಾಯಗಳು ಬೇಕು. ಅದಿಲ್ಲದೆ ಯಾವ ಕೆಲಸ ಮಾಡಲೂ ಸಾಧ್ಯವಿಲ್ಲ. ಭಾರತದ ಇಂದಿನ ಪರಿಸ್ಥಿತಿಯಲ್ಲಿ ಫ್ರೆಂಚರ ಮಹದಾಶಯ ಸಾಧನೆಗೆ ಟೀಪು ಸುಲ್ತಾನನೊಬ್ಬನೆ ಪರಮ ಬಲಯುತ ಸಾಧನವೆಂದೂ ಅವನನ್ನೇ ಅವರು ಉಪಯೋಗಿಸಿಕೊಳ್ಳುವರೆಂದೂ ಕಾಣುತ್ತದೆ" ಎಂದು ಹೇಳಿದರು. ಟೀಪು ಫ್ರೆಂಚರೊಂದಿಗೆ ಕಲೆತಹಾಗಿಲ್ಲ; ಪೂರ್ವ ಸಿದ್ಧತೆಗಳನ್ನೇನೂ ಅವನು ಮಾಡಿಕೊಂಡ ಹಾಗಿಲ್ಲ, ಇತ್ಯಾದಿಯಾಗಿ ಎಣಿಕೆ ಹಾಕುತ್ತ ಕೂಡಬೇಡಿರೆಂದು ಎಚ್ಚರಿಕೆ ಕೊಡುವುದರಿಂದ ಮಾತ್ರ



ತೃಪ್ತರಾಗದೆ "ಟೀಪುವು ಮೇಲೆ ಯುದ್ಧವನ್ನಾರಂಭಿಸುವವರೆಗೆ ಕಾಯಬೇಡಿ ... ಸೂಚಿಸಿದರು!!


26.11.1798ನೆಯ ದಿನ 'ರಹಸ್ಯ ಸಮಿತಿ' ... ಇಂಡಿಯಾ ಸರ್ಕಾರಕ್ಕೊಂದು ಪತ್ರ ಬರೆದರು. ... ಈಜಿಪ್ಟನ್ನು ವಶಪಡಿಸಿಕೊಂಡರಾದರೆ, ಆ ದೇಶದ ... ಪ್ರಭುತ್ವ ಸ್ಥಾಪಿಸಿದರಾದರೆ, ಅವರು ಕೆಂಪು ಕಡಲು ... ಕೊಲ್ಲಿ ಮಾರ್ಗವನ್ನಾಕ್ರಮಿಸುವುದು ಖಂಡಿತ ... ಟೇಬಲ್ ಮಾಂಡೆಲ್ ಬಳಿ ಇದೆ. ಫ್ರೆಂಚರು ... ದ್ವೀಪವನ್ನಾಕ್ರಮಿಸಿ, ಅಲ್ಲಿಗೆ ಸೈನ್ಯ ಕಳಿಸಿ, ... ಬಲಗೊಳಿಸುವುದೂ ಖಂಡಿತ. ಪೆರಿಂ ದ್ವೀಪ ... ಕೈಗೆ ಬೀಳದಂತೆ ನೋಡಿಕೊಳ್ಳಬೇಕು. ಈ ಕಾರ್ಯ ಸಾ... ಗ್ರೇಟ್ ಬ್ರಿಟನ್ ಸಾಧ್ಯವಾದದ್ದನ್ನೆಲ್ಲ ಮಾಡಬೇಕು ... ಫ್ರೆಂಚರ ಕೈಗೆ ಬಿದ್ದರೆ ನೆಪೋಲಿಯನ್ನನು ಟೀಪುವಿ... ಕಳುಹಿಸುವುದು ಸುಕರವಾಗುತ್ತದೆ. ಹಿಂದೂ ... ಹಡಗುಗಳು ಹೋಗಬಾರದೆಂಬುದು ನಿಶ್ಚಯವಾದ... ದ್ವೀಪವನ್ನು ಬ್ರಿಟಿಷರು ಆಕ್ರಮಿಸಬೇಕು; ತಡಮಾಡ... ಫ್ರೆಂಚರಿಗೇನಾದರೂ ಈ ಸುಳಿವು ಗೊತ್ತಾದ... ಮೊದಲವರು ಆ ದ್ವೀಪವನ್ನಾಕ್ರಮಿಸುತ್ತಾರೆ; ತ್ವರೆ... ಈ ರೀತಿಯಾಗಿ ತಮ್ಮ ಆತುರ- ಕಾತು... ವ್ಯಕ್ತಪಡಿಸಿದರು. ಹದಿನೆಂಟನೆಯ ಶತಮಾನ... "ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿ... ಇಲ್ಲವೆ" ಎಂಬುದನ್ನು ನಿಶ್ಚಯಿಸಬೇಕಾಗಿತ್ತು, ನಿಜವಾ... ಪಶ್ಚಿಮಾರ್ಧದಲ್ಲಿ ನೆಪೋಲಿಯನ್ ಬೋನಪಾ... ಪೂರ್ವಾರ್ಧಗೋಳದಲ್ಲಿ ಟಿಪ್ಪೂ ಸುಲ್ತಾನ್-ಇವ... ಬ್ರಿಟಿಷರ ಪಾಲಿಗೆ ಮೃತ್ಯುಪ್ರಾಯರಾಗಿದ್ದರು. ಸ... ಅವರ ಹೆಸರುಗಳೇ ಸಾಕಾಗಿತ್ತು ಬ್ರಿಟಿಷರ ಶಕ್ತಿಗಳನ್ನೆಲ್ಲ ಕೆಣಕಲು, ಎಬ್ಬಿಸಲು. ಈ ಪತ್ರದ ವಾಕ್ಯವು ಗಮನಾರ್ಹವಾಗಿದೆ.

"ಭಾರತದಲ್ಲಿನ ನಮ್ಮ ಇರುವಿಕೆಯೇ ಅಲ್ಲ ... ಅಲ್ಲಿನ ನಮ್ಮ ಅಮೂಲ್ಯ ಪ್ರದೇಶಗಳ ಸಂರಕ್ಷ... ನಮ್ಮ ಈ ಸರ್ವಸ್ವದ ಮೇಲೆ ಕಣ್ಣಿಟ್ಟು ಘೋರ ಸಂ... ಹೂಡುತ್ತಿರುವ ಫ್ರೆಂಚರ ಅಜೇಯ ಬಲವನ್ನು ಅವರನ್ನು ಸೋಲಿಸುವುದರ ಮೇಲೆ ನಿಂತಿದೆ."

ಈ ನಿರ್ಣಯದಂತೆ ಬ್ರಿಟಿಷರು ತಮ್ಮ ... ನೀತಿಗಳನ್ನು ರೂಪುಗೊಳಿಸಿಕೊಂಡರು. ಸ... ಕಾರ್ಯತಂತ್ರವನ್ನು ಪರಿಪೂರ್ಣಗೊಳಿಸಿದರು. ಫ್ರಾನ್ಸ್ ... ಗವರ್ನರ್ ಜನರಲ್ ಮತ್ತು ದಂಡನಾಯಕ ಮ... 30.1.1798ನೆಯ ದಿನ ಹೊರಡಿಸಿದ ಪ್ರಕಟ... ನೆಪವಮಾಡಿಕೊಂಡರು. ಟೀಪುವಿನ ಮೇ... ಆಪಾದನೆಗಳನ್ನು ಹೊರಿಸಿದರು.

1. ಟೀಪು ಸುಲ್ತಾನನು ಫ್ರಾನ್ಸ್ ದ್ವೀಪದ ... ರಾಯಭಾರಿಗಳನ್ನೂ ಕಳುಹಿಸಿದ. ಭಾರತದಲ್ಲಿನ ... ಕ್ಷೇತ್ರಗಳಿಗೆ ವಿರುದ್ಧವಾಗಿ ಈ ಸರಕಾರದೊಂದಿಗೆ ... ಬೀಳುವ ಮತ್ತು ಆತ್ಮಸಂರಕ್ಷಣೆ ಮಾಡಿಕೊಳ್ಳುವ ಒಪ್ಪಂದ... ವಮಾಡಿಕೊಂಡ. ಈ ಒಪ್ಪಂದ ಸರಕಾರ... ಅಂಗೀಕೃತವಾಯಿತು. ಸಾರ್ವಜನಿಕವಾಗಿ ಪ್ರ... ಆಯಿತು.

2. ಟೀಪು ಸುಲ್ತಾನನು ಆ ರಾಯಭಾರಿಗಳ... ಫ್ರಾನ್ಸಿನ ಆಡಳಿತ ಮಂಡಲಿಗಾಗಿ ಪತ್ರಗಳನ್ನು ... ಮಲಾರ್ಟಿಕನು ಅವುಗಳನ್ನು ಫ್ರಾನ್ಸಿಗೆ ಕಳುಹಿಸುತ... ಸೂಚನೆ ಮಾಡಿದ್ದ.



ಉಡುಪಿಯಲ್ಲಿ ಕಂಡ ಕನಸು!


ವಿಡಂಬನೆ

ಮೋದಿಯವರೇ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಹೇಳಿರುವಂತೆ- ದಲಿತರು ಮೇಲ್ಜಾತಿಯವರ ಮಲ ಬಳಿಯುವ ಕಾರ್ಯ ಮೋಕ್ಷಕ್ಕೆ ದಾರಿಯಂತೆ, ಅದರಲ್ಲಿ ದಲಿತರಿಗೆ ಆಧ್ಯಾತ್ಮಿಕ ಅನುಭೂತಿ ಸಿಗುತ್ತದಂತೆ, ಅದಕ್ಕಾಗಿ ಅವರು ಸ್ವಯಿಚ್ಛೆಯಿಂದ ಮಲ ಹೊರುವುದಂತೆ, ಮೇಲಾಗಿ ಅದು ಹಿಂದಿನ ಜನ್ಮದ ಪಾಪ ತೊಳೆಯುವ ಅತ್ಯಂತ ಸುಲಭದ ಸಾಧನವಂತೆ, ಹಿಂದಿನ ಜನ್ಮದಲ್ಲಿ ಮಲ ಹೊತ್ತು ಕರ್ಮ ಸವೆಸಿದವರು ಈ ಜನ್ಮದಲ್ಲಿ ಈಗಾಗಲೇ ಬ್ರಾಹ್ಮಣ-ಜೈನ-ಬನಿಯಾಗಳಾಗಿ ಹುಟ್ಟಿದ್ದಾರಂತೆ! ಹೀಗೇ ಮೋದಿಯವರು ಹೇಳಿದ ಹಿಂದಿನ ಜನ್ಮದ ಕರ್ಮ ಸವೆಸುವ ಸುಲಭದ ಮಾರ್ಗ ಅನುಸರಿಸಲು ಹಾಗೂ ಆಧ್ಯಾತ್ಮಿಕ ಅನುಭೂತಿ ಹೊಂದಲು ಉಡುಪಿ ಸ್ವಾಮೀಜಿ ಮತ್ತೂ ಚಕ್ರವರ್ತಿ ಮಿಥುನ ಸೇರಿ ಕನಕ ನಡೆ ಆಯೋಜಿಸಿದ್ದನ್ನು ಚಲೋ ಉಡುಪಿಯವರು ಅಸ್ಪೃಶ್ಯತಾ ಆಚರಣೆ ಎಂದು ತಪ್ಪು ತಿಳಿದಿದ್ದರು. ಹೀಗೆ ಜನ್ಮಾಂತರದ ಕರ್ಮ ತೊಳೆಯಲು 200 ಜನರ ಠೋಳಿ ಅಕ್ಟೋಬರ್ 23 ಕ್ಕೆ ತಯಾರಾಯಿತು. ಎಲ್ಲರೂ ಮಠದ ಪುಷ್ಕರಣಿ ತೊಳೆಯುತ್ತೇವೆ ಎಂದು ಮುನ್ನುಗ್ಗಿದರು. ಕಾರಣ ಆ ಪುಷ್ಕರಣಿ ಮಧ್ವಾಚಾರ್ಯರು, ವಾದಿರಾಜರು ಹಾಗೂ ಇತರ ಸ್ವಾಮೀಜಿಗಳು ಹಿಂದಿನ 780 ವರ್ಷಗಳಿಂದ ಸ್ನಾನ ಮಾಡಿದ ಕೆರೆಯದು.

ಆ ಕೆರೆ ಎಷ್ಟು ಪವಿತ್ರ ಎಂದರೆ ವಾದಿರಾಜರು ತಮ್ಮ 119 ನೇ ವಯಸ್ಸಿನಲ್ಲಿ ಜಲಸ್ತಂಭ ಎಂಬ ಹೆಸರಿನಲ್ಲಿ ಕಾಲು ಜಾರಿ ಬಿದ್ದು ಸತ್ತ ಸ್ಥಳವಿದು. 780 ವರ್ಷಗಳಿಂದ ಯಾರೂ ಪುಷ್ಕರಣಿ ಕ್ಲೀನ್ ಮಾಡುವ ಗೋಜಿಗೆ ಹೋಗಿರಲಿಲ್ಲ. ಈಗ ಹಸ್ತಮಿಥುನ ಚಕ್ರವರ್ತಿಯ ಶುಭಹಸ್ತದಿಂದ ಅದು ಸ್ವಚ್ಛವಾಗುವ ಭಾಗ್ಯ ಪಡೆಯಿತು. 500 ವರ್ಷಗಳ ಹಿಂದೆ ಕನಕದಾಸರು ಆಗಿನ ಉಡುಪಿಯ ಮಠಾಧೀಶ ವಾದಿರಾಜರ ಆತ್ಮೀಯರಾಗಿದ್ದರೂ ಅವರು ಶೂದ್ರರಾಗಿದ್ದರಿಂದ ಆ ಪುಷ್ಕರಣಿಯಲ್ಲಿ ಸ್ನಾನ ಮಾಡುವಂತಿರಲಿಲ್ಲ. ಹಾಗಾಗಿ ಆಗ ಸಣ್ಣ ಊರಾಗಿದ್ದ ಉಡುಪಿಯಲ್ಲಿ ಕನಕರು ತಂಬಿಗೆ ಹಿಡಿದು, ಕ್ಷಮಿಸಿ, ತೆಂಗಿನ ಗರಟೆ ಹಿಡಿದು ಮಠದ ಹಿಂಬದಿಯಿದ್ದ ಕಾಡಿಗೆ ಹೋಗಿ ನಂತರ ಅಲ್ಲಿಯೇ ಬದಿಯಲ್ಲಿದ್ದ ಕೆರೆಯಲ್ಲಿ ಮಿಂದು ಬರುತ್ತಿದ್ದರು. (ಆ ಕಾಲದಲ್ಲಿ ಬ್ರಾಹ್ಮಣರು ಮಾತ್ರ ಶೌಚಕ್ಕೆ ತಂಬಿಗೆ ಉಪಯೋಗಿಸಬಹುದಿತ್ತು. ಶೂದ್ರರು ತೆಂಗಿನ ಗರಟೆಯಲ್ಲಿಯೇ ನೀರು ಹಿಡಿದು ಕಾಡಿಗೆ ಹೋಗಬೇಕಿತ್ತು. ಕನಕರಿಗೆ ಊಟಕ್ಕೆ ಸಹಾ ಮಠದಿಂದ ಗರಟೆಯಲ್ಲಿಯೇ ಗಂಜಿ ಸಿಗುತ್ತಿತ್ತು).

ಕನಕದಾಸರಿಗೂ ಎಂದೂ ಸ್ನಾನ ಭಾಗ್ಯ ಒದಗಿಸದ ಮಠದ ಈ ಪುಷ್ಕರಣಿಯನ್ನು ಈಗ ಅದೇ ಕನಕರ ಹೆಸರಲ್ಲಿ ಕೇವಲ ಬ್ರಾಹ್ಮಣ ಪಡ್ಡೆಗಳಿಗೆ ಕ್ಲೀನ್ ಮಾಡಲು ಕೊಡಲಾಯಿತು. ಸ್ವಾಮೀಜಿಗಳಿಗೆ ಸೂಲಿಬೆಲೆ ಬ್ರಾಹ್ಮಣನಲ್ಲ ಅವನು ವೈಶ್ಯಾವಾಣಿ ಎಂಬ ಕೊಂಕಣಿ ಶೂದ್ರ ಜಾತಿಗೆ ಸೇರಿದವನು ಎಂದು ಗೊತ್ತಿರಲಿಲ್ಲವಂತೆ ಪಾಪ. ಅದಕ್ಕಾಗಿ ಮಧ್ವರು ಮಿಂದ ಪವಿತ್ರ ಪುಷ್ಕರಣಿಯ ಸ್ವಚ್ಛತೆಯನ್ನು ಸೂಲಿಬೆಲೆಯ ಗುಂಪಿಗೆ ವಹಿಸಿ ಕೊಟ್ಟಿದ್ದು. ಉಳಿದ ಶೂದ್ರ ಪಡ್ಡೆಗಳಿಗೆ ಮಠದ ಶೌಚಾಲಯ, ಬಚ್ಚಲು, ಕಾರ್ ಪಾರ್ಕ್ ತೊಳೆಯುವ ಕೆಲಸ ವಹಿಸಲಾಯಿತು. ಝರಿ ಸೀರೆ ಉಟ್ಟು ಒಂದು ಕಿಲೋ ಚಿನ್ನ ಹೇರಿಕೊಂಡು ಬಂದಿದ್ದ ಕೆಲವು ಬಂಟ ಡುಮ್ಮಿಯರು ಪೊರಕೆ ಹಿಡಿದು ಅಲ್ಲಿ ಇಲ್ಲಿ ಓಡಾಡಿ ಕ್ಯಾಮರಾಕ್ಕೆ ಪೋಜ್ ಕೊಡುತ್ತಿದ್ದರು ಅಷ್ಟೇ.

ಮೊದಲಿಗೆ ಕನಕ ನಡೆಗೆ ತುಂಬಾ ಕಡಿಮೆ ಜನರು ಬಂದಿದ್ದು ನೋಡಿ ಒಬ್ಬ ವಟು ಹೇಳಿದನಂತೆ "ಸ್ವಾಮೀಜಿಗಳೇ ಮಠದ ಆವರಣ ಎಷ್ಟೋ ವರ್ಷದಿಂದ ಸ್ವಚ್ಛವಾಗದೇ ಕಸದ ರಾಶಿ ತುಂಬಿ ದುರ್ಗಂಧ ಬರುತ್ತಿದೆ. ಇದನ್ನು ದಿನಾಲೂ ಸ್ವಚ್ಛ ಮಾಡುವುದು ಪೌರ ಕಾರ್ಮಿಕರ ಕರ್ತವ್ಯ ತಾನೇ. ಅವರಿಗೆ ಇದಕ್ಕೆ ಸರಕಾರ ಸಂಬಳ ಕೊಡುತ್ತದೆಯಲ್ಲವೇ. ಪೌರ ಕಾರ್ಮಿಕರನ್ನು ಕರೆದು ನಿನ್ನೆಯೇ ಮಠ ಸ್ವಚ್ಛ ಮಾಡಿಸಿದ್ದರೆ ಇಂದು ನಾವು ಮೋದಿಯಂತೆ ಕೇವಲ ಪೊರಕೆ ಹಿಡಿದು ಫೋಟೋಗೆ ಪೋಜ್ ಕೊಟ್ಟು ನಮ್ಮ ಕನಕ ನಡೆಯ ಹರಕೆಯನ್ನು ಹತ್ತೇ ನಿಮಿಷದಲ್ಲಿ ಮುಗಿಸಿ ನೇರವಾಗಿ ಊಟಕ್ಕೆ ಹೋಗಬಹುದಿತ್ತು" ಅದಕ್ಕೆ ಉತ್ತರವಾಗಿ ಸ್ವಾಮೀಜಿ ಹೇಳಿದರಂತೆ "ಹೌದು ಮಠದಲ್ಲಿ ಭಾರಿ ಕಸ ತುಂಬಿದೆ ನಿಜ. ಅದರ ವಾಸನೆ ನಮಗೆ ಅಭ್ಯಾಸವಾಗಿ ಹೋಗಿದೆ. ಆದರೆ ಪೌರ ಕಾರ್ಮಿಕರನ್ನು [illegible]



ಯಾಕೆಂದರೆ ಅವರೆಲ್ಲ ದಲಿತರಾಗಿರುವುದರಿಂದ ಮಠದ ಆವರಣಕ್ಕೆ ಅವರು ಬಂದರೆ ಅಶುದ್ಧಿಯಾಗಿ, ಪ್ರತಿ ದಿನ ಅವರು ಸ್ವಚ್ಛ ಮಾಡಿ ಹೋದ ಮೇಲೆ ನಾವು ಸೆಗಣಿ ಮತ್ತು ಗಂಜಲದಿಂದ ಮಠದ ಆವರಣ ದಿನಾಲೂ ಶುದ್ಧಿ ಮಾಡುತ್ತಲೇ ಇರಬೇಕಾಗುತ್ತದೆ. ಆ ಕೆಲಸಕ್ಕೆ ಇನ್ನಷ್ಟು ಬ್ರಾಹ್ಮಣ ವಟುಗಳನ್ನು ಬಿಟ್ಟಿ ನೇಮಿಸಬೇಕಾಗುತ್ತದೆ. ಅದಕ್ಕಾಗಿ ನಾವು ಪೌರ ಕಾರ್ಮಿಕರಿಗೆ ದಿನಾಲೂ ಬಂದು ಸ್ವಚ್ಛಗೊಳಿಸಲು ಅನುಮತಿ ಕೊಟ್ಟಿಲ್ಲ. ಅದರಲ್ಲಿ ಪೌರ ಕಾರ್ಮಿಕರ ತಪ್ಪೇನೂ ಇಲ್ಲ. ಮೇಲಾಗಿ ಉಡುಪಿ ಚಲೋ ಬಣ್ಣವೂ ನೀಲಿ ಹಾಗೂ ಪೌರ ಕಾರ್ಮಿಕರ ಯೂನಿಫಾರ್ಮ್ ಬಣ್ಣವೂ ನೀಲಿ. ಹಾಗಾಗಿ ಕಾಕತಾಳೀಯವಾಗಿ ನಿನ್ನೆಯೇ ಪೌರ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಸ್ವಚ್ಛ ಮಾಡಲು ಮಠದ ಆವರಣದ ಒಳಗೆ ಬಂದಿದ್ದರೆ ಅದನ್ನು ಜಯವಿಜಯ ಕೇಸರಿವಾಣಿ ಪತ್ರಿಕೆಗಳು ಆ ನೀಲಿ ಯೂನಿಫಾರ್ಮ್‌ಗಳವರ ಫೋಟೋ ತೆಗೆದು 'ನೀಲಿ ಬಟ್ಟೆ ತೊಟ್ಟ ಚಲೋ ಉಡುಪಿಯವರಿಂದ ಮಠಕ್ಕೆ ಮುತ್ತಿಗೆ' ಎಂದು ಬೊಬ್ಬಿರಿಯುತ್ತಿದ್ದವು. ನಂತರ ಪೊಲೀಸರು ಆ ಬಡ ದಲಿತ ಪೌರ ಕಾರ್ಮಿಕರನ್ನು ಬಂಧಿಸಿ ಕೊಂಡು ಹೋಗುತ್ತಿದ್ದರು ಪಾಪ. ಇದರಿಂದ ಚಲೋ ಉಡುಪಿಯವರಿಗೆ ನಮ್ಮನ್ನು ಹಣಿಯಲು ಇನ್ನೊಂದು ಕಾನೂನಿನ ಆಯುಧ ಸಿಗುತ್ತಿತ್ತು. ಆದರಿಂದಾಗಿ ಇಡೀ ದೇಶದಲ್ಲಿ ನಮ್ಮ ಮಠದ ಮಾನ ಹರಾಜಾಗುತ್ತಿತ್ತು. ನಾವು ಮತ್ತೆ ಘೋರ ಉಪವಾಸ ಮಾಡಬೇಕಾಗುತ್ತಿತ್ತು."

ನಂತರ ಎಲ್ಲಾ ವಟುಗಳು ಪುಷ್ಕರಣಿ ಸ್ವಚ್ಛ ಮಾಡಿದರು ಮತ್ತು ಶೂದ್ರರು ಶೌಚಾಲಯ ತೊಳೆದರು (ಮಧ್ವ-ವಾದಿರಾಜರ ಕಾಲದಲ್ಲಿ ಈ ಶೌಚಾಲಯಗಳು ಇರಲಿಲ್ಲ, ಕೇವಲ ಪುಷ್ಕರಣಿ ಮಾತ್ರ ಇತ್ತು, ಹಿಂದಿನ ಕಾಲದಲ್ಲಿ ಆಚಾರ್ಯರುಗಳು ಪುಷ್ಕರಣಿಯಲ್ಲಿಯೇ ಪಂಚೆ ಒಳಉಡುಪು ಎಲ್ಲ ಒಗೆದು, ಅಲ್ಲಿಯೇ ಸ್ನಾನ 'ಇತ್ಯಾದಿ' ಗಳನ್ನು ಪೂರೈಸುತ್ತಿದ್ದರು. ಹಾಗಾಗಿ ಮಠದ ಶೌಚಾಲಯಗಳಿಗೆ ಪುಷ್ಕರಣಿಯಷ್ಟು ಪರಿಮಳ ಮತ್ತು ಪಾವಿತ್ರ್ಯ ಇಲ್ಲ. ಅದಕ್ಕಾಗಿ ಈಗ ಶೂದ್ರರನ್ನು ಶೌಚಾಲಯದ ಸ್ವಚ್ಛತೆಗೆ ಹಚ್ಚಿದ್ದು).

ಮಠದ ಪುಷ್ಕರಣಿ ಶೌಚಾಲಯಗಳ ಭವ್ಯ ಇತಿಹಾಸ ಸಂಶೋಧಿಸುತ್ತಾ ನನಗೆ ದಣಿವಾಗಿ ಅಲ್ಲಿಯೇ ಒಂದು ಮರದ ಕೆಳಗೆ ಕುಳಿತಾಗ ಜೊಂಪು ಹತ್ತಿತು!

ಇಂದು ಮಠದ ಸ್ವಚ್ಛತೆಯ ನಂತರ ಶುಕ್ರಾಚಾರ್ಯ ಸ್ವಾಮೀಜಿ ಮತ್ತು ಮೈಥುನ ಚಕ್ರವರ್ತಿ ದಲಿತರ ಕೇರಿಗೆ ಹೋಗಿ, ಕೃಷ್ಣ ಸುಧಾಮನ ಕಾಲು ತೊಳೆದಂತೆ ಸ್ವಾಮೀಜಿಯವರೇ ಅಲ್ಲಿದ್ದ ಹಿರಿಯ ವಯಸ್ಸಿನ ದಲಿತರ ಕಾಲು ತೊಳೆದು ಪಾದ ಪೂಜೆ ಮಾಡಿದರು. ಆ ಪಾದ ಪೂಜೆಯ ನೀರನ್ನು ಚಕ್ರವರ್ತಿ ಭಕ್ತಿಯಿಂದ ಗಟಗಟಾ ಕುಡಿದೇ ಬಿಟ್ಟ. ಅಷ್ಟೇ ಅಲ್ಲ ನಂತರ ಇನ್ನೊಂದು ದಲಿತರ ಮನೆಯಲ್ಲಿ ಅವರ ಹೆಂಗಸರು ಬಡಿಸಿದ ನಮ್ಮ ಚಲೋ ಉಡುಪಿಯಲ್ಲಿ ಉಳಿದಿದ್ದ ಫ್ರೀರೈಸ್ ಮತ್ತು ಗುಂಡಗೆ ಬಿಳಿಯಾಗಿದ್ದ ಒಂದು ಖಾದ್ಯವನ್ನೂ ಇಬ್ಬರೂ ಊಟ ಮಾಡಿದರು. ಬೇಯಿಸಿದ ಆ ಬಿಳಿ ಚೆಂಡನ್ನು ಸ್ವಾಮೀಜಿ ಜೀವನದಲ್ಲಿ ಮೊದಲ ಬಾರಿಗೆ ಸೇವಿಸಿದ್ದಂತೆ. (ಆ ಬಿಳಿ ಪುಂಡಿಯೊಳಗೆ ಒಂದು ಸಣ್ಣ ಹಳದಿ ಗೋಲಿ ಹೇಗೆ ಹಾಕಿದ್ದು ಎಂದು ಸ್ವಾಮಿ ಕೌತುಕದಿಂದ ಪ್ರಶ್ನಿಸಿದರು. ಅವರ ಜೊತೆಯಿದ್ದ ಚಕ್ರವರ್ತಿ "ಅದು ಮಟ್ಟೊ ತಲೆ, ಕ್ಷಮಿಸಿ ಮೊಟ್ಟೆ" ಎಂದು ವಿವರಿಸಿದ).

ದಲಿತರ ಪಂಕ್ತಿಯಲ್ಲೇ ಅವರಿಬ್ಬರ ಊಟವಾದ ಮೇಲೆ ಸ್ವಾಮೀಜಿ ಅಲ್ಲಿ ಗೋಡೆಯ ಮೇಲಿದ್ದ ಡಾ.ಅಂಬೇಡ್ಕರರ ಫೋಟೋ ಕಂಡು ಅತ್ಯಂತ ಭಾವುಕರಾಗಿ ಆ ಫೋಟೋ ಕೈಯಲ್ಲಿ ಹಿಡಿದು ಅಪ್ಪಿ ಮುದ್ದಾಡಿ ಜೈ ಭೀಮ್ ಜೈ ಭೀಮ್ ಎನ್ನುತ್ತಾ ಕುಣಿದಾಡಿ ಕೊನೆಗೆ "ಈ ಫೋಟೋ ನಾನು ಇಟ್ಟುಕೊಳ್ಳುತ್ತೇನೆ, ನನ್ನ ಮಠದ ಮಲಗುವ ಕೋಣೆಯಲ್ಲಿ ಇಡೀ ದಿನ ನನ್ನ ಕಣ್ಣ ಎದುರಿಗೆ ಕಾಣುತ್ತಿರುವಂತೆ ಈ ಪೂಜ್ಯ ಬಾಬಾಸಾಹೇಬರ ಫೋಟೋ ನೇತು ಹಾಕುತ್ತೇನೆ" ಎಂದು ಹೇಳಿ ಆ ಬಾಬಾಸಾಹೇಬರ ಫೋಟೋವನ್ನು ತಮ್ಮ ಜೋಳಿಗೆಯಲ್ಲಿ ಅತ್ಯಂತ ಭಯಭಕ್ತಿಯಿಂದ ತುರುಕಿದರು.

ಅದನ್ನು ಕಂಡು ಚಕ್ರವರ್ತಿ ಅಲ್ಲಿದ್ದ ಗೌತಮ ಬುದ್ಧನ ಫೋಟೋವನ್ನು ಮೆಲ್ಲಗೆ ತನ್ನ ಅಂಗಿಯ ಒಳಗೆ ಜಾರಿಸಿ ಈ ಮಹಾಮಾನವ ಬುದ್ಧ ತೋರಿದ ಮಾರ್ಗ ತಾನೂ ಅನುಸರಿಸುವುದಾಗಿ ಘೋಷಿಸಿ ಅಬುಧಾಬಿಗೆ ಹೋಗಿ ಅಲ್ಲಿಯೂ ಸ್ವಚ್ಛ-ಬೌದ್ಧ-ನಡೆ ಆಯೋಜಿಸಿ ಕೊಲ್ಲಿಯಲ್ಲಿ ಬೌದ್ಧ ಧಮ್ಮ ಪಸರಿಸುವುದಾಗಿ ಹೇಳಿದನು. ಕೊನೆಗೆ ಸ್ವಾಮೀಜಿ ದಲಿತ ಕೇರಿಯ ಬಬ್ಬ ಸ್ವಾಮಿ ದೈವದ ಗುಡಿಗೆ ಹೋಗಿ ಅಲ್ಲಿ ಬಬ್ಬುಸ್ವಾಮಿ ದೈವಕ್ಕೆ ಉದ್ದಂಡ ನಮಸ್ಕಾರ ಹಾಕಿ, ತೀರ್ಥ ಪ್ರಸಾದ ಎರಡೆರಡು ಬಾರಿ ಸೇವಿಸಿ, ಆ ಗುಡಿಯ ಹುಂಡಿಗೆ ನಾಗಾರ್ಜುನ ಕಂಪನಿಯವರು ಕೊಟ್ಟ ಸೂಟ್ ಕೇಸಿನಿಂದ ಒಂದು ಲಕ್ಷ ರೂಪಾಯಿ ತೆಗೆದು ಕಾಣಿಕೆ ಹಾಕಿ ಧನ್ಯರಾಗಿಯೇ ಬಿಟ್ಟರು ಸ್ವಚ್ಛತಾಚಾರ್ಯರು.

ಉಡುಪಿಯಲ್ಲಿ ಕನಕ ನಡೆ ಸ್ವಚ್ಛತೆಯ ಅದ್ಭುತ ಸಾಧನೆ ನೋಡಿ ಅಬುಧಾಬಿ ಕನ್ನಡಿಗರ ಕೋರಿಕೆಯಂತೆ ಚಕ್ರಿ ಅಬುಧಾಬಿಯಲ್ಲಿ ಸಾರ್ವಜನಿಕ ಕಸ ವಿಲೇವಾರಿ ಅರ್ಥಾತ್ ವೇಸ್ಟ್ ಮ್ಯಾನೇಜ್ಮೆಂಟ್ ಕಂಪನಿ ಸ್ಥಾಪಿಸಲಿದ್ದಾನಂತೆ ಹಾಗೂ ಸ್ವಾಮೀಜಿ ಆ ಕಂಪನಿಗೆ ಗಾರ್ಬೆಜ್ ಸೊಲ್ಯೂಷನ್ ಕನ್ಸಲ್ಟಂಟ್ ಆಗಲಿದ್ದಾರಂತೆ. ಭಾಗೋ ಭಾರತ್ ಭಾಗೋ ಬ್ರಾಂಡಿನ ಪೊರಕೆ ಪೂರೈಸುವ ಗುತ್ತಿಗೆದಾರ ಚಕ್ರಿಯ ಆಪ್ತಮಿತ್ರ ನಮೋಭಕ್ತ ನರಿ ಶೆಣೈಯಂತೆ. ಜತೆಗೆ ಮಣಿಪಾಲದಲ್ಲಿ ಚಕ್ರಿ ಒಂದು ವೃತ್ತಿಪರ ವೇಸ್ಟ್ ಮ್ಯಾನೇಜ್ಮೆಂಟ್ ಕಾಲೇಜ್ ತೆರೆದು ಅದರಲ್ಲಿ ಪೊರಕೆ ತಯಾರಿಸುವ, ಕಸಗುಡಿಸುವ, ಪ್ಲಾಸ್ಟಿಕ್ ಹೆಕ್ಕಿ ವಿಂಗಡಿಸುವ, ಮಲ ಹೊರುವ, ಆಕ್ಸಿಜನ್ ಮಾಸ್ಕ್ ಇಲ್ಲದೇ ಡ್ರೇನೇಜಿಗೆ ಇಳಿದು ಸಾಫ್ ಮಾಡುವ ವೈಜ್ಞಾನಿಕ ವಿಧಾನಗಳನ್ನು ಕಲಿಸಿಕೊಡಲಿದ್ದಾನೆ. ಎಲ್ಲಕ್ಕಿಂತ ಮಿಗಿಲಾಗಿ ಈ ಕಾಲೇಜಿನಲ್ಲಿ ಸತ್ತ ದನದ ಚರ್ಮ ಸುಲಿದು ಅದನ್ನು ಹದಗೊಳಿಸುವುದು ಮತ್ತೂ ದನದ ಮಾಂಸ ಹಾಗೂ ಎಲುಬನ್ನೂ ಹಾಳು ಮಾಡದೇ ಲಾಭಕರವಾಗಿ ಬಳಸುವ ವಿಧಾನಗಳನ್ನು ಕಲಿಸಲಾಗುತ್ತದೆ. ದನಗಳ್ಳರನ್ನು ಹಿಡಿದು ಅವರು ಸಾಯದಂತೆ ಹೊಡೆಯುವ ವೃತ್ತಿಪರ ವಿಧಾನ ಸಹಾ ಕಲಿಸುತ್ತಾರೆ. ಈ ಕಾಲೇಜಿಗೆ ಪ್ರವೇಶ ಕೇವಲ ಮೇಲ್ಜಾತಿಯವರಿಗೆ ಮಾತ್ರ. ಬ್ರಾಹ್ಮಣ ಕೊಂಕಣಿ ಮತ್ತು ಬಂಟ ಹುಡುಗಿಯರಿಗೆ ಮೊದಲ ಪ್ರಾಶಸ್ತ್ಯ. ಮಣಿಪಾಲದ ಮಣ್ಣಿನ ಗುಣದಂತೆ ಇಲ್ಲಿ ಕ್ಯಾಪಿಟೇಶನ್ ಇರುತ್ತದೆ.

ನಂತರ ಮೀಸಲಾತಿ ಬಗ್ಗೆ ಮಾತನಾಡುತ್ತಾ ಸ್ವಾಮೀಜಿಗಳು "ನಾನು ಮೀಸಲಾತಿಯ ವಿರುದ್ಧವಾಗಿರುವುದು ನಿಜ. ಕಾರಣ ಎಲ್ಲಾ ಹಿಂದೂ ದೇವಸ್ಥಾನಗಳಲ್ಲಿ ಪೂಜೆಯ ಕಾರ್ಯದಲ್ಲಿ ಸಾವಿರಾರು ವರ್ಷದಿಂದ ಬ್ರಾಹ್ಮಣರಿಗೆ ಮಾತ್ರ ಇರುವ ಮೀಸಲಾತಿಯನ್ನು ಮೊದಲು ತೆಗೆದು ಹಾಕಬೇಕು ಎಂಬುದು ನನ್ನ ಅಭಿಪ್ರಾಯ. ಭಾರತದಲ್ಲಿಂದು ಒಟ್ಟು 15 ಕೋಟಿ ಬ್ರಾಹ್ಮಣ ಜನಸಂಖ್ಯೆಯಿದ್ದು ಅದರಲ್ಲಿ ಕನಿಷ್ಠ ಐದು ಕೋಟಿ ಬ್ರಾಹ್ಮಣ ಕುಟುಂಬಿಕರ ಜೀವನ ಸುಖ ಸಮೃದ್ಧಿಯಿಂದ ಇರುವುದು ದೇವಸ್ಥಾನದ ಪೂಜೆಯ ಹಕ್ಕು ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿರುವುದರಿಂದ. ಹಾಗಾಗಿ ಈ ವೈದಿಕ ದೇವಸ್ಥಾನಗಳಲ್ಲಿಯ ಬ್ರಾಹ್ಮಣ ಮೀಸಲಾತಿ ತೆಗೆದು ಹಾಕಿ ಎಲ್ಲಾ ಜಾತಿಯವರಿಗೂ ಪೂಜೆಯ ಕಾರ್ಯ ಕೊಡಬೇಕು. ಮೊಟ್ಟ ಮೊದಲು ಸರಕಾರದ ಆಧೀನವಿರುವ ಎಲ್ಲಾ ಮುಜರಾಯಿ ದೇವಸ್ಥಾನಗಳಲ್ಲಿ ಬ್ರಾಹ್ಮಣರೊಟ್ಟಿಗೆ ಬೇರೆ ಶೂದ್ರ ಜಾತಿಯವರಿಗೂ ಪೂಜೆಯ ಕೆಲಸ ಸಮನಾಗಿ ಹಂಚಿ ಕೊಡಬೇಕು. ಬ್ರಾಹ್ಮಣರಿಗೆ ಮುಖ್ಯವಾಗಿ ದೇವಸ್ಥಾನದ ಸ್ವಚ್ಛತೆಯ ಕಾರ್ಯ ಕೊಡಬೇಕು. ದೇವರಿಗೆ ಜಗತ್ತಿನ ಎಲ್ಲಾ ಭಾಷೆ ಗೊತ್ತಿರುವುದರಿಂದ ಕೇವಲ ಸಂಸ್ಕೃತದಲ್ಲಿ ಮಂತ್ರ ಹೇಳಬೇಕೆಂಬ ನಿಯಮ ತೆಗೆದು ಹಾಕಿ ತುಳು-ಕನ್ನಡದಲ್ಲಿ ದೇವರನ್ನು ಸರಳವಾಗಿ ಸ್ತುತಿಸುವ ಬ್ರಾಹ್ಮಣೇತರ ಅರ್ಚಕರ ನೇಮಕವಾಗಬೇಕು. ಇವನ್ನೆಲ್ಲಾ ನಾನು ಪ್ರಧಾನಿ ಮೋದಿಯೊಂದಿಗೆ ಖುದ್ದಾಗಿ ಮಾತನಾಡುತ್ತೇನೆ" ಎಂದು ಸ್ವಾಮೀಜಿ ದಲಿತರಿಗೆ ವಾಗ್ದಾನ ಮಾಡಿದರು.

ಪಂಕ್ತಿ ಭೇದವನ್ನು ಸಮರ್ಥಿಸುತ್ತಾ ಸ್ವಾಮೀಜಿಯವರು ಹೇಳಿದ್ದು "ಬ್ರಾಹ್ಮಣರಿಗೆ ಪ್ರತ್ಯೇಕ ಕೋಣೆಯಲ್ಲಿ ಪ್ರತ್ಯೇಕ ಪಂಕ್ತಿಯಲ್ಲಿ ಊಟ ಹಾಕಲು ಮೂಲ ಕಾರಣ- ಬ್ರಾಹ್ಮಣರು ಭೀಕರ ಊಟ ಮಾಡುವ ಪರಿ ನೋಡಿ ಶೂದ್ರರಿಗೆ ವಾಕರಿಕೆ ಬರುತ್ತದೆ. ಸೊರ್ ಪುರ್ ಎಂದು ಶಬ್ದ ಮಾಡುತ್ತಾ ನೆರೆಯವರ ಎಲೆಗೆ ಎಂಜಲು ಸಿಡಿಸುತ್ತಾ ಮುಂಗೈವರೆಗೂ ಕೈ ನೆಕ್ಕುವ ಪರಿ ನೋಡಿ ವಿದೇಶಿಯರಿಗೆ ಮಾತ್ರವಲ್ಲ ಭಾರತೀಯ ಶೂದ್ರರಿಗೂ ಹೇಸಿಗೆಯೆನಿಸಿ ಅವರು ಊಟ ಅರ್ಧಕ್ಕೆ ಬಿಟ್ಟು ಎದ್ದು ಉಪವಾಸವಿರಬೇಕಾದ ಪ್ರಮೇಯ ಬರಬಾರದೆಂದು ಶೂದ್ರರ ಒಳಿತಿಗಾಗಿಯೇ ನಾವು ಮಠದಲ್ಲಿ ಮುಂಗೈ ನೆಕ್ಕುತ್ತಾ ಎಂಜಲು ಸಿಡಿಸುವ ಬ್ರಾಹ್ಮಣರಿಗಾಗಿ ಪ್ರತ್ಯೇಕ ಪಂಕ್ತಿ ಇಟ್ಟಿರುವುದು!"

"ಎಲ್ಲ ಮುಸ್ಲಿಮರನ್ನು ಭಯೋತ್ಪಾದಕರು ಎನ್ನುವುದೂ, ಎಲ್ಲ ದಲಿತರನ್ನು ನಕ್ಸಲೀಯರು ಎನ್ನುವುದೂ, ಹಾಗೂ ಎಲ್ಲಾ ಬುದ್ಧಿ ಜೀವಿಗಳನ್ನು ನಾಸ್ತಿಕರು ಎನ್ನುವುದೂ ಶುದ್ಧ ತಪ್ಪು! ಬುದ್ಧಿಜೀವಿಗಳೇ ಹಿಂದೂ ಧರ್ಮದ ನಿಜವಾದ ಹಿತೈಷಿಗಳು" ಎಂದು ಸ್ವಾಮೀಜಿ ಘೋಷಿಸಿದರು. ಈ ಎಲ್ಲಾ ಕಠೋರ ಸತ್ಯ ಸ್ವತಃ ಸ್ವಾಮೀಜಿಯ ಬಾಯಿಂದ ಉದುರಿದ್ದು ಕೇಳಿ ಮೋದಿಯವರಂತೆ ನನಗೂ ಮಲ ಹೊತ್ತು ಆಧ್ಯಾತ್ಮಿಕ ಆನಂದ ಪಡೆಯುವ ಉತ್ಕಟ ಆಸೆಯುಂಟಾಗಿ ಜಯ ಜಯ ಪೇಜಾವರ್ ಎಂದು ಭಜಿಸುತ್ತಾ ಮಲ ಹುಡುಕಲು ನಾನು ಮಠದ ಶೌಚಾಲಯದೆಡೆ ಧಾವಿಸಿದೆ.

ಅಷ್ಟರಲ್ಲಿ ಯಾರೋ ನನ್ನನ್ನು ಅಲ್ಲಾಡಿಸಿ ನಿದ್ದೆಯಿಂದ ಎಬ್ಬಿಸಿ "ಮಠದಲ್ಲಿ ಊಟ ರೆಡಿಯಾಗಿದೆ ನೀವು ಬ್ರಾಹ್ಮಣರಾದರೆ ಈ ಕೋಣೆಗೆ ಹೋಗಿ. ಶೂದ್ರರಾದರೆ ಆ ಕೋಣೆಗೆ ಹೋಗಿ" ಎಂದು ಹೇಳಿದ. ಇಷ್ಟೊತ್ತು ನಾನು ಕಂಡ ಕನಸ್ಸಿನಿಂದಲೇ ಹೊಟ್ಟೆ ತುಂಬಿದ್ದರಿಂದ ಆ ಕೋಣೆಯೂ ಬೇಡ ಈ ಕೋಣೆಯೂ ಬೇಡ ಎಂದು ಕಿಸೆಯಲ್ಲಿದ್ದ ನೀಲಿ ರುಮಾಲು ತಲೆಗೆ ಸುತ್ತಿಕೊಂಡು ಮನೆಯ ಕಡೆ ಹೊರಟೆ.

(ನಮ್ಮ ಅಂಕಣಕಾರ ಯೋಗೇಶ್ ಮಾಸ್ತರರ ಫೇಸ್ ಬುಕ್ಕಿನಿಂದ ಅವರ ಅನುಮತಿ ಸ್ವಲ್ಪ ನಾನು ಪಡೆಯದ್ದಕ್ಕಾಗಿ ಕ್ಷಮೆಯಿರಲಿ).

■ ಹರೀಶ್ ಎಂ.ರೈ, ಉಡುಪಿ



ಸಾವಿತ್ರಿ ಬಾ ಫುಲೆಯವರ ವಾರಸುದಾರರಿವರು
ಸಮೀರಾ ಮತ್ತು ಫೌಝಿಯಾ ಸಾಹಸಗಾ

ನಾವು ಪಾಕಿಸ್ತಾನದ ಹೆಣ್ಣುಮಕ್ಕಳ ಶಿಕ್ಷಣದ ಹಕ್ಕಿನ ಪರ ಕಾರ್ಯಕರ್ತೆ ಮಲಾಲಾ ಯೂಸುಫ್ ಝಾಯಿ ಬಗ್ಗೆ ಬಹಳಷ್ಟು ತಿಳಿದುಕೊಂಡಿದ್ದೇವೆ. ಜಗತ್ತಿನ ಅತ್ಯಂತ ಕಿರಿಯ ಪ್ರಾಂಶುಪಾಲನೆಂಬ ಖ್ಯಾತಿಯ ಪಶ್ಚಿಮ ಬಂಗಾಳದ ಬಾಬರ್ ಅಲಿಯ ಬಗ್ಗೆಯೂ ಸ್ವಲ್ಪಮಟ್ಟಿಗೆ ಓದಿಕೊಂಡಿದ್ದೇವೆ. ನಮ್ಮದೇ ಮಂಗಳೂರಿನ ನಿರಕ್ಷರ ಕುಕ್ಷಿ ಅಕ್ಷರ ಸಂತ ಹರೇಕಳ ಹಾಜಬ್ಬರ ಬಗ್ಗೆಯೂ ಅರಿತುಕೊಂಡಿದ್ದೇವೆ. ಆದರೆ ನಮ್ಮದೇ ನಾಡಿನ ಈ ಎಲ್ಲಾ ಸಾಧಕರ, ಹೋರಾಟಗಾರರ ಸಾಲಿನಲ್ಲಿ ನಿಲ್ಲುವ ಸಮೀರಾ ಮತ್ತು ಫೌಝಿಯಾ ಎಂಬ ಶಿಕ್ಷಣ ಕ್ಷೇತ್ರದ ಇಬ್ಬರು ಅಪೂರ್ವ ಸಾಧಕಿಯರ ಬಗ್ಗೆ ಕೇಳಿದವರು ಬಹು ವಿರಳ. ತಾಯಿ ಸಾವಿತ್ರಿ ಬಾಯಿ ಫುಲೆಯವರ ವಾರಸುದಾರರೆಂದೇ ಹೇಳಬಹುದಾದ ಈ ಇಬ್ಬರು ಹೆಣ್ಮಕ್ಕಳ ಸಾಹಸಗಾಥೆ ಇಲ್ಲಿದೆ.



ಎರಡು ದಶಕಗಳ ಹಿಂದೆ ಮುಸ್ಲಿಂ ಸಮುದಾಯಕ್ಕೆ ಮುಸ್ಲಿಂಮೇತರರು ಎಸೆಯುತ್ತಿದ್ದ ಪ್ರಶ್ನೆ "ನೀವ್ಯಾಕೆ ನಿಮ್ಮ ಹೆಣ್ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ..?" ಕಳೆದೊಂದು ದಶಕದಿಂದ ಮುಸ್ಲಿಂ ಸಮುದಾಯ ಎದುರಿಸುತ್ತಿರುವ ಪ್ರಶ್ನೆ "ನಿಮ್ಮ ಹೆಣ್ಮಕ್ಕಳ್ಯಾಕೆ ಬುರ್ಖಾ ಧರಿಸಿ ಕಾಲೇಜಿಗೆ ಹೋಗುವುದು...?" ಆದರೆ ಇಂದು ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾರಿ ಮುಸ್ಲಿಂ ಹೆಣ್ಮಕ್ಕಳು ಎಷ್ಟು ಮುಂದುವರಿದಿದ್ದಾರೆಂದರೆ... ಅವರೀಗ ಗ್ರಾಮೀಣ ಪ್ರದೇಶದ ಹಿಂದೂಗಳಲ್ಲಿ ಪ್ರಶ್ನಿಸತೊಡಗಿದ್ದಾರೆ "ನೀವ್ಯಾಕೆ ನಿಮ್ಮ ಹೆಣ್ಮಕ್ಕಳ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸುತ್ತೀರಿ...?" ಬುರ್ಖಾದ ಪ್ರಶ್ನೆಯನ್ನೇ ಹಂಗಾಮ ಮಾಡಿದವರಿಗೆ ಬುರ್ಖಾ ಧರಿಸಿಯೇ ಕಾಲೇಜು ಸ್ಥಾಪಿಸಿ, ಪ್ರಶ್ನೆ ಮಾಡಿದವರೇ ತಬ್ಬಿಬ್ಬಾಗುವಂತೆ ಮಾಡಿಬಿಡುವಷ್ಟರಮಟ್ಟಿಗೆ ಬ್ಯಾರಿ ಮುಸ್ಲಿಂ ಹೆಣ್ಮಕ್ಕಳು ಮುಂದುವರಿದಿದ್ದಾರೆ....!!!

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಒಂದು ಪುಟ್ಟ ಪೇಟೆ ಕಡಬ. ಸುತ್ತಮುತ್ತ ಹತ್ತಾರು ಹಳ್ಳಿಗಳಿಂದಲೇ ಆವರಿಸಿರುವ ಈ ಪ್ರದೇಶದ ಬಹುತೇಕರ ಕಸುಬು ಕೃಷಿ, ಕೃಷಿ ಕೂಲಿ ಮತ್ತು ಕೂಲಿ. ಇಂತಹ ಪ್ರದೇಶದಲ್ಲಿ ಇಂತಹದ್ದೇ ಕೌಟುಂಬಿಕ ಹಿನ್ನೆಲೆಯ ಸಮೀರಾ ಮತ್ತು ಫೌಝಿಯಾ ಎಂಬ ಇಬ್ಬರು ಯುವತಿಯರು ಅವಕಾಶ ವಂಚಿತ, ಅಂಚಿಗೆ ತಳ್ಳಲ್ಪಟ್ಟ ಬಡವರ ಮಕ್ಕಳ ಶೈಕ್ಷಣಿಕ ಅಭ್ಯುದಯಕ್ಕಾಗಿ ದುಡಿಯುತ್ತಿರುವ ಪರಿ ಅನನ್ಯವಾದುದು.

ಸಮೀರಾ ಮತ್ತು ಫೌಝಿಯಾ ಬಡತನದ ಬೆಂಕಿಯ ತಾಪಕ್ಕೆ ಕರಟಿ ಹೋಗದೇ ಅರಳಿದ ಹೂವುಗಳು. ಸಮುದಾಯದ ಕಟ್ಟುಪಾಡುಗಳೊಳಗೇ ಬೆಳೆದು ಇದೀಗ ಸಂಪ್ರದಾಯಸ್ಥರೇ ಬೆಕ್ಕಸ ಬೆರಗಾಗುವಂತೆ ಸಮಾಜದ ಬಡವರ ಶಿಕ್ಷಣದ ಹಕ್ಕುಗಳಿಗಾಗಿ ಮಿಷನ್‌ವೊಂದನ್ನು ಸ್ಥಾಪಿಸಿ ಅಕ್ಷರಾಂದೋಲನವನ್ನು ಕಟ್ಟಿ ಅಚಲ ಚಿತ್ತದಿಂದ ಮುನ್ನಡೆಯುತ್ತಿರುವವರು.

ಸಮೀರಾ ಕೆ.ಎ. ಇನ್ನೂ ಇಪ್ಪತ್ತಾರರ ಹರೆಯದ ತರುಣಿ. ಫೌಝಿಯಾ ಬಿ.ಎಸ್. ಅವರಿಗೆ ಇಪ್ಪತ್ತೇಳರ ಹರೆಯ. ಅಂದರೆ ಮದುವೆಯಾಗಿ ಗಂಡ, ಮಕ್ಕಳು ಸಂಸಾರ ಎಂದು ಬದುಕು ಕಟ್ಟಿರಬೇಕಾದ ಹರೆಯ. ಆದರೆ ಇವರು ಬದುಕು ಕಟ್ಟಿದ್ದು ಶಿಕ್ಷಣದ ಹಕ್ಕಿನ ಮಿಷನ್‌ನೊಂದಿಗೆ. ಸಮೀರಾ ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವೀಧರೆಯಾದರೆ, ಫೌಝಿಯಾ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವೀಧರೆ. ಬಡತನದ ಹಿನ್ನೆಲೆಯ ಕುಟುಂಬದ ಹೆಣ್ಮಕ್ಕಳಾದ್ದರಿಂದ ಸಹಜವಾಗಿಯೇ ಒಂದು ಗಟ್ಟಿ ಉದ್ಯೋಗ ಬಯಸಬೇಕಾಗಿತ್ತು. ಆದರೆ ಇವರು ಪ್ರಜ್ಞಾಪೂರ್ವಕವಾಗಿ ಆಯ್ದುಕೊಂಡಿದ್ದು ಅಸಹಜವಾದುದನ್ನು... ಸಾಮಾನ್ಯವಾಗಿ ಕೈ ತುಂಬಾ ಸಂಬಳ ಬರುವ ಉದ್ಯೋಗವಿದ್ದರೆ ಅದೇ ಸುಖೀ ಬದುಕು ಎಂಬ ನಂಬಿಕೆ. ಆದರೆ ಇವರು ಅವಕಾಶ ವಂಚಿತರನ್ನು, ಬಡವರನ್ನು, ಅಂಚಿಗೆ ತಳ್ಳಲ್ಪಟ್ಟವರನ್ನು ಮೇಲೆತ್ತುವುದನ್ನೇ ಸುಖೀ ಬದುಕೆಂದು ನಂಬಿದವರು.

ಕನಸು ಕಂಡ ಬಗೆ

ಕಡಬದಿಂದ ಸರಿಸುಮಾರು 100 ಕಿಲೋಮೀಟರ್ ದೂರದ ಕೊಣಾಜೆಯಲ್ಲಿ ಸ್ನಾತಕೋತ್ತರ ಪದವಿ ಓದಲು ಬರುವಾಗ ಇವರಿಬ್ಬರು ಒಬ್ಬರಿಗೊಬ್ಬರು ಪರಿಚಿತರಲ್ಲ. ಬಿ.ಸಿ.ಎಂ. ಹಾಸ್ಟೆಲ್‌ನಲ್ಲಿ ರೂಂಮೇಟ್‌ಗಳಾದುದರಿಂದ ಸಹಜವಾಗಿಯೇ ಇವರಲ್ಲಿ ಆತ್ಮೀಯತೆ ಬೆಳೆಯಿತು. ಹಾಸ್ಟೆಲ್ ರೂಮ್‌ಗಳಲ್ಲಿ ಕುಳಿತು ಇಬ್ಬರು ತರುಣಿಯರು ಏನೆಲ್ಲಾ ಚರ್ಚಿಸಬಹುದು..? ಡ್ರೆಸ್, ಆಭರಣ, ಕಾಸ್ಮೆಟಿಕ್ಸ್, ಹುಡುಗರು, ಗಾಸಿಪ್ ಇತ್ಯಾದಿ. ಇನ್ನೂ ಹೆಚ್ಚೆಂದರೆ ಮನೆ, ಅಮ್ಮ, ಅಪ್ಪ, ಅಕ್ಕ, ತಂಗಿ, ಅಣ್ಣ, ತಮ್ಮ, ತಾಪತ್ರಯ ಇತ್ಯಾದಿ. ಆದರೆ ಇವರೀರ್ವರು ಅದಕ್ಕಿಂತ ವ್ಯತಿರಿಕ್ತವಾದುದನ್ನೇ ಚರ್ಚಿಸತೊಡಗಿದರು. ನಾವು ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕು. ನಮಗೆ ಹೇಗೂ ಕಲಿಯುವ ಅವಕಾಶಗಳು ದಕ್ಕಿದೆ. ಆದರೆ ಕಲಿಕೆಯ ಕನಸು ಕಂಡರೂ ಅದನ್ನು ಸಾಕಾರಗೊಳಿಸಲಾಗದ ಅದೆಷ್ಟೋ ಅವಕಾಶ ವಂಚಿತರಿದ್ದಾರೆ. ಅವರ ಬಾಳು ಬೆಳಗುವ ಕೆಲಸ ಮಾಡಬೇಕೆಂಬ ಚರ್ಚೆಯಲ್ಲಿ ತೊಡಗಿದರು. ಆದರೆ ಕೈಯಲ್ಲಿ ಚಿಕ್ಕಾಸೂ ಇಲ್ಲದೇ ಇದೆಲ್ಲಾ ಹೇಗೆ ಸಾಧ್ಯ ಎಂದು ಯೋಚಿಸುತ್ತಿರುವವರಿಗೆ ಮಾದರಿಯಾಗಿ ಕಂಡವರು ಮಂಗಳೂರು ವಿಶ್ವವಿದ್ಯಾನಿಲಯದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಬಡವರ ಮಕ್ಕಳಿಗಾಗಿ ಶಾಲೆ ಸ್ಥಾಪಿಸಿ ಯಶಸ್ವಿಯಾದ ಬಡ ಕಿತ್ತಾಳೆ ವ್ಯಾಪಾರಿ ನಿರಕ್ಷರ ಕುಕ್ಷಿ ಅಕ್ಷರ ಸಂತ ಹರೇಕಳ ಹಾಜಬ್ಬ. ಆ ಇಪ್ಪತ್ತೊಂದು ಇಪ್ಪತ್ತೆರಡರ ಹರೆಯವೇ ಅಂತಹದ್ದು. ಹುಚ್ಚುಸಾಹಸಗಳಿಗೆ ಪ್ರೇರೇಪಿಸುವ ಕಾಲ. ಸುಮಾರು ಒಂದು ವರ್ಷದ ಚರ್ಚೆ ತಾರ್ಕಿಕ ಅಂತ್ಯ ಕಂಡದ್ದು ಕಡಬದಲ್ಲೊಂದು ಕಾಲೇಜು ಸ್ಥಾಪಿಸುವ ನಿರ್ಧಾರದೊಂದಿಗೆ...

ಕನಸನ್ನು ನನಸಾಗಿಸುವ ಹಾದಿಯಲ್ಲಿ

2012 ರಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಬಂದವರು ತಂತಮ್ಮ ಮನೆಯಲ್ಲಿ ತಮ್ಮ ನಿರ್ಧಾರವನ್ನು ಹೇಳಿದರು. ಅನಕ್ಷರಸ್ಥ ಹೆತ್ತವರು ಪೋಷಕರು ಅದೇನು ಮಾಡುತ್ತೀರೋ ಮಾಡಿ, ಒಟ್ಟಿನಲ್ಲಿ ಏನಾದರೂ ಒಳ್ಳೆಯದನ್ನು ಮಾಡಿ ಎಂದು ಹರಸಿದರು.

ಕಡಬ ಸುತ್ತಮುತ್ತಲ ಹಳ್ಳಿಗಳಿಗೆ ತೆರಳಿ ಬಡತನದ ಕಾರಣಕ್ಕೆ ಅರ್ಧದಲ್ಲೇ ಕಲಿಕೆಗೆ ವಿದಾಯ ಹೇಳಿದವರ ಮಾಹಿತಿ ಕಲೆ ಹಾಕಿದರು. ಅಂತಹವರನ್ನೆಲ್ಲಾ "ಮರಳಿ ಬಾ ಶಾಲೆಗೆ" ಎಂಬ ಘೋಷಣೆಯೊಂದಿಗೆ ಬನ್ನಿ ನಿಮಗೆಲ್ಲಾ ಕಲಿಸುತ್ತೇವೆ ಎಂಬ ಆಹ್ವಾನ ನೀಡಿದರು. ಇವರ ಈ ಹುಚ್ಚಾಟವನ್ನು ನೋಡಿ ನಕ್ಕು ಗೇಲಿ ಮಾಡಿದವರೇ ಅಧಿಕ. ಆದರೂ ಮತ್ತೆ ಮತ್ತೆ ಪ್ರಯತ್ನ ಮಾಡಿ ಏಳು ಮಂದಿ ಡ್ರಾಪ್‌ಔಟ್‌ಗಳನ್ನು ಕಲೆ ಹಾಕಿದರು. ಕಡಬ ಪೇಟೆಯ ವಾಣಿಜ್ಯ ಸಂಕೀರ್ಣವೊಂದರಲ್ಲಿ ಕೊಠಡಿಯನ್ನು ಬಾಡಿಗೆಗೆ ಪಡೆದರು. ನಯಾಪೈಸೆಯ ಶುಲ್ಕವನ್ನೂ ಪಡೆಯದೇ ಅವರಿಗೆ ಟ್ಯೂಷನ್ ನೀಡಿದರು. ಪರೀಕ್ಷೆ ಮುಗಿದು ಏಳಕ್ಕೆ ಏಳು ಮಂದಿಯೂ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ಫಲಿತಾಂಶ ನೋಡಿ ಈ ಗೆಳತಿಯರ ಸಂತೋಷಕ್ಕೆ ಪಾರವೇ ಇರಲಿಲ್ಲ. ಆ ಅವಕಾಶವಂಚಿತರ ಕಣ್ಣಲ್ಲಿ ಕಂಡ ಭರವಸೆ, ತುಟಿಯಂಚಿನಲ್ಲಿ ಜಿನುಗಿದ ನಗು ಇವರ ಮುಂದಿನ ಹೆಜ್ಜೆಗೆ ಗಟ್ಟಿ ತಳಪಾಯ ಹಾಕಿತು.

ಡ್ರಾಪ್‌ಔಟ್ ತರಗತಿಗಳನ್ನು ಮುಂದುವರಿಸುತ್ತಲೇ ಪದವಿ ಪೂರ್ವ ಮತ್ತು ಪದವಿ ಕಾಲೇಜನ್ನು ಪ್ರಾರಂಭಿಸಿದರು.

ಈ ಮಧ್ಯೆ ತಕಪಕನೇ ಬೀಡಿ ಸುರುಟುವ ಒಡತಿಯರು, ಶ್ರಮಜೀವಿಗಳು, ಆಟೋಚಾ ಮುಂತಾದ ಶಿಕ್ಷಣ ವಂಚಿತರು "ಮರಳಿಶಾಲೆ"ಗೆ ಎಸ್‌ಎಸ್‌ಎಲ್‌ಸಿ ಪಾಸು ಮಾಡಿಕೊಂಡರು. ಎಸ್‌ಎಸ್‌ಎಲ್‌ಸಿ ಪಾಸು ಮಾಡಿಕೊಂಡವರ ಇನ್ನೂರಕ್ಕೂ ಹೆಚ್ಚು. ಅವರಲ್ಲೇ ಕೆಲವರು, ಪಿ ತರಗತಿಗೂ ಪದವಿ ತರಗತಿಗೂ ದಾಖಲಾ ಎಸ್‌ಎಸ್‌ಎಲ್‌ಸಿ, ಪಿಯುಸಿ ಮುಗಿಸಿ ಇನ್ನು ಬದುಕುವ ದಾರಿ ಹುಡುಕೋಣ ಎಂಬಂತಿದ್ದ ಇವರು ಸ್ಥಾಪಿಸಿದ ಎಐಎಮ್‌ಎಸ್ (ಗುರಿಗಳು) ಕಾ ಸೇರಿದರು. ಎಐಎಮ್‌ಎಸ್ ಒಂದರ್ಥದಲ್ಲಿ ಗುರಿಗ ಇನ್ನೊಂದರ್ಥದಲ್ಲಿ 'ಎ' ಅಂದರೆ ಸಮೀರಾರ ತಂದೆ ಫೌಝಿಯಾಳ ತಾಯಿ ಆಸಿಯಮ್ಮ, 'ಎಂ' ಸಮೀರಾಳ ತಾಯಿ ಮೈಮೂನ, 'ಎಸ್' ಫೌಝಿಯಾಳ ತಂದೆ ಸುಲೈಮಾನ್.

ಡ್ರಾಪ್ ಔಟ್ ಸ್ಕೂಲ್ ನಡೆಸುತ್ತಿದ್ದ ಕಟ್ಟಡದ ಒ ಅಂತಸ್ತನ್ನು ಬಾಡಿಗೆಗೆ ಪಡೆದು ಪ್ರಾರಂಭವಾದ ಕಾಲೇ ನಾಲ್ಕು ಬ್ಯಾಚ್ ಎಸೆಸ್ಸೆಲ್ಸಿ, ಮೂರು ಬ್ಯಾಚ್ ಪಿ ಒಂದು ಬ್ಯಾಚ್ ಬಿ.ಎ, ಬಿ.ಕಾಂ ಪದವೀ ಹೊರಹೋಗಿದ್ದಾರೆ. ಪ್ರಸ್ತುತ ಇನ್ನೂರು ವಿದ್ಯಾರ್ಥಿ ಎಐಎಮ್‌ಎಸ್ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿ ಯಾವ ವಿದ್ಯಾರ್ಥಿಯಿಂದಲೂ ಪದವಿ ಪೂರ್ವ ಇಲಾಖೆ ಸೂಚಿತ ಮತ್ತು ವಿಶ್ವವಿದ್ಯಾನಿಲಯ ಸ ಶುಲ್ಕಕ್ಕಿಂತ ನಯಾಪೈಸೆಯನ್ನೂ ಹೆಚ್ಚಿಗೆ ಪಡೆಯುವ ಇವರು ಪಡೆದ ಫೀಸು ವಿಶ್ವವಿದ್ಯಾಲಯಕ್ಕೆ ಭರಿಸ ಮಾತ್ರ. ಸುಮಾರು 15,000/- ರೂಪಾಯಿ ಬಾಡಿಗೆ, ವಿದ್ಯುತ್ ಶುಲ್ಕ, ಶಿಕ್ಷಕ ಶಿಕ್ಷಕೇತರ ಸಿಬ್ಬ ವೇತನಕ್ಕಾಗಿ ಇವರು ಪ್ರತಿನಿತ್ಯವೂ ಉಳ್ಳವರ ಮನೆ, ಬಾಗಿಲಿಗೆ ಅಲೆಯುತ್ತಾರೆ. ಫೌಝಿಯಾ ಮತ್ತು ಸ ಸೇರಿದಂತೆ ಒಟ್ಟು ಹದಿನೇಳು ಮಂದಿ ಶಿಕ್ಷಕ ಶಿಕ್ಷ ಸಿಬ್ಬಂದಿಗಳಿದ್ದಾರೆ. ಪ್ರಾಂಶುಪಾಲೆ ಸಮೀರಾ, ನಿರ್ದೇಶಕಿ ಫೌಝಿಯಾ, ಸಮೀರಾಳ ತಂಗಿ ಉಪಪ್ರಾಂ ಪಾಲೆ, ಸಾಜಿದಾ ಮತ್ತು ಕಚೇರಿ ವ್ಯವಸ್ಥಾಪಕ ನರಿ ಸಂಸ್ಥೆ ಪ್ರಾರಂಭವಾದಂದಿನಿಂದ ಇಂದಿನವರೆಗೆ ಚಿ ಸಂಬಳ ಪಡೆಯದೇ ವೇತನರಹಿತವಾಗಿ ಕೆಲಸ ಮಾ ತ್ತಿದ್ದಾರೆ. ಇವರಲ್ಲಿರುವ ಎಲ್ಲಾ ಶಿಕ್ಷಕ ಶಿಕ್ಷಕೇತರ ಸಿಬ್ಬಂ ಉತ್ಸಾಹಿ ತರುಣತರುಣಿಯರು. ಅನೇಕ ಬಾರಿ ನೀಡಲು ಇವರು ಅಲ್ಲಲ್ಲಿಂದೆಲ್ಲಾ ಕೈ ಸಾಲ ಪಡೆಯು ಹಾಗಾದರೆ ಇವರು ಊಟಕ್ಕೇನು ಮಾಡುತ್ತಾರೆ ಪ್ರಶ್ನೆ ಖಂಡಿತ ಉದ್ಭವಿಸುತ್ತದೆ. ಸಮೀರಾ, ಸಾ ಫೌಝಿಯಾ ಮುಂಜಾವಿನ 5.30 ರಿಂದ ಗಂಟೆಯವರೆಗೆ ಮತ್ತು ಸಂಜೆ ಕಾಲೇಜು ತರಗ ಮುಗಿದ ಬಳಿಕ ಉಳ್ಳವರ ಮಕ್ಕಳಿಗೆ ಟ್ಯೂಷನ್ ನೀಡ ಮಹಿಳೆಯರಿಗಾಗಿ ಟೈಲರಿಂಗ್ ತರಬೇತಿ ನೀಡು ನಝೀರ್‌ನ ಕುಟುಂಬಿಕರು ಸಣ್ಣ ಕೃಷಿಕರು. ನಝೀ ಕೃಷಿಯನ್ನೇ ನಂಬಿಕೊಂಡಿದ್ದಾರೆ. ನಝೀರ್‌ನ ದಿನಬೆಳಗಾದರೆ ದಾನಿಗಳ ಭೇಟಿ, ಚಂದಾ ಎತ್ತು ಕಾಲೇಜಿನ ಇತರ ಕಚೇರಿ ಕೆಲಸಗಳ ತಿರುಗಾಡುತ್ತಿರುತ್ತಾರೆ. ಫೌಝಿಯಾ ಕೂಡಾ ನಝೀ ಸಾಥ್ ಕೊಡುತ್ತಾರೆ. ನಝೀರ್ ಈ ತಿರುಗಾ ಮನೆಯಿಂದಲೇ ಅಲ್ಪ ಸ್ವಲ್ಪ ದುಡ್ಡು ತಂದು ವ್ಯಯಿಸು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆ ಆಯಾ ಧರ್ಮದ ಧೋಣ್ಣೆನಾಯಕರ, ಮಠ, ಮ





ಗಳ ಅಧಿಕಾರಸ್ಥರ ಧರ್ಮ ವ್ಯಾಪಾರಿಗಳ ಕೈಯಲ್ಲಿ ತ್ತಿರುತ್ತವೆ ಅಥವಾ ಅಪ್ಪಟ ಬಂಡವಾಳಶಾಹಿಗಳ ರುವ ಸರಕಾಗಿವೆ. ಇವೆಲ್ಲಾ ಗುಂಪುಗಳಿಂದ ಸಮಾನ ಕಾಯ್ದುಕೊಂಡಿರುವ ಇವರ ಸಂಸ್ಥೆಯಲ್ಲಿ ಮುಸ್ಲಿಮರು, ರು, ಕ್ರೈಸ್ತರು, ಹಿಂದುಳಿದವರು ಹೀಗೆ ಎಲ್ಲಾ ಜಾತಿ, ., ಪಂಗಡಗಳ ವಿದ್ಯಾರ್ಥಿಗಳು ವ್ಯಾಸಂಗ ತ್ತಿದ್ದಾರೆ. ಈ ಸಂಸ್ಥೆಯನ್ನು ಸಂವಿಧಾನದ ಆಶಯದಂತೆ ಜಾತ್ಯತೀತವಾಗಿ ನಡೆಸುತ್ತಿದ್ದಾರೆ. ಇಲ್ಲಿನ ರ್ಥಿಗಳಲ್ಲಿ ನೂರು ಶೇಕಡಾ ಬಡವರು. ಸಂಸ್ಥೆಯ ಸ್ತಂಭಗಳಾದ ಫೌಝಿಯಾ, ಸಮೀರಾ, ಸಾಜಿದಾ, ರ್ ಇವರ್‍ಯಾರಿಗೂ ಇದೊಂದು ವ್ಯಾಪಾರವಲ್ಲ, ಂದು ಕಮಿಟ್‌ಮೆಂಟ್, ಇದೊಂದು ಮಿಷನ್. ನ್ನು ಗುರುತಿಸಿ, ಸಂಘಸಂಸ್ಥೆಗಳು ಸನ್ಮಾನಿಸಿ ನೀಡುವ ಟ್ಟ ಮೊತ್ತದ ಗೌರವಧನವನ್ನೂ ಇವರು ಸಂಸ್ಥೆಯ ಾಗಿ ವಿನಿಯೋಗಿಸುತ್ತಾರೆ.

ದ ನಾಲ್ಕು ವರ್ಷಗಳಿಂದ ಸ್ವಂತ ಕಟ್ಟಡ ನಿರ್ಮಿಸಲು ದ ಕದ ತಟ್ಟುತ್ತಿದ್ದಾರೆ. ಕಡಬದಲ್ಲೇ ಸಾವಿರಾರು ರಕಾರಿ ಜಮೀನು ಜಮೀನುದಾರರ ಸ್ವಾಧೀನದಲ್ಲಿದೆ. ಸರಕಾರ ಇವರ ಈ ಅವಕಾಶ ವಂಚಿತರ ತುವ ಕೆಲಸಕ್ಕೆ ಜಮೀನು ನೀಡಲು ಇಲ್ಲದ ನೆಪ ಕುತ್ತಿದೆ. ಆದರೂ ಛಲ ಬಿಡದೇ ಕಚೇರಿಯಿಂದ ಗೆ ಅಲೆದಾಡುತ್ತಾರೆ. ಕಾಲೆಳೆಯುವವರ ಕಿರುಕುಳವನ್ನು, ಾನಿಸುವವರ ಕೊಂಕು ಮಾತುಗಳನ್ನು ಅವುಡುಗಚ್ಚಿ ತ್ತಾರೆ. ಈ ಬ್ಯಾರಿ ಹೆಣ್ಮಕ್ಕಳ ಸಾಧನೆ ಕಂಡು ಕೋಮು ಗಳು ಕೆರಳುತ್ತಿವೆ. ಕೋಮು ಪಿಶಾಚಿಗಳ ಳವನ್ನು ಇವರು ಧೈರ್ಯದಿಂದ ಎದುರಿಸುತ್ತಾರೆ. ುವಂತ ಕಟ್ಟಡ ಮಾಲೀಕ ಸುಂದರ ಗೌಡರ ರವು ಇವರ ಸಂಸ್ಥೆಯನ್ನು ಮುನ್ನಡೆಸಲು ರಿಯಾಗಿದೆ. ಸಮಾಜದ ದೊಡ್ಡ ಮನುಷ್ಯರು, ರಸ್ಥರು ಇವರನ್ನು ಪ್ರಶಂಸಿಸಿ ಭೇಷ್ ಎನ್ನುವ ಬಾಯಿ ತೀರಿಸುತ್ತಾರೆಯೇ ಹೊರತು ಜಮೀನು ಒದಗಿಸುವ ಲ್ಲಿ ಏನೇನೂ ಸಹಕಾರ ನೀಡುತ್ತಿಲ್ಲ. ಆದಾಗ್ಯೂ ಹೃದಯವಂತರ ಆರ್ಥಿಕ ಸಹಕಾರದಿಂದ ಇವರ ್ ಅಬಾಧಿತವಾಗಿ ಮುಂದುವರಿಯುತ್ತಿದೆ.

ಂದು ವೇಳೆ ಇವರು ಈ ಉಸಾಬರಿಯೇ ಬೇಡ ಸುಮ್ಮನಾದರೆ ಅಷ್ಟೆಲ್ಲಾ ಬಡ ವಿದ್ಯಾರ್ಥಿಗಳ ಡೋಲಾಯಮಾನವಾಗಬಹುದು. ಇದಕ್ಕಿಂತ ಒಂದು ಗಿಂಜುವ ಫುಲ್‌ಟೈಮ್ ಟ್ಯುಟೋರಿಯಲ್ ದ್ದರೆ, ಒಬ್ಬೊಬ್ಬರು ಕನಿಷ್ಠ ಇಪ್ಪತ್ತು ಸಾವಿರವಾದರೂ ುವಾಗಿ ದುಡಿಯಬಹುದಿತ್ತು. ಇಂತಹ ಸವಾಲು ಲ್ಲಾ ಎದುರಿಸಿ ಎದೆಗುಂದದೇ ಮುನ್ನಡೆಯುತ್ತಿರುವ ನ್ನು ತಾಯಿ ಸಾವಿತ್ರಿ ಬಾ ಫುಲೆಯ ವಾರಸುದಾರರು ರೆ ತಪ್ಪಾಗಲಾರದೇನೋ.....?

ಣ ಪಾವತಿಸಲು ಇಚ್ಛಿಸುವವರು ಈ ಕೆಳಗಿನ ಟ್ ನಂಬರ್‌ಗೆ ಜಮಾ ಮಾಡಬೇಕೆಂದು ವಿನಂತಿ

ಎಐಎಂಎಸ್ ಎಜ್ಯುಕೇಷನ್ ಮತ್ತು
ಚಾರಿಟಬಲ್ ಟ್ರಸ್ಟ್ (ರಿ), ಕಡಬ
ವಿಜಯಾ ಬ್ಯಾಂಕ್, ಕಡಬ ಶಾಖೆ
, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ-574221
ಅಕೌಂಟ್ ನಂ: 123601011001412
IFSC Code: VIJB000 1236

■ ಇಸ್ಮತ್ ಫಜೀರ್

ತಂದೆತಾಯಿಯರೇ ಹುಷಾರು

ಚಿಕ್ಕಮಕ್ಕಳು ಅತ್ತರೂ ಚಂದ. ನಕ್ಕರೂ ಚಂದ. ಚಂಡಿ ಹಿಡಿದರೂ ಚಂದ. ಮುಖದ ಮೇಲೆ ರಪರಪಾಂತ ಬಾರಿಸಿದರೂ ಚೆನ್ನ. ಎದೆಗೆ ಒದೆದರೂ ಚಂದ. ಬೆತ್ತಲೆ ಇದ್ದರೂ ಚಂದ. ಬಟ್ಟೆ ಹಾಕಿದ್ದರೂ ಚಂದ. ಅವು ಏನು ಮಾಡಿದರೂ ಚಂದ. ಎಲ್ಲರಿಗೂ ಹಾಗೆ ಆಗುತ್ತೆ ಅಂತ ಅಲ್ಲ, ಅವರನ್ನು ಪ್ರೀತಿಸುವವರಿಗೆ ಮುದ್ದು ಮಾಡುವವರಿಗೆ ಹಾಗೆ ಆಗುವುದು ಸಹಜ. ಅಂತಹ ಮಧುರ ಕ್ಷಣಗಳನ್ನು ನೆನಪಿನಲ್ಲಿ ಇಡಬೇಕು, ತಾವು ಪಡುವ ಸಂತೋಷವನ್ನು ಇತರರೊಡನೆ ಹಂಚಿಕೊಳ್ಳಬೇಕು ಎಂದು ಕೆಲವರಿಗೆ ಅನ್ನಿಸಬಹುದು. ಅಂತಹವರು ತಮ್ಮ ಮಕ್ಕಳ ವಿವಿಧ ಭಂಗಿಗಳ ಫೋಟೋವನ್ನು ಕ್ಲಿಕ್ಕಿಸಿ ಆನಂದಿಸುತ್ತಿರುತ್ತಾರೆ. ಬೇರೆಯವರಿಗೂ ಆ ಫೋಟೋಗಳನ್ನು ತೋರಿಸಿ ಖುಷಿ ಪಡುತ್ತಾರೆ. ಮಕ್ಕಳೂ ಸಹ ತಾವು ದೊಡ್ಡವರಾದ ಮೇಲೆ ಅವನ್ನು ನೋಡಿ ಹರ್ಷ ವ್ಯಕ್ತಪಡಿಸುವುದು ಸಹಜ ಪ್ರಕ್ರಿಯೆ.

ಇಂತಹ ತಂದೆಯೊಬ್ಬ ವಿಯೆನ್ನಾದಲ್ಲಿ ಇದ್ದ. ಅವನು ತನ್ನ ಪುಟ್ಟ ಮಗುವಿನ ವಿವಿಧ ಆಕರ್ಷಕ ಭಂಗಿಗಳ ಫೋಟೋಗಳನ್ನು ತೆಗೆದಿದ್ದ. ಆಗಾಗ್ಗೆ ಅವನ್ನು ನೋಡಿ ಆನಂದತುಂದಿಲಿತನಾಗುತ್ತಿದ್ದ. ಅವನ್ನು ನೋಡಿ ಖುಷಿಪಡುವ ಭಾಗ್ಯ ತನ್ನ ಪರಿಚಿತರಿಗೂ ಇರಲಿ ಎಂಬ ಘನ ಉದ್ದೇಶದಿಂದ ಅವನ್ನು ಫೇಸ್‌ಬುಕ್‌ನಲ್ಲಿ ಹಾಕಿದ್ದ.

ಈಗ ಆ ಪುಟ್ಟ ಬಾಲೆ ಷೋಡಶಿ ಆಗಿದ್ದಳು. ವಯಸ್ಸು ಹದಿನೆಂಟು ತುಂಬಿತ್ತು. ಹದಿಹರೆಯದ ಆ ಮಗಳು ಆ ಫೋಟೋಗಳನ್ನು ನೋಡಿದಳು. ನೋಡಿ ಹೌಹಾರಿದಳು!

ಅಂತಹದ್ದೇನು ಇತ್ತು ಆ ಫೋಟೋಗಳಲ್ಲಿ?

ತನ್ನ ನಗ್ನಚಿತ್ರಗಳು!

ತಾನು ಸ್ನಾನ ಮಾಡುತ್ತಿರುವ, ಬೆತ್ತಲೆ ಮಲಗಿರುವ ಫೋಟೋಗಳಲ್ಲದೆ ಕಮೋಡಿನಲ್ಲಿ ಕುಳಿತು ಬಹಿರ್ದೆಸೆಗೆ ಹೋಗಲು ಮುಕ್ಕರಿಯುತ್ತಿರುವಂತಹ ಅಸಹ್ಯ ಫೋಟೋಗಳು ಅಲ್ಲಿದ್ದವು! ತನ್ನ ನಗ್ನದೇಹ ಕಾಮುಕರ ಕಣ್ಣಿಗೆ ಆಹಾರವಾಗುವುದನ್ನು ಊಹಿಸಿಯೇ ಅವಮಾನ ಆದಂತಾಗಿ ಉರಿದುಬಿದ್ದಳು. ತನ್ನ ದೇಹವನ್ನು ಹೀಗೆ ನಗ್ನವಾಗಿ ಪ್ರದರ್ಶಿಸುವ ಹಕ್ಕು ಯಾರಿಗೂ ಇಲ್ಲ, ತನಗೆ ಅವಮಾನ ಆಗಿದೆ ತನ್ನ ಮಾನನಷ್ಟ ಆಗಿದೆ ಎಂದು ಮಗಳು ನ್ಯಾಯಾಲಯದ ಮೆಟ್ಟಲು ಏರಿದಳು.

ತಂದೆಯ ಆಲೋಚನೆ ಬೇರೆಯದೇ ಆಗಿತ್ತು. ಆ ಫೋಟೋಗಳು ನನ್ನ ಶ್ರಮದ ಫಲ. ಅನೇಕ ಅಡೆತಡೆಗಳ ನಡುವೆಯೂ ಆ ಸುಂದರ ಫೋಟೋಗಳನ್ನು ತೆಗೆದೆ. ಪುಟ್ಟ ಮಗುವಿನ ಅವು ನನಗೆ ಮುದ ನೀಡಿತ್ತು. ಆ ಸಂತೋಷವನ್ನು ಸಮಾನ ಮನಸ್ಕರ ಜೊತೆ ಹಂಚಿಕೊಂಡೆ. ಇದರಲ್ಲಿ ಅವಮಾನ ಆಗುವುದು ಏನಿದೆ? ಮಾನನಷ್ಟ ಎಲ್ಲಿ ಆಗಿದೆ?

ಇಂತಹ ಕೇಸು ಅಲ್ಲಿ ಇದೇ ಮೊದಲಂತೆ.

ಫ್ರಾನ್ಸ್ ದೇಶದಲ್ಲಿ ಹೀಗೆ ಮಾಡುವುದು ಅಪರಾಧವಂತೆ. ಅದಕ್ಕೆ 45,000 ಯುರೋ ದಂಡವಂತೆ.

ಈ ಕೇಸಿನ ಫಲಿತಾಂಶ ಅಲ್ಲಿ ಅನೇಕರನ್ನು ತುದಿಗಾಲ ಮೇಲೆ ನಿಲ್ಲಿಸಿದೆಯಂತೆ. ಯಾಕೆಂದರೆ ಅವರೂ ಇಂತಹ ಕೃತ್ಯವನ್ನು ಎಸಗಿರುವ ತಂದೆತಾಯಿಗಳೇ ಅಂತೆ!

ಯಾವ ಹುತ್ತದಲ್ಲಿ ಯಾವ ಹಾವು ಇರುತ್ತೋ. ತಮ್ಮ ಮಕ್ಕಳ ಫೋಟೋಗಳನ್ನು ಪ್ರದರ್ಶಿಸುವ ಮೊದಲು **think twice....**



ಅಣಕ



• ಎಚ್.ಎಲ್.ಕೇಶವಮೂರ್ತಿ

ಅನುಕರಣೀಯ ತೀರ್ಪು

ಅತಿ ಪ್ರಾಚೀನ ಕಸುಬು ಅದು.

ಅದು ಇರದ ದೇಶ ಇಲ್ಲ, ಕಾಲ ಇಲ್ಲ.

ಅದಕ್ಕೆ ವಿರಾಮವೇ ಇಲ್ಲ.

ಆದಿಅಂತ್ಯವಿಲ್ಲದ ಕಾಮುಕರ ಸಾಮ್ರಾಜ್ಯ ಅದು.

ಅಪ್ರಾಪ್ತ ಬಾಲೆಯಾದರೂ ಸರಿ. ಹಣ್ಣುಹಣ್ಣು ಮುದುಕಿಯಾದರೂ ಸರಿ.

ಇದು ಕಾಮುಕರ ಪರಿ.

ಹದಿನೈದು ವರ್ಷದ ಬಾಲೆಯೊಡನೆ ನಡೆದಿತ್ತು ವಿಟಪುರುಷನ ಕಾಮದಾಟ.

ಇದು ಹೊಸದೇನೂ ಅಲ್ಲ. ಹೀಗೆ ಮಾಡಿರುವವರು ಅಸಂಖ್ಯ ಮಂದಿ.

ತಪ್ಪಿಸಿಕೊಂಡವನು ಸಭ್ಯ. ಸಿಕ್ಕಿಕೊಂಡವನು ಪಾಪಿ.

ಪಾಪಿ ಗುಂಪಿನ ಸದಸ್ಯ ಅವನಾಗಿದ್ದ.

ಪೊಲೀಸರಿಗೆ ಸಿಕ್ಕಿಬಿದ್ದ.

ನ್ಯಾಯಾಲಯ ಹೊಕ್ಕಿತು ಕೇಸು.

ನ್ಯಾಯಾಧೀಶರು ವಿಚಾರಣೆ ಆರಂಭಿಸಿದರು. ಹಾಗೆಯೇ ಅಪರಾಧಿಗಳನ್ನು ಪರಿಶೀಲಿಸಿದರು. ಗಡವ ವಿಟ. ಎಳೆಯ ಬಾಲೆ. ಮನಸ್ಸು ಚುರುಕ್ ಎಂದಿರಬೇಕು. ಅಂತಹ ಮನಸ್ಥಿತಿಯಲ್ಲಿಯೇ ತೀರ್ಪು ನೀಡಿದರು.

ವಿಟಪುರುಷನಿಗೆ ಎರಡು ವರ್ಷ ಜೈಲುಶಿಕ್ಷೆ.

ಬಾಲೆಗೆ?

ಶಿಕ್ಷೆ ಇಲ್ಲ, ವಿಟಪುರುಷ ಮುಗ್ಧ ಬಾಲಕಿಗೆ ಮೂವತ್ತು ಪುಸ್ತಕಗಳ ಉಡುಗೊರೆ ನೀಡಬೇಕು!

ಯಾವುದಾದರೂ ಪುಸ್ತಕ ನೀಡಬಹುದೆ?

ಕಸುಬಿಗೆ ಇಂಬು ನೀಡುವ ಪುಸ್ತಕಗಳು ಇದೆಯಲ್ಲ. ಅದನ್ನು ಕೊಡಬಹುದೆ?

ಇಲ್ಲ, ಯಾವ ಪುಸ್ತಕಗಳನ್ನು ನೀಡಬೇಕು ಎಂಬುದನ್ನೂ ನ್ಯಾಯಾಲಯವೇ ನಿರ್ಧರಿಸಿತ್ತು, ಅವು

1. ಡೈರಿ ಆಫ್ ಅನ್ನೆ ಫ್ರಾಂಕ್
2. ವರ್ಜೀನಿಯಾ ವುಲ್ಫ್ ಅವರ ಕಾದಂಬರಿಗಳು
3. ಎಮಿಲಿ ಡಿಕನ್‌ಸನ್ ಅವರ ಕವನ ಸಂಗ್ರಹಗಳು

ಅಪರೂಪ ಎನ್ನುವಂತಹ ಇಂತಹ ತೀರ್ಪು ನೀಡಲು ಏನು ಕಾರಣ?

14-15 ವರ್ಷಗಳ ಮುಗ್ಧ ಬಾಲಕಿಯರು ಈ ದಂಧೆಗೆ ಇಳಿಯುತ್ತಿರುವುದು ನ್ಯಾಯಾಧೀಶರ ಗಮನಕ್ಕೆ ಬಂದಿದೆ.

ಅವರು ಯಾಕೆ ಈ ಆತ್ಮನಾಶದ ದಂಧೆಗೆ ಬರುತ್ತಾರೆ ಎಂದರೆ ಆಸೆ. ಆ ವಯಸ್ಸಿನ ಮಕ್ಕಳಿಗೆ ಇರುವ ಸಹಜ ಆಸೆ. ಬಯಸಿದ ತಿಂಡಿ ತಿನ್ನುವ ಆಸೆ. ವೈಭವೋಪೇತ ಹೋಟೆಲುಗಳಿಗೆ ಹೋಗುವ ಆಸೆ. ಆಕರ್ಷಕ ಬಟ್ಟೆ ತೊಡುವ ಆಸೆ. ಇತ್ತೀಚಿನ ಮಾಡೆಲ್‌ನ ಮೊಬೈಲ್ ಕೊಳ್ಳುವ ಆಸೆ. ಇಂತಹ ಪುಟ್ಟಪುಟ್ಟ ಆಸೆಗಳು. ಇವುಗಳನ್ನು ಪೂರೈಸಿಕೊಳ್ಳಲು ಹಣ ಬೇಕು. ಹಣ ಮಾಡುವ ಸುಲಭ ಮಾರ್ಗ ಇದಾಗಿತ್ತು! ಘನತೆ ಗೌರವದ ಜೀವನದ ಮಹತ್ವ ಅವರಿಗೆ ತಿಳಿದಿರಲಿಲ್ಲ, ಸಂತೋಷ ಇರುವುದು ತೊಡುವ ಬಟ್ಟೆ, ಬಳಸುವ ಮೊಬೈಲಿನಲ್ಲಿ ಅಲ್ಲ ಗೌರವಯುತ ಬದುಕಿನಲ್ಲಿ ಎಂಬುದರ ಅರಿವು ಮೂಡಿಸಲು ಪುಸ್ತಕಗಳ ಕೊಡುಗೆ.

ವಿಟಪುರುಷ ಪುಸ್ತಕಗಳನ್ನು ಕೊಡಿಸಲೇಬೇಕು. ಇದು ನ್ಯಾಯಾಲಯದ ಆಜ್ಞೆ. ಕೊಡಿಸುತ್ತಾನೆ. ಆದರೆ ಅವುಗಳನ್ನು ಓದಿ ಅರ್ಥೈಸಿಕೊಳ್ಳುವ ವ್ಯವಧಾನ ಆ ಬಾಲೆಗೆ ಇರಬೇಕಲ್ಲಾ... ಹೇಗಾದರೂ ಇರಲಿ ಶಿಕ್ಷೆ ಇರುವುದು ಬದುಕಿನ ಪರಿವರ್ತನೆಗೆ. ನ್ಯಾಯಾಲಯ ತೀರ್ಪು ಅದಕ್ಕೆ ಪೂರಕ ಆಗಿದೆ. ನ್ಯಾಯಾಧೀಶರ ಇಂತಹ ನಿಲುವು ಪ್ರಶಂಸನೀಯ.

ಇದು ಪವಾಡ!

ಬೆಳಕು ಬರಲಿ ಎಂದು ದೇವರು ಹೇಳಿದ
ಬೆಳಕು ಮೂಡಿತು
ನೀರು ಬರಲಿ ಎಂದಿತು ಸುಪ್ರೀಂಕೋರ್ಟು
ನೀರು ಉಕ್ಕಿ ಉಕ್ಕಿ ಹರಿಯಿತು
ಹಿಂದುತ್ವ ಎಂದರೆ ಜೀವನ ವಿಧಾನ ಎಂದರು ಜಡ್ಜು
ಹಿಂದೂಗಳೆಲ್ಲರ ಬದುಕಿನ ರೀತಿ ಒಂದೇ ಆಯಿತು
ಗೋವು ಪವಿತ್ರ ಎಂದ ವೈದಿಕ
ಪವಿತ್ರ ಆಯಿತು ಗೋವು
ಪಂಚಗವ್ಯ ಹಚ್ಚಿದರೆ ಮುಖ ಕಾಂತಿ ಎಂದ ವಿಜ್ಞಾನಿ
ಹಚ್ಚಿದವರು ಹೊಳೆದರು ಮಿರಮಿರ
ಗೋಮೂತ್ರದಲ್ಲಿ ಚಿನ್ನ ಎಂದ ಸಂಶೋಧಕ
ಗೋಮೂತ್ರ ಬಿದ್ದಲ್ಲೆಲ್ಲ ಚಿನ್ನ ಕಾಣಿಸಿತು. ■

◀◀ ಟಿಪ್ಪು ಸುಲ್ತಾನ

3. ಟೀಪು ಸುಲ್ತಾನನ ಹೆಸರಿನಲ್ಲಿ ರಾಯಭಾರಿಗಳು ಟ್ ಈಸ್ಟ್ ಇಂಡಿಯಾ ಕಂಪನಿ"ಯ ಮೇಲೆ ದ್ಧವನ್ನಾರಂಭಿಸಲು ಎಲ್ಲ ಸಿದ್ಧತೆಗಳೂ ಆಗಿವೆ. ಂದ ಸೈನ್ಯ ಸಹಾಯಕ್ಕಾಗಿ ಸುಲ್ತಾನರು ಕಾದಿದ್ದಾರೆ. ಹಾಯ ಬಂದ ಕೂಡಲೆ ಕಂಪನಿಯವರ ಮೇಲೆ ದ್ಧ ಘೋಷಣೆ ಮಾಡುತ್ತಾರೆ. ಬ್ರಿಟಿಷ್ ಜನಾಂಗವನ್ನು ದಲ್ಲಿ ಓಡಿಸುವುದೇ ಇದರ ಉದ್ದೇಶ" ಎಂಬುದಾಗಿ ಜನಿಕವಾಗಿ ಸಾರಿದರು.

4. ಫ್ರೆಂಚರಿಂದ ಮಿತಿಮೀರಿದ ಸೈನ್ಯ ಸಹಾಯವನ್ನು ಭಾರಿಗಳು ಅಪೇಕ್ಷಿಸಿದರು. ಫ್ರಾನ್ಸ್ ದ್ವೀಪದಲ್ಲೇ ರನ್ನು ಕೂಡಿಸಿದರು. ಭಾರತದಲ್ಲಿನ ಬ್ರಿಟಿಷ್ ಗವನ್ನು ಓಡಿಸಲು ತಕ್ಷಣ ಸಂಗ್ರಾಮವನ್ನಾರಂಭ ದೇ ಇದರ ಉದ್ದೇಶ.

5. ಈ ಸೈನ್ಯ ಟೀಪುವಿನ ರಾಜ್ಯದಲ್ಲಿ ಪ್ರತ್ಯಕ್ಷವಾಗಿ ಯಿತು. ಆ ಸೈನ್ಯವನ್ನು ಸಾರ್ವಜನಿಕವಾಗಿ ಕರಿಸಿ, ಪ್ರಶಂಸಿಸಲಾಯಿತು. ರಾಯಭಾರಿಗಳಿಗೆ ರ್ ಮರ್ಯಾದೆಯ ಸ್ವಾಗತ ನೀಡಿದ್ದಾಯಿತು.

6. ರಾಯಭಾರಿಗಳು ಗವರ್ನರ್ ಮಾಲಾರ್ಟಿಕ್‌ನೊಂದಿಗೆ ಮಾಡಿಕೊಂಡ ಕರಾರಿನ ಷರತ್ತುಗಳಿಗೆಲ್ಲ ಟೀಪು ಸುಲ್ತಾನ ಒಪ್ಪಿಗೆ ಕೊಟ್ಟು, ಅವುಗಳನ್ನಂಗೀಕರಿಸಿದ. ಫ್ರೆಂಚ್ ದ್ವೀಪದ ಗವರ್ನರ್ ಹೊರಡಿಸಿದ ಪ್ರಕಟಣೆಯೊಳಗಿನ ಎಲ್ಲ ಅಂಶಗಳಿಗೂ ಒಪ್ಪಿಗೆ ಕೊಟ್ಟ. ಅವುಗಳನ್ನಾಚರಣೆಗೆ ತರಲಾರಂಭಿಸಿದ.

7. ಈ ಒಪ್ಪಂದದಿಂದ ಸುಲ್ತಾನನಿಗೆ ಫ್ರೆಂಚರಿಂದ ಸಿಕ್ಕಿದ ಸೈನ್ಯ ಬಲವಷ್ಟರಲ್ಲೇ ಇದೆ. ಆದರೆ ಒಪ್ಪಂದದ ಹಿಂದಿನ ಮನೋಧರ್ಮ ನೋಡಬೇಕು. ಫ್ರೆಂಚರಿಂದ ಅಮಿತ ಸೈನ್ಯ ಬಲವನ್ನು ಸುಲ್ತಾನನು ಅಪೇಕ್ಷಿಸಿದನೆಂಬುದನ್ನು ಗಮನಿಸಬೇಕು. ಈ ಸೈನ್ಯ ಸಹಾಯವನ್ನು ಅವನು ಅಪೇಕ್ಷಿಸಿದ್ದಾದರೂ ಯಾತಕ್ಕೆ- ಭಾರತದಲ್ಲಿ ಕಂಪೆನಿಯ (ಬ್ರಿಟಿಷರ) ಮೇಲೆ ಸಂಗ್ರಾಮ ಹೂಡಲಿಕ್ಕೆ.

12.8.1798ನೆಯ ದಿನ ಗವರ್ನರ್ ಜನರಲ್‌ರವರು ಈ ರೀತಿ ಟೀಪುವಿನ ಮೇಲೆ ಏಳು ಆಪಾದನೆಗಳನ್ನು ಹೊರಿಸಿ, "ಟೀಪುವಿನ ನಡತೆಯು ಅಂತರ್‌ರಾಷ್ಟ್ರೀಯ ನೀತಿನಿಯಮಗಳಿಗೆ ವಿರುದ್ಧ"ವೆಂದು ಹೇಳಿದರು. ಅವರು ಹೀಗೆ ಹೇಳುವ ವೇಳೆಗೆ ಭಾರತದಲ್ಲೇ ಬ್ರಿಟಿಷರು ಇತರ ಪ್ರಭುತ್ವಗಳೊಂದಿಗೆ ಮಾಡಿಕೊಂಡ ಕರಾರುಗಳ ವಿಧಿಗಳನ್ನು ಎಷ್ಟೋ ಸಾರಿ ಉಲ್ಲಂಘಿಸಿದ್ದರು. ಅಷ್ಟೇಕೆ ಹೈದರನೊಂದಿಗೆ ಬ್ರಿಟಿಷರು ಮಾಡಿಕೊಂಡ ಕರಾರನ್ನು ಎಷ್ಟುಮಟ್ಟಿಗೆ ಪಾಲಿಸಿದರು? ಇದಕ್ಕೆ ಉತ್ತರವಿಲ್ಲ.

"ತನಗೂ ಕಂಪೆನಿಗೂ ಆದ ಕರಾರುಗಳನ್ನು, ಶಾಂತಿ ಮತ್ತು ಸ್ನೇಹ ಕರಾರುಗಳನ್ನು ಟೀಪು ಸುಲ್ತಾನ ಉಲ್ಲಂಘಿಸಿದ್ದಾನೆ. ಹೀಗೆ ಉಲ್ಲಂಘಿಸಿ ಇಂಡಿಯ ದೇಶದ ಬ್ರಿಟಿಷ್ ತುರ್ಕಿ, ಯುರೋಪುಗಳಿಗೆ ರಾಯಭಾರಗಳನ್ನು ಕಳುಹಿಸುವಾಗ ರಾಜಕಾರಣವೊಂದೇ ಅವನ ಉದ್ದಿಶ್ಯವಾಗಿರಲಿಲ್ಲ.

"ಮುಸ್ಲಿಮರ ರಾಜಕೀಯ ಪ್ರಭಾವ ಪತನಕ್ಕೆ ಅವರು ವ್ಯಾಪಾರ-ಕೈಗಾರಿಕೆಗಳನ್ನು ಉದಾಸೀನ ಮಾಡಿದ್ದೇ ಕಾರಣ್ಣ. ಇವೆರಡಕ್ಕೂ ಹೆಚ್ಚು ಲಕ್ಷ ಕೊಟ್ಟಿದ್ದೇ ಐರೋಪ್ಯರ ರಾಜಕೀಯ ಔನ್ನತ್ಯಕ್ಕೆ ಕಾರಣ. ಮತ್ತು ಮುಸ್ಲಿಮ ರಾಜ್ಯಗಳನ್ನವರು ತುಳಿಯಲಿಕ್ಕೆ ಕಾರಣ" ಎಂಬುದಾಗಿ ತರ್ಕ ಮಾಡಿ, ತನ್ನ ರಾಯಭಾರಿಗಳಿಗೆಲ್ಲ "ನೀವು ಹೋದ ರಾಜ್ಯಗಳಲ್ಲೆಲ್ಲ ಅರಸಿ ನೋಡಿ, ತಾಂತ್ರಿಕ ನಿಪುಣರನ್ನು ಕರೆತನ್ನಿ. ಒಳ್ಳೆ ಕಲಾವಿದರನ್ನು ಕರೆತನ್ನಿ" ರೆಂದು ಅವರಿಗೆ ಸೂಚನೆ ನೀಡುತ್ತಿದ್ದ.

ಟೀಪುವಿನ ಪರಮ ವೈರಿಗಳಾದ ಆಂಗ್ಲರ ಕಣ್ಣುಗಳಿಂದ ನೋಡದೆ, ಆಂಗ್ಲೋ-ಇಂಡಿಯನ್ ಚರಿತ್ರಕಾರರ ಕಣ್ಣುಗಳಿಂದ ನೋಡದೆ, ದೇವರು ನಮಗೆ ಅನುಗ್ರಹ ಮಾಡಿದ ನಮ್ಮ ಕಣ್ಣುಗಳಿಂದಲೇ ನಾವು ಟೀಪುವನ್ನು ನೋಡಿದಾಗ "ಇವನೆಂತಹ ಮಹಾವೀರ! ಇವನೆಂತಹ ದೇಶಭಕ್ತ!" ಅನ್ನಿಸದೆ ಇರದು. ಅವನ ದೇಶಭಕ್ತಿಯನ್ನು ಅಳೆಯಲು ಒಂದು 'ಮಾನದಂಡ ಉಂಟೆ' ಅನ್ನಿಸುತ್ತದೆ. ಈ ಸನ್ನಿವೇಶವನ್ನು ಕುರಿತು ಆಲೋಚನೆ ಮಾಡಿದಾಗ.

ಹೈದರಾಬಾದ್ ನಿಜಾಮನು ತನ್ನ ವಕೀಲರು ಕೆಲವರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿದ. ಉಭಯ ರಾಜಮನೆತನಗಳನ್ನು ವಿವಾಹ ಬಾಂಧವ್ಯಗಳಿಂದ ಸಮೀಪಕ್ಕೆ ತಂದು, ಸ್ನೇಹವನ್ನು ಭದ್ರಗೊಳಿಸಬೇಕೆಂಬುದೇ ಈ ಪ್ರಯತ್ನದ ಪರಮೋದ್ದಿಶ್ಯವಾಗಿತ್ತು. ನಿಜಾಮನ ವಕೀಲರು ತಮ್ಮೊಡೆಯನ ಮನೋಗತವನ್ನು ತಿಳಿಸಿದರು. ಟೀಪುವಾದರೋ

"ನಿಜಾಮರ ಮಗನಿಗೆ ನನ್ನ ಮಗಳನ್ನು ಕೊಟ್ಟು ವಿವಾಹ ಮಾಡಬೇಕೆಂಬ ಸೂಚನೆಗೆ ನಾನು ಕಿವಿಗೊಡಲು ಸಿದ್ಧನಾಗಿಲ್ಲ, ಆಂಗ್ಲರೊಂದಿಗೆ ಕರಾರು ಮಾಡಿಕೊಳ್ಳಲು ಸಂಧಾನ ನಡೆಸುವಂತಹ ಅರಸನೊಂದಿಗೆ ವಿವಾಹ ಬಾಂಧವ್ಯ ಸಲ್ಲದು." ಎಂಬುದಾಗಿ ಉತ್ತರಕೊಟ್ಟ!!

"ಭಾರತದ ಪರಮ ವೈರಿಗಳೊಂದಿಗೆ ಸ್ನೇಹವೇ?"- ಇದು ಮಾನಧನ, ಅಭಿಮಾನಧನ, ದೇಶಭಕ್ತ ಟೀಪುವಿನ ಪಣ.

(ಜನವಾಣಿ 5.8.1962)

ಏಕರೂಪದ ನಾಗರಿಕ ಸಂಹಿತೆಗಾಗಿ ಎದ್ದಿರುವ ಕೂಗಿನ ಹಿಂ

ಹಿಂದುಸ್ತಾನದಲ್ಲಿರುವ ವಿದೇಶೀ ಜನಾಂಗಗಳು (ಅರ್ಥಾತ್ ಕ್ರೈಸ್ತರು ಮತ್ತು ಮುಸ್ಲಿಮರು) ಒಂದೋ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಳವಡಿಸಿಕೊಳ್ಳಬೇಕು. ಹಿಂದೂ ಧರ್ಮಕ್ಕೆ ಗೌರವ ತೋರಿಸಿ ಅದನ್ನು ಭಯಭಕ್ತಿಯಿಂದ ಕಾಣಬೇಕು. ಹಿಂದೂ ಜನಾಂಗವನ್ನು ಹಾಗೂ ಹಿಂದೂ ರಾಷ್ಟ್ರದ ಸಂಸ್ಕೃತಿಯನ್ನು ವೈಭವೀಕರಿಸುವುದರ ಹೊರತು ಬೇರಾವ ವಿಷಯವನ್ನೂ ಮನದೊಳಕ್ಕೆ ಬಿಟ್ಟುಕೊಳ್ಳಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ ಹಿಂದೂ ಜನಾಂಗದೊಳಕ್ಕೆ ಸೇರಿಕೊಳ್ಳ ಬೇಕು. ಇಲ್ಲಾ ಯಾವುದಕ್ಕೂ ಆಗ್ರಹಿಸದೆ, ಯಾವುದೇ ಸವಲತ್ತುಗಳಿಗೂ, ವಿಶೇಷ ಸೌಕರ್ಯಗಳಿಗೂ ಅರ್ಹರಾಗದೆ, ನಾಗರಿಕ ಹಕ್ಕುಗಳನ್ನು ಸಮೇತ ಕೇಳದೆ ಹಿಂದೂ ರಾಷ್ಟ್ರಕ್ಕೆ ಪೂರ್ತಿ ಅಧೀನರಾಗಿ ದೇಶದೊಳಗಿರಬಹುದು.....

– ಎಂ.ಎಸ್.ಗೋಲ್ವಾಲ್ಕರ್

ಇಂದಿನ ದಿನಗಳಲ್ಲಿ ಎಚ್ಚೆತ್ತುಕೊಂಡ ಮುಸ್ಲಿಂ ಮಹಿಳೆಯರು ತಮ್ಮ ಸಮುದಾಯದಲ್ಲಿರುವ ಕೆಲವೊಂದು ಅನಾರೋಗ್ಯಕರ ಪದ್ಧತಿಗಳ ವಿರುದ್ಧ ಧ್ವನಿ ಎತ್ತುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ. ಇದು ಸುಧಾರಣೆಗಳ ಕೂಗು ಆಯಾ ಸಮುದಾಯ ಅಥವಾ ಗುಂಪಿನ ಒಳಗಿನಿಂದಲೆ ಹುಟ್ಟಿಕೊಳ್ಳುವುದು ಸೂಕ್ತವೆಂಬ ಅನುಭವಜನ್ಯ ಮಾತಿಗೆ ಅನುಗುಣವಾಗಿಯೂ ಇದೆ. ಹೀಗೆ ವೈಯಕ್ತಿಕ ಕಾನೂನುಗಳ ವ್ಯವಸ್ಥಿತ ಕ್ರೋಢೀಕರಣಕ್ಕಾಗಿ ಒತ್ತಾಯಗಳು ಕೇಳಿಬರುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಎಲ್ಲಿ ನೋಡಿದರೂ ತ್ರಿವಳಿ ತಲಾಖ್, ಬಹುವಿವಾಹ ಮತ್ತು ಏಕರೂಪದ ನಾಗರಿಕ ಸಂಹಿತೆಗಳ ಬಗ್ಗೆ ಚರ್ಚೆಗಳೇ ಚರ್ಚೆಗಳು. ಆದರೆ ಈ ವಿಷಯಗಳ ಬಗ್ಗೆ ಮಿಕ್ಕೆಲ್ಲ ಕಡೆಗಳಿಗಿಂತ ಹೆಚ್ಚು ಆವಾಜ್ ಕೇಳಿಬರುತ್ತಿರುವುದು ಸಂಘಿಗಳ ವಲಯದಿಂದ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಈ ಹೊತ್ತು ಸುಪ್ರೀಂ ಕೋರ್ಟಿನ ಮುಂದೆ ತ್ರಿವಳಿ ತಲಾಖ್ ಮತ್ತು ಬಹುವಿವಾಹ ಪದ್ಧತಿ ಕುರಿತು ಹಲವಾರು ಅರ್ಜಿಗಳಿವೆಯಾದರೂ ಏಕರೂಪದ ನಾಗರಿಕ ಸಂಹಿತೆ ಬಗ್ಗೆ ಒಂದಾದರೂ ಅರ್ಜಿ ಇಲ್ಲ. ಆದರೆ ಸಂಘ ಪರಿವಾರದ ಮಸಲತ್ತು ನೋಡಿ. ಅದಿಂದು ತ್ರಿವಳಿ ತಲಾಖ್ ಬಗ್ಗೆ ಮೊಸಳೆಕಣ್ಣೀರು ಸುರಿಸುತ್ತ ಮುಸ್ಲಿಂ ಮಹಿಳೆಯರು ಏಕರೂಪದ ನಾಗರಿಕ ಸಂಹಿತೆಗೋಸ್ಕರ ಆಗ್ರಹಿಸುತ್ತಿದ್ದಾರೆಂದು ಅಪಪ್ರಚಾರ ನಡೆಸುತ್ತಿದೆ. ಏಕರೂಪದ ನಾಗರಿಕ ಸಂಹಿತೆ ಜಾರಿಯಾದಲ್ಲಿ ಎಲ್ಲವೂ ನೆಟ್ಟಗಾಗಲಿದೆ, ಮಹಿಳೆಯರ ಹಕ್ಕುಗಳು ಸುರಕ್ಷಿತವಾಗಲಿವೆ ಎನ್ನುತ್ತಿದೆ. ಅತ್ತ ಮೋದಿ ಸರ್ಕಾರವೂ ಇಂತಹ ಸಂಹಿತೆ ಮೂಲಕ ರಾಷ್ಟ್ರೀಯ ಐಕ್ಯತೆ ಸಾಧಿಸಬಹುದೆಂದು ವಾದಿಸುತ್ತಿದೆ. ಇಲ್ಲಿ ವ್ಯಂಗ್ಯ ಏನೆಂದರೆ ಇದೇ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ತಾನೇ ಖುದ್ದಾಗಿ ಅಥವಾ ತನ್ನ ಪರಿವಾರದ ನೂರಾರು ಉಪಸಂಘಟನೆಗಳು ಹಾಗೂ ಕಾಲಾಳು ಪಡೆಗಳ ಮೂಲಕ ಸಮಾಜವನ್ನು ಕೋಮು ಆಧಾರದಲ್ಲಿ ಧ್ರುವೀಕರಿಸಿ ಐಕ್ಯತೆಯನ್ನು ಒಡೆಯುವ ಕೆಲಸವನ್ನೆ ಮಾಡುತ್ತ ಬಂದಿದೆ. ತಾನೊಬ್ಬ ಮಹಾಜ್ಞಾನಿ ಎಂದು ಭಾವಿಸಿದಂತಿರುವ ಅರುಣ್ ಜೇಟ್ಲಿ, ಧರ್ಮ ವೈಯಕ್ತಿಕ ಹಕ್ಕುಗಳನ್ನು ವಿಧಿಸಕೂಡದು ಎಂದು ಉಪದೇಶ ನೀಡುತ್ತಾನೆ. ಆದರೆ ತನ್ನ ಸಂಘಿಗಳು ಧರ್ಮದ ಹೆಸರಲ್ಲಿ ಎಗ್ಗಿಲ್ಲದೆ ನಡೆಸುತ್ತಿರುವ ಅಸಂಖ್ಯಾತ ಗಲಭೆ, ಹತ್ಯೆ ದಲಿತ ಹಾಗೂ ಮಹಿಳಾ ಹಕ್ಕುಗಳ ದಮನ ಇತ್ಯಾದಿ ಪುಂಡಾಟಿಕೆಗಳ ಬಗ್ಗೆ ಜಾಣ ಕುರುಡು ನಟಿಸುತ್ತಾನೆ. ಚುನಾವಣಾ ಕಾಲದಲ್ಲಿ ತನಗೊಬ್ಬ ಪತ್ನಿ ಇರುವುದನ್ನೆ ಮರೆತಿದ್ದಲ್ಲದೆ ಈಗಲೂ ಆಕೆಯ ಹಕ್ಕುಗಳನ್ನು ಕಡೆಗಣಿಸಿರುವ ನರೇಂದ್ರ ಮೋದಿ ಕೂಡಾ ಈಗ ಮುಸ್ಲಿಂ ಮಹಿಳೆಯರ ಹಕ್ಕುಗಳ ಬಗ್ಗೆ ಭಾರಿ ಕಾಳಜಿಯುಳ್ಳವನಂತೆ ತೋರಿಸಿಕೊಳ್ಳುತ್ತಿದ್ದಾನೆ! ಇವರನ್ನೆಲ್ಲ ನೋಡಿದಾಗ ಭೂತ, ಭಗವದ್ಗೀತೆಗಳ ನೆನಪಾಗುತ್ತದೆ. ಹೀಗೆ ಇಡೀ ಸಂಘ ಪರಿವಾರ ಇಂದು ತ್ರಿವಳಿ ತಲಾಖ್‌ಗೆ ಸಂಬಂಧಪಡದ ಏಕರೂಪದ ನಾಗರಿಕ ಸಂಹಿತೆಯ ವಿಚಾರವನ್ನು ಹರಿಯಬಿಟ್ಟಿರುವುದರ ತಕ್ಷಣದ ಉದ್ದೇಶ ಸಮುದಾಯಗಳ ನಡುವೆ ಒಡಕು ಮೂಡಿಸಿ ಚುನಾವಣಾ ಲಾಭ ಪಡೆದುಕೊಳ್ಳುವುದಾಗಿದೆ. ಆದರೆ ಇದರ ಹಿಂದೆ ಒಂದು ದೂರಗಾಮಿ ಉದ್ದೇಶವೂ ಅಡಗಿದೆ. ಅದೇನೆಂದರೆ ಆರೆಸ್ಸೆಸ್‌ನ ಹಿಂದೂ ರಾಷ್ಟ್ರ ಸ್ಥಾಪನೆಯ ಅಜೆಂಡಾದ ಒಂದು ಪ್ರಮುಖಾಂಶವಾಗಿರುವ ಅಲ್ಪಸಂಖ್ಯಾತರ ದಮನಕ್ಕಾಗಿ ಗುರು ಗೋಲ್ವಾಲ್ಕರ್ ಸೂಚಿಸಿದ ಮಾರ್ಗೋಪಾಯಗಳನ್ನು ಕಾರ್ಯರೂಪಕ್ಕೆ ತರಲೆತ್ನಿಸುವುದು.

"ರಾಷ್ಟ್ರೀಯ ಆಗಿರುವ ಹಿಂದೂ ಜನಾಂಗ, ಧರ್ಮ, ಸಂಸ್ಕೃತಿ ಹಾಗೂ ಭಾಷೆಗೆ ಸೇರದವರೆಲ್ಲ ಸಹಜವಾಗಿ ನೈಜ 'ರಾಷ್ಟ್ರೀಯ' ಜೀವನದ ಪರಿಧಿಯಿಂದ ಹೊರಗಿರುತ್ತಾರೆ....... ಯಾರು ಹಿಂದೂ ಜನಾಂಗವನ್ನು ಹಾಗೂ ಹಿಂದೂ ರಾಷ್ಟ್ರವನ್ನು ಕೊಂಡಾಡಿ, ಅವುಗಳನ್ನು ತಮ್ಮ ಹೃದಯಕ್ಕೆ ಸಮೀಪವಾಗಿರಿಸುವ ಹೆಬ್ಬಯಕೆಯೊಂದಿಗೆ ಚಟುವಟಿಕೆಯಲ್ಲಿ ತೊಡಗಲು ಪ್ರೇರೇಪಿತರಾಗಿ, ಗುರಿಸಾಧನೆಗಾಗಿ ದುಡಿಯುತ್ತಾರೋ ಅವರು ಮಾತ್ರ ರಾಷ್ಟ್ರೀಯವಾದಿ ದೇಶಭಕ್ತರು. ಮಿಕ್ಕವರೆಲ್ಲರೂ ಒಂದೋ ದೇಶದ್ರೋಹಿಗಳು ಮತ್ತು ರಾಷ್ಟ್ರೀಯ ಧ್ಯೇಯೋದ್ದೇಶದ ಶತ್ರುಗಳು ಅಥವಾ ಒಂದಿಷ್ಟು ಉದಾರತೆಯಿಂದ ಕರೆಯುವುದಾದರೆ, ಮೂರ್ಖರು....... ಹಿಂದುಸ್ತಾನದಲ್ಲಿರುವ ವಿದೇಶೀ ಜನಾಂಗಗಳು (ಅರ್ಥಾತ್ ಕ್ರೈಸ್ತರು ಮತ್ತು ಮುಸ್ಲಿಮರು) ಒಂದೋ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಳವಡಿಸಿಕೊಳ್ಳಬೇಕು, ಹಿಂದೂ ಧರ್ಮಕ್ಕೆ ಗೌರವ ತೋರಿಸಿ ಅದನ್ನು ಭಯಭಕ್ತಿಯಿಂದ ಕಾಣಬೇಕು, ಹಿಂದೂ ಜನಾಂಗವನ್ನು ಹಾಗೂ ಹಿಂದೂ ರಾಷ್ಟ್ರದ ಸಂಸ್ಕೃತಿಯನ್ನು ವೈಭವೀಕರಿಸುವುದರ ಹೊರತು ಬೇರಾವ ವಿಷಯವನ್ನೂ ಮನದೊಳಕ್ಕೆ ಬಿಟ್ಟುಕೊಳ್ಳಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ ಹಿಂದೂ ಜನಾಂಗದೊಳಕ್ಕೆ ಸೇರಿಕೊಳ್ಳಬೇಕು. ಇಲ್ಲಾ ಯಾವುದಕ್ಕೂ ಆಗ್ರಹಿಸದೆ, ಯಾವುದೇ ಸವಲತ್ತುಗಳಿಗೂ, ವಿಶೇಷ ಸೌಕರ್ಯಗಳಿಗೂ ಅರ್ಹರಾಗದೆ, ನಾಗರಿಕ ಹಕ್ಕುಗಳನ್ನು ಸಮೇತ ಕೇಳದೆ ಹಿಂದೂರಾಷ್ಟ್ರಕ್ಕೆ ಪೂರ್ತಿ ಅಧೀನರಾಗಿ ದೇಶದೊಳಗಿರಬಹುದು. ಅವರಿಗೆ ಬೇರಾವ ಮಾರ್ಗವೂ ಇಲ್ಲ; ಕನಿಷ್ಠ ಪಕ್ಷ, ಇರಬಾರದು. ಒಂದು ಪ್ರಾಚೀನ ರಾಷ್ಟ್ರವಾಗಿರುವ ನಾವು ನಮ್ಮ ದೇಶದಲ್ಲಿ ಬದುಕಲು ಆಯ್ಕೆ ಮಾಡಿಕೊಂಡಿರುವ ವಿದೇಶೀ ಜನಾಂಗಗಳೊಂದಿಗೆ ಪ್ರಾಚೀನ ರಾಷ್ಟ್ರಗಳು ವ್ಯವಹರಿಸಬೇಕಿರುವ ಮತ್ತು ವ್ಯವಹರಿಸುವ ವಿಧಾನದಲ್ಲಿ ವ್ಯವಹರಿಸೋಣ" (ಗೋಲ್ವಾಲ್ಕರ್, **We or Our Nationhood Defined**).

ಆದುದರಿಂದ 21ನೆ ಕೇಂದ್ರ ಕಾನೂನು ಆಯೋಗ ಇದೇ ಅಕ್ಟೋಬರ್ 7ರಂದು ಏಕರೂಪದ ನಾಗರಿಕ ಸಂಹಿತೆ ಬಗ್ಗೆ "ಬೇಡಿಕೆ" ಮತ್ತು "ಪ್ರಶ್ನಾವಳಿ"ಗಳನ್ನು ಹಂಚಿರುವುದು ಮತ್ತು ಸಂಘಿಗಳು ಸಂಹಿತೆಯ ಜಾರಿಗಾಗಿ ಕೂಗು ಹಾಕುತ್ತಿರುವುದು ಆರೆಸ್ಸೆಸ್‌ನ ಕಟ್ಟಾಳುವಾದ ಮೋದಿಯ ನೇತೃತ್ವದಲ್ಲಿರುವ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಎಂಬುದರ ಕುರಿತು ಯಾವುದೆ ಸಂಶಯ ಇರಬೇಕಾಗಿಲ್ಲ. ಆದರೆ ಗಮನಿಸಬೇಕಾದ ಅಂಶವೆಂದರೆ ಈ ಏಕರೂಪದ ನಾಗರಿಕ ಸಂಹಿತೆಯ ರೂಪುರೇಷೆಗಳೇನು, ಅದರ ನಿಯಮಾವಳಿಗಳೇನೆಂದು ವಿವರಿಸುವ ಕರಡು ಪ್ರತಿಗಳನ್ನು ಇದುವರೆಗೂ ಸಾರ್ವಜನಿಕರಿಗೆ ಬಿಡುಗಡೆಗೊಳಿಸಲಾಗಿಲ್ಲ! ಯಾವುದೇ ಹೊಸ ಕಾನೂನೊಂದನ್ನು ಮಾಡುವ ಪ್ರಕ್ರಿಯೆಯಲ್ಲಿ "ಅಭಿಪ್ರಾಯ ಸಂಗ್ರಹ", "ಕಾನೂನು ರಚನೆ" ಮತ್ತು "ಕಾನೂನು ರಚನೆಯ ನಂತರ" ಎಂಬ ಮೂರು ಹಂತಗಳಿರುತ್ತವೆ. ಈಗ ಕಾನೂನು ಆಯೋಗ ಮಾಡಹೊರಟಿರುವ "ಅಭಿಪ್ರಾಯ ಸಂಗ್ರಹ"ದಲ್ಲಿ ಪ್ರಸ್ತಾಪಿತ ಕಾನೂನಿನ ಕರಡು ಪ್ರತಿಗಳನ್ನು ಸಾರ್ವಜನಿಕರಿಗೆ ಹಂಚುವ ಬದಲು ಹೌದು, ಅಲ್ಲ ಅಥವಾ ಹಲವು ಉತ್ತರಗಳಲ್ಲಿ ಒಂದನ್ನು ಆರಿಸುವ "ಪ್ರಶ್ನಾವಳಿ"ಯನ್ನು ಹಂಚಲಾಗಿದೆ. ಕಾನೂನು ಆಯೋಗದ ಈ "ಬೇಡಿಕೆ" ಮತ್ತು "ಪ್ರಶ್ನಾವಳಿ"ಗಳು ಫೆಬ್ರವರಿ 2014ರ ಕೇಂದ್ರೀಯ ಮಾರ್ಗದರ್ಶಿ ಸೂತ್ರಗಳನ್ನು ಬಹಳ ಸ್ಪಷ್ಟವಾಗಿ ಉಲ್ಲಂಘಿಸುತ್ತವೆ. ಹೀಗಾಗಿ ಇವುಗಳ ಆಧಾರದ ಮೇಲೆ ಏಕರೂಪದ ನಾಗರಿಕ ಸಂಹಿತೆಯೊಂದನ್ನು ಹೇರುವುದು ಸಂಪೂರ್ಣ ಕಾನೂನುಬಾಹಿರವೂ ದುರುದ್ದೇಶಪೂರ್ವಕವೂ ಆಗಿದೆ.

ಭಾರತದ ಸಂವಿಧಾನದ ರಾಜ್ಯನೀತಿಯ ನಿರ್ದೇಶನ ತತ್ವಗಳ (ಭಾಗ IV) ವಿಧಿ 44ರಲ್ಲಿ ಸರಕಾರ ಏಕರೂಪದ ನಾಗರಿಕ ಸಂಹಿತೆಯೊಂದನ್ನು ಜಾರಿಗೆ ತರಲು ಪ್ರಯತ್ನಿಸಬೇಕೆಂದು ಹೇಳಲಾಗಿದೆ ನಿಜ. ಆದರೆ ಇದು ವಿಶ್ವಸಂಸ್ಥೆ 1948ರಲ್ಲಿ ಅಳವಡಿಸಿಕೊಂಡ ಸಾರ್ವತ್ರಿಕ ಮಾನವ ಹಕ್ಕು ಘೋಷಣೆಯ ಉಲ್ಲಂಘನೆಯಾಗಿದೆ. ಏಕೆಂದರೆ ವಿಶ್ವಸಂಸ್ಥೆಯ ಘೋಷಣೆ ವ್ಯಕ್ತಿಗಳ ಧಾರ್ಮಿಕ ಹಕ್ಕನ್ನು ಮನ್ನಿಸುತ್ತದೆ. ಇದಲ್ಲದೆ 1993ರ "ಸರ್ವ ವಿಧದ ಮಹಿಳಾ ತಾರತಮ್ಯಗಳನ್ನು ಕೊನೆಗೊಳಿಸುವ" ಒಪ್ಪಂದಕ್ಕೆ ಸಹಿಹಾಕುವ ಸಂದರ್ಭದಲ್ಲಿ ಅಂದಿನ ಕೇಂದ್ರ ಸರಕಾರ ಒಪ್ಪಂದದ ಸೆಕ್ಷನ್ 16ನ್ನು ಒಪ್ಪಿರಲಿಲ್ಲ, ಏಕೆಂದರೆ ಸಮಾನ ವೈಯಕ್ತಿಕ ಕಾನೂನುಗಳ ಕುರಿತಾದ ಈ ಸೆಕ್ಷನ್ 16ನ್ನು ಕಡ್ಡಾಯವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎಂಬುದು ಅದರ ನಿಲುವಾಗಿತ್ತು. ಮತ್ತೊಂದು ಪ್ರಮುಖ ವಿಷಯವೆಂದರೆ ಧಾರ್ಮಿಕ ಸ್ವಾತಂತ್ರ್ಯ, ಶಿಕ್ಷಣ, ಸಾಂಸ್ಕೃತಿಕ ಹಕ್ಕುಗಳ ರಕ್ಷಣೆಗೆ ಸಂಬಂಧಪಟ್ಟ ಸಂವಿಧಾನದ ವಿಧಿ 25ರಿಂದ 30ರಲ್ಲಿ ತನ್ನದೆ ಆದ ವಿಶಿಷ್ಟ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿರುವ ಪ್ರತಿಯೊಂದು ಗುಂಪಿಗೂ ಆ ವಿಶಿಷ್ಟತೆಯನ್ನು ಉಳಿಸಿಕೊಳ್ಳುವ ಹಕ್ಕು ಇದೆ ಎಂದು ಸ್ಪಷ್ಟಪಡಿಸಲಾಗಿದೆ. ಏಕರೂಪದ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕು ಮತ್ತು ಮುಸ್ಲಿಂ ವೈಯಕ್ತಿಕ ಕಾನೂನಿನ (ಬಹುವಿವಾಹ ಮುಂತಾದ) ಕೆಲವೊಂದು ಅಂಶಗಳನ್ನು ಅಸಾಂವಿಧಾನಿಕವೆಂದು ಘೋಷಿಸಬೇಕು ಎಂಬಿತ್ಯಾದಿ ಬೇಡಿಕೆಗಳಿದ್ದ ಅನೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈ ಹಿಂದೆಯೂ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿದ್ದವು. ಆದರೆ ಅವೆಲ್ಲವೂ ತಿರಸ್ಕೃತಗೊಂಡಿವೆ. ಆದರೆ ಮೋದಿ ಸರ್ಕಾರ ಇದೆಲ್ಲವನ್ನೂ ಉದ್ದೇಶಪೂರ್ವಕವಾಗಿ ಅಲಕ್ಷಿಸಿ ಹಿಂಬಾಗಿಲ ಮೂಲಕ ಏಕರೂಪದ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಲು ಹೊರಟಿದೆ.

ಇಂದು ಮತ್ತೊಮ್ಮೆ ತ್ರಿವಳಿ ತಲಾಖ್ ಮತ್ತು ಬಹುವಿವಾಹ ಪದ್ಧತಿಗಳನ್ನು ಪ್ರಶ್ನಿಸಿ ಹಲವಾರು ಅರ್ಜಿಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಈಗಷ್ಟೆ ಕೆಲವು ದಿನಗಳ ಕೆಳಗೆ ಮೋದಿ ಸರ್ಕಾರ ಕೂಡಾ ನ್ಯಾಯಾಲಯಕ್ಕೆ ಅಫಿದಾವಿತ್ ಸಲ್ಲಿಸಿ ತ್ರಿವಳಿ ತಲಾಖ್, ನಿಖಾ ಹಲಾಲಾ ಮತ್ತು ಬಹುವಿವಾಹಗಳ ನ್ಯಾಯಸಮ್ಮತತೆಯನ್ನು ಸೂಕ್ಷ್ಮ ಪರಿಶೀಲನೆಗೆ ಒಡ್ಡಬೇಕೆಂದು ಕೋರಿದೆ. ಆದರೆ ಸರ್ವೋಚ್ಚ ನ್ಯಾಯಾಲಯ ಈಗಾಗಲೆ 2002ರ ಶಮೀಮ್ ಆರಾ ಪ್ರಕರಣದಲ್ಲಿ ದಿಢೀರ್ ತ್ರಿವಳಿ ತಲಾಖ್ ನ್ಯಾಯಸಮ್ಮತವಲ್ಲ ಎಂದು ತೀರ್ಪು ನೀಡಿದೆ. ಮಾತ್ರವಲ್ಲ ಮುಸ್ಲಿಂ ಜೋಡಿಯೊಂದರ ವಿಚ್ಛೇದನೆಯ ಸರಿಯಾದ ವಿಧಾನವನ್ನೂ ನಿರೂಪಿಸಿದೆ. ದಿಢೀರ್ ತ್ರಿವಳಿ ತಲಾಖ್‌ನೊಂದಿಗೆ ನಿಖಾ ಹಲಾಲಾ (ದಿಢೀರ್ ತಲಾಖ್‌ಗೆ ತುತ್ತಾದ ಮಹಿಳೆ ಅದೇ ಮೊದಲನೆ ಪತಿಯನ್ನು ಮತ್ತೆ ವಿವಾಹವಾಗಲು ಬಯಸಿದಲ್ಲಿ ಆಕೆ ಇನ್ನೋರ್ವ ಪುರುಷನೊಂದಿಗೆ ತಾತ್ಕಾಲಿಕ ವಿವಾಹವಾಗಿ ವಿಚ್ಛೇದನೆ ಪಡೆಯಲೆಬೇಕಾಗಿರುವುದು) ಕೂಡಾ ಕಾನೂನುಬಾಹಿರ ಎಂದಾಗಿದೆ. ಹಾಗೆ ನೋಡಿದರೆ ಕುರಾನ್ ದಿಢೀರ್ ವಿಚ್ಛೇದನೆಯನ್ನು ಸಮ್ಮತಿಸುವುದಿಲ್ಲ; ಅದು ಇಬ್ಬರಿಗೂ ಸಾಕಷ್ಟು ಕಾಲಾವಕಾಶ ಒದಗಿಸುತ್ತದೆ; ಪ್ರತ್ಯೇಕವಾಗಲು ನಿರ್ಧರಿಸುವ ಮುನ್ನ ಸಂಧಾನ ಮಾತುಗಳು ಅವಶ್ಯವೆಂದು ಹೇಳುವ ಅದು ಮದುವೆಯನ್ನು ಉಳಿಸುವುದಕ್ಕೆ ಹೆಚ್ಚಿನ ಒತ್ತು ನೀಡುತ್ತದೆ ಎಂದು ವಿದ್ವಾಂಸರು ಹೇಳುತ್ತಾರೆ.


ಇನ್ನು ಬಹುವಿವಾಹದ ಪ್ರಶ್ನೆಗೆ ಬಂದರೆ ಇಸ್ಲಾಮಿನಲ್ಲಿ ಬಹುಪತಿತ್ವ ನಿಷೇಧಿಸಲ್ಪಟ್ಟಿರುವುದರಿಂದ ಕೇವಲ ಬಹುಪತ್ನಿತ್ವದ ಪ್ರಶ್ನೆಯಷ್ಟೆ ಪ್ರಸ್ತುತವಾಗಿದೆ. ವಿದ್ವಾಂಸರ ಅಭಿಮತದಲ್ಲಿ ಕುರಾನ್‌ನಲ್ಲಿ ಏಕಪತ್ನಿತ್ವಕ್ಕೆ ಒತ್ತು ನೀಡಲಾಗಿದ್ದು ಅದರಲ್ಲಿ ಪತ್ನಿಯ ಬಗ್ಗೆ ಹೇಳುವಾಗ ಏಕವಚನದ ಪ್ರಯೋಗ ಮಾಡಲಾಗಿದೆ, ವಿವಾಹವನ್ನು ಎರಡು ಮನಗಳ ನಡುವಿನ ಭಾವನಾತ್ಮಕ ಬೆಸುಗೆ ಎಂದು ಕರೆಯಲಾಗಿದೆ. ಅದೇ ವೇಳೆ ಬಹುಪತ್ನಿತ್ವಕ್ಕೆ ಒಪ್ಪಿಗೆ ಇರುವುದೂ ನಿಜ. ಆದರೆ ಅದನ್ನು ನಿರ್ದಿಷ್ಟ ಸಂದರ್ಭಕ್ಕಷ್ಟೆ ಸೀಮಿತಗೊಳಿಸಲಾಗಿದೆ. ಪ್ರವಾದಿಯವರ ಕಾಲದಲ್ಲಿ ಸನ್ನಿವೇಶಗಳು ಹೇಗಿದ್ದುವೆಂದರೆ ನಿರಂತರ ಯುದ್ಧಗಳಿಂದಾಗಿ ವಿಧವೆಯರು ಮತ್ತು ಅನಾಥ ಮಕ್ಕಳ ಸಂಖ್ಯೆ ಹೆಚ್ಚಿತ್ತು, ಅವರ ಸಂಕಷ್ಟಗಳ ನಿವಾರಣೆಗೆ ಸಮಾಜದಲ್ಲಿ ಯಾವುದೆ ವ್ಯವಸ್ಥೆ ಇಲ್ಲದುದರಿಂದ ಪ್ರವಾದಿಯವರು ಇಂತಹದೊಂದು ನಿಯಮವನ್ನು ... ರಕ್ಷಣೋಪಾಯಗಳ ಷರತ್ತುಗಳೊಂದಿಗೆ ಜಾರಿಗೆ ತ... ಆದುದರಿಂದ ಬಹುಪತ್ನಿತ್ವ ಅಂದಿನ ಸಂದರ್ಭಕ್ಕನುಗ... ರಚಿಸಲಾದ ನಿಯಮವೆ ಹೊರತು ಪು... ಭೋಗಲಾಲಸೆಗಾಗಿ ಹಲವು ಸ್ತ್ರೀಯರನ್ನು ಮದುವೆ... ಕೊಟ್ಟಿರುವ ಪರವಾನಗಿ ಅಲ್ಲ ಎಂಬುದನ್ನು ಗಮನಿ...


ಆದರೆ ವಾಸ್ತವಾಂಶಗಳನ್ನು ಪರಿಗಣಿಸಿದಾಗ ಯ... ಸಮುದಾಯದಲ್ಲಿ ಬಹುಪತ್ನಿತ್ವವನ್ನು ಕಾನೂನಿನ ವ... ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಿದೆಯೆ ಎಂ... ಏಳುತ್ತದೆ. ಉದಾಹರಣೆಗೆ ಸಂಘಿಗಳು ಈಗ ಗೋ... ಏಕರೂಪಿ ನಾಗರಿಕ ಸಂಹಿತೆಯನ್ನು ಮಾದರಿ ... ಬಿಂಬಿಸುತ್ತಿದ್ದಾರೆ. ಆದರೆ ಅಸಲಿಗೆ ಇದೊಂದು ಸಮ... ಕಾಯ್ದೆಯಾಗಿ ಪರಿಣಮಿಸಿದೆ ಎಂದು ತಿಳಿದುಬ... ಅಂದು ಪೋರ್ಚುಗೀಸರು ಈ ಕಾನೂನನ್ನು ರೂ... ಸಂದರ್ಭದಲ್ಲಿ ಗೋವಾದ "ಕುಲೀನ" ಹಿಂದ... ಸರಕಾರಕ್ಕೆ ಅರ್ಜಿ ಸಲ್ಲಿಸಿ ತಮ್ಮ ಆಗಿನ ಧಾ... ಸಂಪ್ರದಾಯಗಳನ್ನು ಮಾನ್ಯಮಾಡಿ ಅವು... ಉಳಿಸಿಕೊಳ್ಳುವಂತೆ ಕೋರಿದ್ದರು. ಅದರಂತೆಯೆ ಗೋ... ಕಾನೂನಿನಲ್ಲಿ ಹಿಂದೂಗಳು ಮತ್ತಿತರ ಕ್ರೈ... ಸಮುದಾಯಗಳಿಗೆ ಸೀಮಿತ ಬಹುವಿವಾಹದ ... ಒದಗಿಸಲಾಗಿದೆ. ಗಮನಾರ್ಹವಾಗಿ ಈ ನಿಯ... ಇದುವರೆಗೆ ರದ್ದುಗೊಳಿಸಲಾಗಿಲ್ಲ. ಹೀಗಾಗಿ ಗೋ... ಅಧಿಕೃತ ದ್ವಿಪತ್ನಿತ್ವ ಪ್ರಕರಣಗಳು ಇವೆ; ಆದರೆ ... ಸಂಖ್ಯೆಯಲ್ಲಿ. ಅದೇ ವೇಳೆ ಅನಧಿಕೃತ ಪ್ರಕರಣಗಳ... ಸಾಕಷ್ಟಿದೆ ಎಂದು ತಿಳಿದುಬರುತ್ತದೆ. ಇದರಲ್ಲಿ ಸ್ತ್ರೀ... ಮೋಸಮಾಡಿ ಎರಡನೆ ಮದುವೆ ಮಾಡಿಕೊ... ಪ್ರಕರಣಗಳಲ್ಲದೆ ಗುಟ್ಟಿನಲ್ಲಿ ಮದುವೆಯಾಗುವ ಪ್ರಕರ... ಸೇರಿವೆ. ಕಾನೂನಿನಂತೆ ಅಧಿಕೃತ ವಿವಾಹವಾಗಲಿ... ಜೋಡಿ ಮೊದಲು 'ವಿವಾಹದ ಇರಾದೆ' ಫಾ... ಸಹಿಹಾಕಬೇಕು ಮತ್ತು ಮದುವೆಯಾದ ನಂತರ ನಿ... ವಿವಾಹ ಒಪ್ಪಂದಕ್ಕೆ ಸಹಿಹಾಕಬೇಕೆಂದಿದೆ. ಆದ... ಮಹಿಳೆಯರನ್ನು ಹೇಗೆ ವಂಚಿಸಲಾಗುತ್ತದೆಂದರೆ ಮೊ... ಫಾರ್ಮ್ ಮಾತ್ರ ಭರ್ತಿ ಮಾಡಲಾಗುತ್ತದೆ; ಎರಡನೆ... ಮಾಡಲಾಗುವುದಿಲ್ಲ!

ಗೋವಾದಲ್ಲಿ ಹೀಗಿದ್ದರೆ ಇತರ ರಾಜ್ಯಗಳಲ್ಲಿ ಹ... 1955ರ ಹಿಂದೂ ವಿವಾಹ ಕಾಯ್ದೆಯನ್ವಯ ಹಿಂದು... (ಸಿಖ್ಖರು, ಬೌದ್ಧರು, ಜೈನರನ್ನು ಹೊರತುಪಡಿಸಿ) ದ... ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿದೆಯಾದರೂ 2... ಜನಗಣತಿ ಅಂಕಿಅಂಶಗಳು ಬೇರೆಯೆ ಕಥೆಯನ್ನು ಹೇ... ವಿವಾಹಿತ ಪುರುಷರ ಸಂಖ್ಯೆ 23,35,20,803 ... ವಿವಾಹಿತ ಸ್ತ್ರೀಯರ ಸಂಖ್ಯೆ 23,78,77,097 ... 43,56,294 ಕಡಿಮೆ ಇದೆ. ಇದರರ್ಥ ಒಂದೇ. ದ್ವಿ... ಆದರೆ ಈ ಅನಧಿಕೃತ ಎರಡನೆ ಹೆಂಡಂದಿರಿಗೆ ಯಾ... ಹಕ್ಕುಗಳಿಲ್ಲ; ಸಮಾನತೆ ಇಲ್ಲ; ಘನತೆಯ ಬದುಕು... ವೃಂದಾವನದಲ್ಲಿರುವ ವಿಧವೆಯರ ನಿಕೃಷ್ಟ ಬದುಕಿನ ... ಹಲವಾರು ವರದಿಗಳು ಲಭ್ಯವಿವೆ. ಇನ್ನು ಹಲ... ಬುಡಕಟ್ಟು ಸಮಾಜಗಳಲ್ಲೂ ಬಹುವಿವಾಹ ... ಜಾರಿಯಲ್ಲಿರುವುದರಿಂದ ಅವರೆಲ್ಲರೂ ಏಕರೂಪದ ... ಸಂಹಿತೆಗೆ ವಿರೋಧ ಸೂಚಿಸಿದ್ದಾರೆ. ಹೀಗೆ ... ಎಲೆಯಲ್ಲಿ ಕತ್ತೆ ಸತ್ತು ಬಿದ್ದಿದ್ದರೂ ಮುಸ್ಲಿ... ಬೆಟ್ಟುಮಾಡುವ ಸಂಘಿಗಳು 'ಅವರು ಹಲವು ಹೆಂ... ಮದುವೆಯಾಗುತ್ತಾರೆ, ತಮ್ಮವರ ಜನಸಂಖ್ಯೆ... ಹೆಚ್ಚಿಸುತ್ತಾರೆ, ಇದರಿಂದ ಹಿಂದೂ ಧರ್ಮಕ್ಕೆ ಅಪಾಯ... ಎಂದು ಸುಳ್ಳುಸುಳ್ಳೆ ಆರೋಪಿಸುತ್ತಾ ... ಜನಸಾಮಾನ್ಯರನ್ನು ತಪ್ಪುದಾರಿಗೆ ಎಳೆಯಲೆತ್ನಿಸುತ್ತಿರು... ಏನೆನ್ನಬೇಕು? ಈಗಂತೂ ತಮ್ಮದೆ ಮೋದಿ ಸ... ಕುಮ್ಮಕ್ಕಿನಿಂದ ಪ್ರೇರಿತರಾಗಿ 'ಇದನ್ನೆಲ್ಲ ತಡೆಯ... ಏಕರೂಪದ ನಾಗರಿಕ ಸಂಹಿತೆ ಬೇಕು' ... ಬೊಬ್ಬಿರಿಯುತ್ತಾ ಒಡೆದ ಸಮಾಜ, ಛಿದ್ರ... ಸಹಬಾಳ್ವೆಯ ಬದುಕುಗಳ ಗೋರಿಯ ಮೇಲೆ ... ರಾಷ್ಟ್ರವನ್ನು ಸ್ಥಾಪಿಸಲು ಹೊರಟಿದ್ದಾರೆ.

■ ಸುರೇಶ್ ಭಟ್ ಬಾಕ್ರಬೈ...







ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸಮಾಜದ ಬೇರು ಬುಡಕಟ್ಟುಗಳಲ್ಲಿ

ಉಬುಂಟು

ದಕ್ಷಿಣ ಆಫ್ರಿಕಾದ ಕೆಲವು ಭಾಗಗಳಲ್ಲಿ ಉಬುಂಟು ...ಬ ಬುಡಕಟ್ಟಿನ ಜನರಿದ್ದು ಅವರದೊಂದು ಸಕಾರಾತ್ಮಕ ...ತಿಯೊಂದು ಚಾಲ್ತಿಯಲ್ಲಿದೆ. ಅದೇನೆಂದರೆ ಯಾವುದೇ ...ಯು ಏನೇ ತಪ್ಪು ಮಾಡಿದರೂ ಅವನನ್ನು ಹಳ್ಳಿಯ ...ಧ್ಯಭಾಗಕ್ಕೆ ಕರೆದುಕೊಂಡು ಬರುತ್ತಾರೆ. ನಂತರ ಊರಿನ ...ರೆಲ್ಲಾ ಸುತ್ತುವರೆದು, ಎರಡು ದಿನಗಳ ಕಾಲ ಅವನು ...ಡಿರುವ ಒಳ್ಳೆಯ ಕೆಲಸಗಳನ್ನೆಲ್ಲಾ ಹೇಳುತ್ತಿರುತ್ತಾರೆ. ...ರ ಪ್ರಕಾರ ಯಾವುದೇ ವ್ಯಕ್ತಿಯು ಮೂಲದಲ್ಲಿ ...ಯವನೇ ಆಗಿರುತ್ತಾನೆ. ಆದರೆ ಯಾವುದೋ ಒಂದು ...ಗೆಯಲ್ಲಿ ತಪ್ಪು ಮಾಡಿಬಿಡುತ್ತಾನೆ. ಆ ತಪ್ಪು ...ಡುವುದೆಂದರೆ ಅವನು ತನ್ನ ಒಳ್ಳೆಯತನವನ್ನು ...ಕಳಿಸೆಂಬ ಕೂಗು ಅಥವಾ ಅಳಲಾಗಿರುತ್ತದೆ. ಆದ್ದರಿಂದ ...ಯವರೆಲ್ಲಾ ಒಗ್ಗಟ್ಟಾಗಿ ತನ್ನ ಒಳ್ಳೆಯತನಕ್ಕಾಗಿ ...ತೊರೆಯುತ್ತಾ ಸಹಾಯ ಬೇಡುತ್ತಿರುವವನಿಗೆ ...ಕರಿಸಲೆಂದು ಅವನ ಒಳ್ಳೆಯ ಕೆಲಸಗಳನ್ನು, ಗುಣಗಳನ್ನು ...ಸುವಂತಹ ಕೆಲಸವನ್ನು ಮಾಡುತ್ತಾರೆ. ಈ ಆಚರಣೆಯ ...ಲಕ ತಪ್ಪು ಮಾಡಿರುವವನು ನಿಸರ್ಗದಿಂದ ಪಡೆದಿರುವ ...ಯತನವನ್ನು ಮರಳಿಪಡೆಯುತ್ತಾನೆಂದು ಅವರ ನಂಬಿಕೆ. ... ಮತ್ತು ಅವಮಾನಗಳನ್ನು ಮಾಡುವುದರಿಂದ ವ್ಯಕ್ತಿಯು ...ಮಿಂದ ನಿಸರ್ಗದತ್ತವಾದ ಗುಣರಹಿತನಾಗಿ ಸಂಪೂರ್ಣ ...ರಟೇ ಹೋಗುತ್ತಾನೆಂದು ಅವರು ಹೆದರುತ್ತಾರೆ. ...ರಿಂದ ಆತನನ್ನು ಅಪಮಾನಿಸುವುದೂ ಇಲ್ಲ, ...ಸುವುದೂ ಇಲ್ಲ, ಬದಲಿಗೆ ಅವನ ಒಳ್ಳೆಯತನವನ್ನು ...ನೆಗೆ ತರುವುದರ ಮೂಲಕ, ಅವನು ಮತ್ತು ನಿಸರ್ಗದ ...ಡುಗೆಗೆ ಬೆರೆತುಕೊಳ್ಳಲು ಪ್ರೋತ್ಸಾಹಿಸುತ್ತಾರೆ.


... ಯಾರಾದರೊಬ್ಬರು ಏನಾದರೊಂದು ತಪ್ಪು ಮಾಡಿದರೆ ..., ಆತ ಮಾಡಿರುವ ಒಳ್ಳೆಯ ಕೆಲಸ ಮತ್ತು ...ಯಗಳನ್ನೆಲ್ಲಾ ಮರೆತು ಚಾರಿತ್ರ್ಯವಧೆ ಮಾಡುವ ಜನರ ...ವೆ ಉಬುಂಟು ಜನ ವಿಶೇಷವಾಗಿ ಮತ್ತು ...ರಾತ್ಮಕವಾಗಿ ಕಾಣುತ್ತಾರೆ. ಚಿತ್ತಾರವನ್ನು ಮಸಿ ನುಂಗಿತು ...ದಿಲ್ಲ ಇವರಲ್ಲಿ. ಅಡಿಕೆ ಕದ್ದ ಮಾನ ಆನೆ ಕೊಟ್ಟರೂ ...ರದು ಎನ್ನುವ ಜನಪದರಲ್ಲ ಇವರು.

ಶನಿ ಪ್ರಭಾವ

ಶನಿಶಿಂಗ್ನಾಪುರ, ಮಹಾರಾಷ್ಟ್ರದ ಅಹಮದ್‌ನಗರ್ ...ಯಲ್ಲಿದೆ. ಈ ಊರಿನಲ್ಲಿ ಮನೆಗಳು, ಅಂಗಡಿ ...ಂಗಟ್ಟುಗಳು ಬರಿಯ ಹೊಸ್ತಿಲನ್ನು ಹೊಂದಿದ್ದು ...ವುದೇ ಬಾಗಿಲುಗಳನ್ನು ಹೊಂದಿರುವುದಿಲ್ಲ. 2010, ...11, 2012ರಲ್ಲಿ ಕೆಲವು ಸಾವಿರಗಳ ಮೂರ್ನಾಲ್ಕು ...ನಗಳಾದವಂತೆ. ಆದರೂ ಲಕ್ಷಾಂತರ ಒಡವೆ ವಸ್ತ್ರಗಳನ್ನು ...ಯ ಬೀರುವಿನಲ್ಲಿಟ್ಟಿದ್ದರೂ, ಅಂಗಡಿಗಳಲ್ಲಿದ್ದರೂ ...ಲುಗಳನ್ನು ಹಾಕುವುದಿಲ್ಲ. ಇಲ್ಲಿ ಹಳ್ಳಿಗರ ನಂಬಿಕೆ ...ಂದರೆ ಶನಿಯು ಕಳ್ಳತನ ಮಾಡುವವರನ್ನು ...ಸುತ್ತಾನೆಂದು. ಸ್ವಯಂಭುವಾಗಿ ಉದ್ಭವವಾಗಿರುವ ಈ ...ದೇವಸ್ಥಾನವು ಜಾಗೃತ ದೇವಸ್ಥಾನವೆಂದೇ ಪ್ರತೀತಿ. ...ಕೋ ಬ್ಯಾಂಕ್ ಈ ಹಳ್ಳಿಯಲ್ಲಿದ್ದು, ಬ್ಯಾಂಕೂ ಕೂಡ ...ಗಿಲನ್ನು ಹೊಂದಿಲ್ಲ, ಆದಾಗ್ಯೂ ಬ್ಯಾಂಕುಗಳಿಗೆ ಹೆಚ್ಚಿನ ...ಕ್ಷತೆ ಇರಬೇಕೆಂಬ ಒತ್ತಾಯವಿರುವುದರಿಂದ ...ಬೀಗಗಳನ್ನು ಭದ್ರವಾದ ಕಪಾಟುಗಳಲ್ಲಿ ಇಟ್ಟಿದ್ದು ...ರಬಾಗಿಲನ್ನು ಮಾತ್ರ ಬಾಗಿಲಿಲ್ಲದೇ ತೆರೆದೇ ...ರುತ್ತಾರೆ.

...ಬಹಳ ಹಿಂದೆ ಕುರುಬನೊಬ್ಬ ಕುರಿ ಕಾಯುತ್ತಾ ...ದಾಗ ತನ್ನ ಕೋಲಿನಿಂದ ಕಪ್ಪು ಕಲ್ಲೊಂದನ್ನು ತುಗುಲಿಸಿ ...ರಿಂದ ರಕ್ತಸ್ರಾವವಾಗಿದ್ದನ್ನು ಕಂಡು ಹೆದರಿ ಮನೆಗೆ ...ರಟು ಹೋದನಂತೆ. ನಂತರ ಅವನ ಕನಸಿನಲ್ಲಿ ಬಂದ ...ಶ್ವರನು ತಾನು ಶನಿಯೆಂದೂ ತನಗೆ ...ಶವೇ ಚಪ್ಪರವಾಗಿ ದೇವಾಲಯ ...ಂದೂ ಕೇಳಿದನಂತೆ. ಹಾಗಾಗಿ ತೆರೆದ ...ಸ್ಥಾನವು ಈ ಶನ್ಯೈಶ್ವರನಿಗೆ. ದಿನಕ್ಕೆ ...000 ದಿಂದ 40,000ದವರೆಗೂ ...ರು ಬರುತ್ತಿದ್ದು, ಅಮವಾಸ್ಯೆಯ ದಿನ ... ಉಲ್ಬಣಗೊಳ್ಳುತ್ತದೆಯಂತೆ. ...ದೇಶಕನ ಗುಲ್ಶನ್ ಕುಮಾರ್ ಈ ...ಸ್ಥಾನದ ಬಗ್ಗೆ ಸಿನಿಮಾ ಕೂಡ ...ದಿದ್ದಾರೆ.

...ಈ ದೇವಸ್ಥಾನದ ಒಳಾವರಣಕ್ಕೆ ...ಯರಿಗೆ ಪ್ರವೇಶವಿರಲಿಲ್ಲ, ಅದನ್ನು ...ರೋಧಿಸಿ ತೃಪ್ತಿ ದೇಸಾಯಿ ಸುಮಾರು ... ಮಹಿಳೆಯರಿಗೆ ನೇತೃತ್ವ ವಹಿಸಿ ...ಯವಾಗಿ ದೇಗುಲ ಪ್ರವೇಶಿಸಿದರು.



ಅದು ಇತ್ತೀಚಿನ ಹೋರಾಟದ ಕಥೆ.

ಇಲ್ಲಿ ಶನಿಯು ನೀಡುವ ಶಿಕ್ಷೆಯ ಭೀತಿಗೆ ಕಳ್ಳತನಗಳನ್ನು ಮಾಡದೇ ಇರುವುದು. ಆದರೆ, ಇಂದಿಗೂ ನೈಸರ್ಗಿಕವಾಗಿ ಸಹಬಾಳ್ವೆ ಮಾಡುತ್ತಾ ಕಳ್ಳತನಗಳೇ ಇಲ್ಲದೇ, ಅಪರಾಧಗಳೇ ಇಲ್ಲದೇ, ಪೋಲಿಸ್ ಇಲ್ಲದೇ ಇರುವಂತಹ ಜಾಗಗಳು ಇವೆ.

ಸಾತ್ವಿಕ ನಾಡು

ಸ್ಪೈನ್ ದೇಶದ ಮರಿನಾಲೆಡಾ ಎಂಬ ಊರಿನಲ್ಲಿ ಪೋಲಿಸ್ ಇಲ್ಲ, ಅಪರಾಧಗಳನ್ನು ಮಾಡುವುದಿಲ್ಲ, ನಿರುದ್ಯೋಗ ಸಮಸ್ಯೆ ಇಲ್ಲ, ಮಹಾ ಸಂಘಜೀವಿಗಳು. ಅವರು ಕಮ್ಯುನಿಸ್ಟ್‌ಗಳೆಂದು ಅಥವಾ ಸಮಾಜವಾದಿಗಳೆಂದು ಹೇಳಿಕೊಳ್ಳುತ್ತಾರೆ. ಅವರ ದೊಡ್ಡ ಸಾಂಘಿಕ ಶಕ್ತಿ ಎಂದರೆ, ಯಾರೂ ಯಾರನ್ನೂ ಯಾವುದೇ ಕೆಲಸವನ್ನು ಮಾಡಲು ಒತ್ತಾಯಿಸುವುದಿಲ್ಲ, ಅವರೇ ಸ್ವಯಂಪ್ರೇರಿತರಾಗಿ ರಸ್ತೆಗಳನ್ನು, ಗುಂಡಿಗಳನ್ನು ಶುದ್ಧ ಮಾಡುವುದರಿಂದ ಹಿಡಿದು ಎಲ್ಲಾ ನಾಗರಿಕ ಸೇವೆಗಳನ್ನೂ ಮಾಡುತ್ತಾರೆ. ಸಂಬಳದ ಹಂಬಲವಿಲ್ಲ. ಊರು ಶುದ್ಧವಾಗಿರಬೇಕು. ಇನ್ನು ಪೋಲಿಸಂತೂ ಇಲ್ಲವೇ ಇಲ್ಲ. ಇನ್ನು ಅವರ ಆರ್ಥಿಕ ಸ್ಥಿತಿಯೇನೂ ತುಂಬಾ ಉನ್ನತವಾಗಿಲ್ಲ. ಆದರೆ ಅವರು ತೃಪ್ತರಾಗಿದ್ದಾರೆ. ತಲೆ ಕೆಡಿಸಿಕೊಳ್ಳುವುದಿಲ್ಲ, ಸುತ್ತಮುತ್ತಲ ಬೇರೆ ಬೇರೆ ಪಟ್ಟಣಗಳಿಗೆ ಯುವಕರು ಕೆಲಸಕ್ಕೆ ಹೋಗುತ್ತಾರೆ. ಎಲ್ಲಿಗೇ ಹೋದರೂ ಅವರು ಅವರಿರುವಂತೆಯೇ ಇರುತ್ತಾರೆ. ಸ್ವಾರ್ಥ ಮತ್ತು ದುರಾಸೆ ಎಂಬುದು ಅವರಿಗೆ ಗೊತ್ತೇ ಇಲ್ಲ ಎಂದಲ್ಲ. ಅವರು ಇಂತಹುದರ ಬಗ್ಗೆ ತಿಳುವಳಿಕೆಯನ್ನು ಹೊಂದಿದ್ದಾರೆ. ಆದರೆ, ಅದನ್ನು ಯಾವುದೇ ಕಾರಣಕ್ಕೂ ತಮ್ಮೊಳಗೆ ನುಸುಳಲು ತಾವೇ ಬಿಡುವುದಿಲ್ಲ. ಇದೇ ಅವರ ನೈತಿಕ ಬದ್ಧತೆ.

ಅವರಲ್ಲಿ ಎಷ್ಟೋ ಬಾರಿ ತಿನ್ನಲೂ ಸಿಗದಂತಹ ಸ್ಥಿತಿಯೂ ಉಂಟಾಗುತ್ತದೆ. ಆದರೂ ಅವರು ಯಾವುದೇ ಸಮಯದಲ್ಲಿ ಅಡ್ಡದಾರಿ ಹಿಡಿಯುವುದೇ ಇಲ್ಲ. ಕೆಲಸ ಮಾಡಿಯೇ ಬದುಕುತ್ತಾರೆ. ಕಳ್ಳತನವಾಗಲಿ, ದರೋಡೆ, ಕೊಲೆಗಳಂತಹ ಅಪರಾಧಗಳನ್ನು ಮಾಡುವುದೇ ಇಲ್ಲ.

ಕೋಸ್ಟಾ ರಿಕಾ ದೇಶಕ್ಕೆ ಆರ್ಮಿ ಇಲ್ಲ. ನ್ಯಾಷನಲ್ ಗಾರ್ಡ್ ಇದೆ. ಆದರೆ ಹೋರಾಡುವಂತಹ, ಕ್ಷಿಪಣಿಗಳನ್ನು ಹೊಂದಿರುವಂತಹ, ಆಯುಧಗಳನ್ನು ಹೊಂದಿರುವಂತಹ ಸೇನೆ ಇಲ್ಲ. ಕಾವಲು ಪಡೆ ಇರುವುದು ಬರಿಯ ನೆಪಮಾತ್ರಕ್ಕೆ. ಈ ಬಗೆಯ ಹಲವು ಸಣ್ಣಪುಟ್ಟ ದೇಶಗಳೇ ಇವೆ.

ಬ್ರಿಟನ್‌ನ ಬರ್ರಾ ಎಂಬ (ಸ್ಕಾಟ್‌ಲೆಂಡ್‌ನ ನಾರ್ತ್ ವೆಸ್ಟ್ ಕೋಸ್ಟ್ ಭಾಗದಲ್ಲಿರುವುದು) ಈ ಪಟ್ಟಣದಲ್ಲಿ ಪೋಲಿಸ್ ಇಲ್ಲ, ಟ್ರಾಫಿಕ್ ಇಲ್ಲ, ಅಪರಾಧಗಳಿಲ್ಲ. ಸಮುದ್ರದ ಮಕ್ಕಳು ಆ ಊರಿನ ಜನರು. ಬೇರೆ ಬೇರೆ ಸ್ಥಳಗಳಿಗೆ ಹೋಗುವುದಿಲ್ಲ, ತಮ್ಮದೇ ಸ್ಥಳದಲ್ಲಿ ಸಮುದ್ರದ ಉತ್ಪನ್ನಗಳನ್ನು ಅವಲಂಬಿಸಿ ಉದ್ಯಮಗಳನ್ನು, ವ್ಯಾಪಾರ ಸಾಪಾರ ಮಾಡಿಕೊಂಡಿರುತ್ತಾರೆ. ಆದರೆ ಯಾರೂ ಯಾರಿಗೂ ಮೋಸ ಮಾಡುವುದಿಲ್ಲ. ಹೊರಗಿನಿಂದ ಬಂದವರು ಏನಾದರೂ ಮೋಸ ಮಾಡಿದರೆ, ಹಾಗೆ ಮಾಡಿದರೆ ನಮಗೆ ತಿಳಿಯುವುದು ಎಂದು ವಿನಯವಾಗಿ ತಿಳಿಸಿ ಹಾಗೆ ಮಾಡದಿರಲು ಕೋರುತ್ತಾರೆ. ಅಲ್ಲಿನ ಕಲಾವಿದರು ತಾವಾಗಿಯೇ ಬಂದು ತಮ್ಮ ಪ್ರದರ್ಶಕ ಕಲೆಗಳನ್ನು ಪ್ರದರ್ಶಿಸಿ ಬಂದಿರುವವರಿಗೆ ರಂಜಿಸುತ್ತಾರೆ. ಬಂದವರನ್ನು ಬಹಳ ಗೌರವ ಪೂರ್ಣವಾಗಿ ನೋಡಿಕೊಳ್ಳುತ್ತಾರೆ. ನೀವು ಕೊಂಡೊಯ್ದಿರುವ ಹಣ ಬಹುಪಾಲು ಖರ್ಚೇ ಆಗುವುದಿಲ್ಲ, ಅಲ್ಲಿ ನಿಮ್ಮನ್ನು ತಮ್ಮವರೆಂದು ನೋಡಿಕೊಳ್ಳುವ ಜನ ತಾವಾಗಿಯೇ ಒದಗುತ್ತಾರೆ. ಅಲ್ಲಿನ ಅಂಚೆ ಕಚೇರಿಗೂ ಕೂಡಾ ಇದೇ ವೇಳೆ ಎಂದೇನಿಲ್ಲ, ಯಾರೇ ಹೋಗಿ ಬಾಗಿಲು ಬಡಿದರೂ ಅಲ್ಲೇ ವಾಸವಿರುವ ಪೋಸ್ಟ್ ಮಾಸ್ಟರ್ ಬಾಗಿಲು ತೆಗೆದು ಸೇವೆ ಸಲ್ಲಿಸುತ್ತಾನೆ. ಇದು ಇತರ ಕಚೇರಿಗಳಿಗೂ ಅನ್ವಯವಾಗುತ್ತದೆ.



ಇವರು ಆಧುನಿಕ ನಾಗರಿಕತೆಯಲ್ಲಿದ್ದರೂ, ನವೀನ ತಂತ್ರಜ್ಞಾನಗಳೆಲ್ಲವನ್ನೂ ಬಳಸುತ್ತಿದ್ದರೂ ನಿಸರ್ಗದಲ್ಲಿರುವ ಸಮಬಾಳ್ವೆಯ ತತ್ವವನ್ನು ಅನುಸರಿಸುತ್ತಿದ್ದಾರೆ. ಈ ಬಗೆಯ ಹಲವು ದೊಡ್ಡ ಮತ್ತು ಚಿಕ್ಕ ಪಟ್ಟಣಗಳು ವಿಶ್ವದಲ್ಲಿ ಹಲವಿವೆ.





ನವ ನಾಗರಿಕತೆಯೆಂದರೆ ಅಲರ್ಜಿ

ಇನ್ನು ನವ ನಾಗರಿಕತೆಯನ್ನೇ ತಿರಸ್ಕರಿಸುವಂತಹ ಬುಡಕಟ್ಟುಗಳು ಕೂಡಾ ಇವೆ.

1. ಇತಿಯೋಪಿಯಾದಲ್ಲಿರುವ ಸುರ್ಮಾ ಬುಡಕಟ್ಟು. ಅವರು ಪಾಶ್ಚಾತ್ಯರ ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗಲೇ ಇಲ್ಲ. ಪಾಶ್ಚಾತ್ಯ ವಿದ್ವಾಂಸರು, ಸಂಶೋಧಕರು ಅವರ ದೊಡ್ಡ ತುಟಿಗಳ ವಿಧಾನಕ್ಕೆ ಬೆರಗಾಗಿ ಅದೆಷ್ಟೇ ಒಡನಾಟ ಮಾಡಿದರೂ, ಅವರು ಮಾತ್ರ ಅವರ ಬುಡಕಟ್ಟಿನ ಸಂಸ್ಕೃತಿಯನ್ನು ಬಿಟ್ಟುಕೊಡಲು ಯಾವುದೇ ರೀತಿಯಲ್ಲಿ ಇಂದಿಗೂ ರಾಜಿಯಾಗಿಲ್ಲ. ಅವರ ಸುತ್ತ ವಿಶ್ವಯುದ್ಧಗಳೇ ನಡೆದುಹೋದರೂ ಅವರಂತೂ ಯಾವುದಕ್ಕೂ ಅಂಟದೇ ತಮ್ಮ ನಿಸರ್ಗಮೂಲದ ಸಂಸ್ಕೃತಿಗೆ ಮಾತ್ರವೇ ಹೊಂದಿಕೊಂಡಿದ್ದಾರೆ.
2. ಪೆರು ದೇಶದಲ್ಲಿರುವ ಒಂದು ಬುಡಕಟ್ಟು ಕಾಡುಗಳಲ್ಲಿದ್ದಾರೆ. ಅವರಿಗೆ ಸ್ಪ್ಯಾನಿಶ್ ಅಥವಾ ಇಂಗ್ಲೀಷ್ ಯಾವುದೂ ತಿಳಿದಿರಲಿಲ್ಲ. ಅವರಿಗೆ ನವನಾಗರಿಕತೆ ಎಂದು ಹೇಳಿಕೊಳ್ಳುವ ಯಾವುದೇ ಒಂದು ಗೊತ್ತಿಲ್ಲ. ನಿಜ ಹೇಳಬೇಕಂದರೆ ಇದುವರೆಗೂ ಮಾನವ ಶಾಸ್ತ್ರೀಯ ಅಧ್ಯಯನ ಮಾಡುವಂತಹ ಸಂಶೋಧಕರಿಗೆ ಅವರು ಸಿಕ್ಕಿರಲಿಲ್ಲ. ಆಕಸ್ಮಾತ್ ಆಗಿ ಕೆಲವು ಪ್ರವಾಸಿಗರಿಗೆ ದೊರಕಿದ್ದು, ಅವರು ಅವರನ್ನು ತಮ್ಮ ಕ್ಯಾಮರಾಗಳಲ್ಲಿ ಸೆರೆ ಹಿಡಿದರು. ಭಾಷೆಯ ತೊಡಕಿದ್ದುದರಿಂದ ಅವರು ಪ್ರವಾಸಿಗರನ್ನು ನಿರ್ಲಕ್ಷಿಸಿ ಕಾಡುಗಳಲ್ಲಿ ಕಣ್ಮರೆಯಾದರು.
3. ಅಮೇಜಾನ್ ಕಾಡುಗಳಲ್ಲಿ ಈಗ ಒಬ್ಬನಷ್ಟೇ ಒಂದು ಬುಡಕಟ್ಟಿನವನು ಇದ್ದಾನೆ. ಅವನು ಒಬ್ಬನೇ ಇದ್ದು ಅವನ ಬುಡಕಟ್ಟಿನ ಜನರೆಲ್ಲಾ ನಾನಾ ಕಾರಣಗಳಿಂದ ನಶಿಸಿಹೋಗಿದ್ದು, ಅವನಿಗೊಬ್ಬನಿಗೇ ಅವರ ಭಾಷೆ, ಸಂಸ್ಕೃತಿ, ಆಚಾರ ಮತ್ತು ವಿಚಾರಗಳೆಲ್ಲಾ ತಿಳಿದಿರುವುದು. ಆದರೆ ಅವನು ಅಲ್ಲಲ್ಲಿ ಸಂಶೋಧಕರಿಗೆ ಕಾಣಿಸಿಕೊಳ್ಳುತ್ತಾನೆ, ಆದರೆ ಸಿಗುವುದಿಲ್ಲ. ಅವನು ಯಾಕಾದರೂ ಅಷ್ಟು ಮುಖ್ಯವಾಗಿ ಬೇಕೆಂದರೆ, ಅವನು ಹೊರಟು ಹೋದನೆಂದರೆ ಇನ್ನು ಅವನ ಬುಡಕಟ್ಟಿನ ಯಾರೊಬ್ಬರೂ ಇರುವುದೇ ಇಲ್ಲ. ಹಾಗಾಗಿ ಮಾನವಶಾಸ್ತ್ರೀಯ ಅಧ್ಯಯನ ಮಾಡುವವರಿಗೆ ಅವನು ಬಹಳ ಮುಖ್ಯವಾಗಿರುತ್ತಾನೆ. ಆದರೆ ಅವನಿಗೆ ಈ ಸಂಶೋಧಕರನ್ನು ಕಟ್ಟಿಕೊಂಡು ಆಗಬೇಕಾಗಿರು ವುದೇನು? ಅವನು ಇವರುಗಳನ್ನು ನೋಡಿದ ಕೂಡಲೇ ಮರೆಯಾಗುತ್ತಾನೆ.
4. ನ್ಯೂಯಾರ್ಕ್ ಸಿಟಿಯಿಂದಲೇ ಐವತ್ತಾರು ಕಿಲೋ ಮೀಟರುಗಳಷ್ಟೇ ದೂರದಲ್ಲಿರುವ ಬುಡಕಟ್ಟು ಜಾಕ್ಸನ್ ವೈಟ್ಸ್. ಇವರು ಕೂಡಾ ನವನಾಗರಿಕತೆಯ ಸೋಂಕಿಲ್ಲದೇ ಬದುಕುತ್ತಿದ್ದಾರೆ. ಇವರು ಇತರರನ್ನೂ ಕೂಡಾ ಸೇರಿಸರು.
5. ಉತ್ತರ ವಿಯಟ್ನಾಂನಲ್ಲಿ ರುಕ್ ಎಂಬ ಬುಡಕಟ್ಟಿನ ಜನರಿದ್ದು, ನೂರಾರು ವರ್ಷಗಳಿಂದ ತಮ್ಮ ಆಚಾರ ವಿಚಾರಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆಯೇ ಹೊರತು ನವನಾಗರಿಕತೆಗೆ ಕಿಂಚಿತ್ತೂ ತೆರೆದುಕೊಳ್ಳುವುದಿಲ್ಲ.

ಇದೇ ರೀತಿಯಲ್ಲಿ ಅಮೇರಿಕಾದ ಮೂಲ ನಿವಾಸಿಗಳು, ಬ್ರೆಜಿಲ್‌ನ ಬುಡಕಟ್ಟುಗಳು, ಗಿನಿಯಾ ಬುಡಕಟ್ಟುಗಳು, ಪಶ್ಚಿಮ ಆಸ್ಟ್ರೇಲಿಯಾದ ಪಿನ್ಟುಪಿ ಬುಡಕಟ್ಟುಗಳು, ಭಾರತ ಮತ್ತು ಥೈಲ್ಯಾಂಡ್ ನಡುವಿನ ಪ್ರದೇಶದ ಸೆಂಟಿಲಿಸ್ ಸಮುದ್ರದ ದಡದ ಬುಡಕಟ್ಟುಗಳು ಸುಂದರವಾಗಿ, ಬಹಳ ಅಚ್ಚುಕಟ್ಟಾಗಿ, ತಮ್ಮ ನಿಸರ್ಗದಲ್ಲಿ ನೈಸರ್ಗಿಕ ಸೂತ್ರದಡಿಯಲ್ಲೇ ಬದುಕುತ್ತಿದ್ದಾರೆ. ಅವರಿಗೆ ನಮ್ಮ ಹಣ ಬೇಡ, ನಮ್ಮ ಸಹವಾಸವೇ ಬೇಡ. ನಾವು ಅವರನ್ನು ಸಂಧಿಸಿದಾಗ ನಮ್ಮ ವರ್ತನೆಯ ಮೇಲೆ ಅವರ ಪ್ರತಿಕ್ರಿಯೆ ಅವಲಂಬಿತವಾಗಿರುತ್ತದೆ. ಆದರೆ ಅವರಿಗಂತೂ ಈಗಲೂ ನವ ನಾಗರಿಕತೆಯ ತೆಕ್ಕೆಗೆ ಬಿದ್ದು ತಮ್ಮ ನೈಸರ್ಗಿಕ ಗುಣಗಳನ್ನು ಕಳೆದುಕೊಳ್ಳಲು ಕಿಂಚಿತ್ತೂ ಮನಸ್ಸಿನಲ್ಲ. ಮರುಳಾಗೂ ಇಲ್ಲ.

ಅದೇ ರೀತಿಯಲ್ಲಿ ನವನಾಗರಿಕತೆಯ ಮನುಷ್ಯರನ್ನು ಕಂಡರೆ ಎಳೆದುಕೊಂಡು ಹೋಗಿ ಬಲಿಹಾಕುವ ಬುಡಕಟ್ಟುಗಳೂ ಕೂಡ ಆಫ್ರಿಕಾದ ಹಲವು ಭಾಗಗಳಲ್ಲಿ ಈಗಲೂ ಇವೆ. ನಾಗರಿಕ ಸಮಾಜವು ಒಪ್ಪದಂತಹ ಘೋರ ಅಪರಾಧಗಳನ್ನು ಮಾಡುವಂತಹ ಬುಡಕಟ್ಟುಗಳೂ ಇವೆ.

ಬುಡಕಟ್ಟಿನ ಮೂಲಗಳು

ಬುಡಕಟ್ಟಿನ ಮೂಲಗಳನ್ನರಿತರೆ, ಸ್ಥಾಪಿತ ಧರ್ಮಗಳು ಮಾಡಿರುವ ಅವಾಂತರಗಳೂ, ಪುರೋಹಿತಶಾಹಿ ವರ್ಗಗಳು ಮಾಡಿರುವಂತಹ ಮೋಸಗಳೂ ಕೂಡಾ ನಮಗೆ ಅರ್ಥವಾಗುತ್ತಾ ಹೋಗುತ್ತದೆ. ಯಾವುದೇ ದೇಶದಲ್ಲಿ ಸಂಸ್ಕೃತಿಯಲ್ಲಿ ಹೊರಗಿನಿಂದ ಬಂದಂತಹ ಸಾಂಸ್ಕೃತಿಕ ದಾಳಿಯೇ ಸ್ಥಳೀಯ ದೇಸೀ ಸಂಸ್ಕೃತಿಯನ್ನು ನಾಶ ಮಾಡಿದ್ದೂ ಆಗಿರುತ್ತದೆ. ಅದನ್ನು ಗುರುತಿಸಿಕೊಳ್ಳುವುದು, ಅದರ ಮೌಲ್ಯಗಳನ್ನು ಉಳಿಸಿಕೊಳ್ಳಲು ಒಂದು ವಿಶೇಷವಾದ ಬದ್ಧತೆಯೂ, ಮೂಲಗುಣದ ಬಗ್ಗೆ ಒಲವನ್ನೂ ಹೊಂದಬೇಕಾಗುತ್ತದೆ. ನಮ್ಮ ದೇಶದಲ್ಲಿ ಅದನ್ನು ತಿಳಿಯಲು ಮೊದಲು ವೈದಿಕರು ಗಟ್ಟಿಗೊಳಿಸಿರುವ ಪರದೆಗಳನ್ನು ಹರಿಯಬೇಕಿದೆ. ■

ಹೊಗಳಿಕೆ ತೆಗಳಿಕೆ

ನಂಬಿ ಕೆಟ್ಟವರ ಸಂಘ (ರಿ)

ಬಿಹಾರದಲ್ಲೋ ಯೂಪಿಯಲ್ಲೋ ಎಲ್ಲೋ ಸತ್ತವರ ಸಂಘವಿದೆಯಂತೆ. ಆಸ್ತಿ ಲಪಟಾಯಿಸಲು ಅಥವ ಇನ್ಯಾವುದೋ ನೆಪಕ್ಕೆ ಸರಕಾರಿ ದಾಖಲೆಗಳಲ್ಲಿ ಕೆಲವರನ್ನು ಉದ್ದೇಶಪೂರ್ವಕವಾಗಿ ಸಾಯಿಸಲಾಗಿದ್ದು ಅವರೆಲ್ಲ ಸೇರಿ ಅಲ್ಲಿ ಸಂಘ ಕಟ್ಟಿಕೊಂಡಿದ್ದಾರಂತೆ. ಕರ್ನಾಟಕದಲ್ಲೂ ಕೆಲವರೆಲ್ಲ ಸೇರಿ ಹೊಸ 'ನಂಬಿ ಕೆಟ್ಟವರ ಸಂಘ' ಒಂದನ್ನು




ರಿಜಿಸ್ಟ್ರಾರ್ ಮಾಡಲು ಯೋಚಿಸುತ್ತಿದ್ದಾರಂತೆ. ಅದೆಲ್ಲೋ ಬೆಂಗಳೂರಿನಲ್ಲಿ ಪುಂಡಾಟ ಮಾಡಿಕೊಂಡಿದ್ದ ರುದ್ರೇಶ್ ಎನ್ನುವವನನ್ನು ಕೊಂದವರನ್ನು ಸೆರೆ ಹಿಡಿದ ಸ್ಪೀಡ್ ನೋಡಿದರೆ ನಮ್ಮ ಪೊಲೀಸ್ ಇಲಾಖೆಯ ಸ್ಪೀಡಿಗೆ ಭೇಷ್ ಎನ್ನಲೇ ಬೇಕು. ಸತ್ತವನು ಯಾವ ಗುಂಪಿಗೇ ಸೇರಿರಲಿ, ಕೊಲೆ ಯಾವತ್ತಿಗೂ ತಪ್ಪೇ. ಹಾಗಾಗಿ ಇದು ಖಂಡಿತ ಮೆಚ್ಚಲೇ ಬೇಕಾದ ಕಾರ್ಯ. ಆದರೆ ಇದೇ ತನಿಖಾ ವೇಗ ಹಿರಿಯ ವಿದ್ವಾಂಸ ಕಲ್ಬುರ್ಗಿಯವರ ಕೊಲೆ ಕೇಸಿನಲ್ಲಿ ಕೊಂಚವೂ ಆಗಲಿಲ್ಲ ಯಾಕೆ? ಎನ್ನುವುದೇ ಎಲ್ಲರ ಪ್ರಶ್ನೆ. ರಾಜ್ಯ ಹೊರ ರಾಜ್ಯಗಳ ಗಣ್ಯರು, ಜನಸಾಮಾನ್ಯರು ಈ ಬಗ್ಗೆ ಪ್ರತಿಭಟನೆ ನಡೆಸಿದರೂ ಕೂಡ ತನಿಖೆ ಒಂದಿಂಚೂ ಮುಂದಕ್ಕೆ ಕದಲಲೇ ಇಲ್ಲ. ರುದ್ರೇಶ್ ಕೊಲೆ ಆರೋಪಿಗಳು ಸುಲಭದಲ್ಲಿ ಸಿಕ್ಕಿದ್ದಿರಲಿಲ್ಲ. ಪ್ರಾಮಾಣಿಕ ತನಿಖೆಯಿಂದಷ್ಟೇ ಇದನ್ನು ಸಾಧಿಸಲಾಯಿತು. ಆದರೆ ಕಲ್ಬುರ್ಗಿ ಕುಟುಂಬ ಅವರ ಅನುಯಾಯಿಗಳು ಮಾಡಿದ ತಪ್ಪಾದರೂ ಏನು?

ಬಲಪಂಥೀಯ ವಿಚಾರಧಾರೆಯ ಸರಕಾರವಿದ್ದಾಗ ರಾಜಕೀಯ ಕಾರಣಗಳಿಗಾಗಿ ಇವೆಲ್ಲ ಅಸಾಧ್ಯದ ಮಾತೆನ್ನಬಹುದು. ಆದರೆ ಅದಕ್ಕೆ ವಿರುದ್ಧ ನಿಲುವೆನ್ನುವ ಸರಕಾರವಿತ್ತೆಂದು ಅದನ್ನು ನಂಬ ಹೋದವರಿಗೆ ಈಗ ಸಿಕ್ಕಿದ್ದಾದರೂ ಏನು? ಉಡುಪಿಯಲ್ಲಿ ದಲಿತರನ್ನು ಅವಮಾನಿಸುವ ಅಜೆಂಡಾ ಹೊಂದಿರುವ 'ಕನಕ ನಡೆ' ನಡೆಸಬಾರದು ಎಂದು ಮನವಿ ಸಲ್ಲಿಸಲಾಗಿದ್ದರೂ ಪೊಲೀಸ್ ಭದ್ರತೆಯಲ್ಲಿ ಅದು ನಡೆದೇ ಹೋಯಿತು. ಈ ಮಧ್ಯೆ ಪ್ರತಾಪ್ ಸಿಂಹನನ್ನು ಕೊಲ್ಲಲು ಬಂದಿದ್ದರು, ಪೇಜಾವರರ ವೆಬ್ ಸೈಟ್ ಪಾಕಿಗಳಿಂದ ಹ್ಯಾಕ್ ಆಯಿತು ಎಂಬ ಬಿಟ್ಟಿ ಸಿಂಪಥಿಯ ಪ್ರಚಾರಗಳು ಬೇರೆ. ವಿದ್ಯಾರ್ಥಿನಿಯರ ಟಾಯ್ಲೆಟ್ಟಿನಲ್ಲಿ ಕ್ಯಾಮರಾ ಇಟ್ಟ ಎಬಿವಿಪಿಯ ಸಂತೋಷನನ್ನು ಇದೊಂದು ತಮಾಷೆ ಪ್ರಕರಣವೆಂದು ಸುಲಭದಲ್ಲಿ ಕೈಬಿಟ್ಟರೆ ಕಟೀಲು ದೇವಿಯ ಬಗ್ಗೆ ಕೆಟ್ಟದಾಗಿ ಬರೆದ ಸಾಬಿಯನ್ನು ಎಳೆತಂದು ಬೆಂಡೆತ್ತಲಾಯಿತು.

ನಂಬಿಕೆ ಅರ್ಹವೆನಿಸಿದ ಸರಕಾರವಿದ್ದಾಗಲೂ ಕೂಡ ತನಿಖೆ ಹಾಗು ನ್ಯಾಯ ತೀರ್ಮಾನಗಳಲ್ಲಿ ತಾರತಮ್ಯ!!! ಹೀಗಾಗಿ ಇಲ್ಲಿ ಯಾರನ್ನು ನಂಬುವುದು, ಯಾರನ್ನು ನಂಬಬಾರದು ಎಂಬುದೇ ದೊಡ್ಡ ಪ್ರಶ್ನೆಯಾಗಿ ಎಲ್ಲರನ್ನು ಕಾಡತೊಡಗಿದೆ.

- ಓದುಗ, ಬೆಂಗಳೂರು



ಬಿಂಡಿಗನವಿಲೆ ಬೆಳಕು

ಬಿ.ಚಂದ್ರೇಗೌಡರು ಬಿಂಡಿಗನವಿಲೆಯ ಸಾಧಕರುಗಳ ಬಗ್ಗೆ ಬರೆದ ಲೇಖನವನ್ನು ಓದಿ ಹೆಮ್ಮೆಯೆನಿಸಿತು. ಯಾವ ಬದಿಯಿಂದಲೂ ಯಾವ ಕನ್ನಡ ಅರ್ಥವನ್ನೂ ಬಿಟ್ಟುಕೊಡದ (?) ವಿಚಿತ್ರ ಹೆಸರಿನ ಈ ಊರಿನಲ್ಲಿ ಎಲೆಮರೆಯ ಕಾಯಿಯಂತೆ ತಮ್ಮಷ್ಟಕ್ಕೇ ತಾವು ಈ ನಾಡಿಗೆ ಕೈಲಾದ ಕೊಡುಗೆ ನೀಡಿದ ಹಾಗು ನೀಡುತ್ತಿರುವ ಮಹನೀಯರುಗಳಿಗೆಲ್ಲ ಒಂದು ದೊಡ್ಡ ಸಲಾಮ್.

ತೀರಾ ಅಪರೂಪದಲ್ಲಿ ಅಪರೂಪಕ್ಕೆ ಆಗಾಗ ಪತ್ರಿಕೆಗಳಲ್ಲಿ ಕೇಳಿಬರುತ್ತಿದ್ದ ಈ ಊರು ನನ್ನಂತವರಿಗೆ ಹೆಚ್ಚು ಪರಿಚಿತವಿದ್ದದ್ದು (ಅದು ಮಂಡ್ಯದ ಊರೆಂದು ತಿಳಿದದ್ದೇ ಚಂದ್ರೇಗೌಡರ ಈ ಲೇಖನದಿಂದ) ಬಿಂಡಿಗನವಿಲೆ ಭಗವಾನ್ ಎನ್ನುವವರ ಮೂಲಕ. ಹತ್ತಿಪ್ಪತ್ತು ವರ್ಷಗಳ ಹಿಂದೆ ಇಂಟರ್ನೆಟ್ ಜನಮಾನಸದಲ್ಲಿ ಅಷ್ಟೊಂದು ಹಾಸುಹೊಕ್ಕಿರದ ವೇಳೆಯಲ್ಲಿ ತಮ್ಮ ಮಾಹಿತಿ ಪೂರ್ಣ ಚುಟುಕು ಬರಹಗಳಿಂದ ಈ ಭಗವಾನರು ಪ್ರಸಿದ್ಧರು. ಯಾವುದೋ ವಿಚಾರದ ಕುರಿತು ಮಾಹಿತಿಯನ್ನೆಲ್ಲ ಕಲೆಹಾಕಿ ಬೇಕಾಗುವಷ್ಟೇ ಅದನ್ನು ಸಂಕ್ಷಿಪ್ತಗೊಳಿಸಿ ಪತ್ರಿಕೆಗಳಿಗೆ ಅವರು ಆಗಾಗ ಬರೆಯುತ್ತಿದ್ದರು. ಸೊಣದಿಂದ ಹಿಡಿದು ಸಿಂಬಳದವರೆಗೆ ವಿಜ್ಞಾನದಿಂದ ಹಿಡಿದು ಚರಿತ್ರೆಯವರೆಗೆ



ಎಲ್ಲೆಲ್ಲಿಂದಲ್ಲ ವಿಚಾರಗಳನ್ನು ಅವರು ಓದುಗರಿಗೆ ಹೆಕ್ಕಿ ಕೊಡುತ್ತಿದ್ದರು. ಸರಿಯಾಗಿ ವಿಸ್ತರಿಸಿ ಬರೆದರೆ ಮೂರ್ನಾಲ್ಕು ಪುಟಗಳಾಗಬಹುದಾದ ಅವರ ಲೇಖನಗಳು ಅನವಶ್ಯಕ ವಿಚಾರಗಳಿಲ್ಲದೇ ಸರಳವಾಗಿ ಓದಿಸಿಕೊಂಡು ಹೋಗುತಿತ್ತು. ಯಾಕೋ ಇತ್ತೀಚೆಗೆ ಅವರ ಲೇಖನಗಳು ಎಲ್ಲೂ ಕಂಡುತಿಲ್ಲ, ಬಿಂಡಿಗನವಿಲೆ ಮಹಾನುಭಾವರುಗಳ ಪಟ್ಟಿಯಲ್ಲಿ ಈ ಭಗವಾನರ ಹೆಸರೂ ಖಂಡಿತ ಸೇರಲರ್ಹವಿದೆ ಎಂಬುದು ನನ್ನ ಭಾವನೆ.

- ಶಶಿ ಪುತ್ತೂರು, ದಕ

* ಬಿಂಡಿಗನ ವಿಲೆ ಅಂದರೆ ಬಿಂಡಿಗನ ಮನೆ ಎಂದರ್ಥವೇ!!? ಕನ್ನಡ, ತಮಿಳು, ತುಳು, ತೆಲುಗು ಇತ್ಯಾದಿ ದ್ರಾವಿಡ ಭಾಷೆಗಳಲ್ಲಿ ಇಲ್ಲು (ವಿಲ್ಲಾ) ಎಂದರೆ ಮನೆ ಎಂಬರ್ಥವಿದೆ. (ತುಳು ಹಾಗು ತೆಲುಗಿನಲ್ಲಿ ಇಂದಿಗೂ ಈ ಪದ ಬಳಕೆಯಿದ್ದರೆ ಇತರ ಭಾಷೆಗಳಲ್ಲಿ ಇದು ಮರೆಯಾಗಿದೆಯಾದರೂ ಕನ್ನಡದಲ್ಲಿ ಬಳಸುವ ಬಾಗಿಲು ಹಿತ್ತಿಲು ಪದಕ್ಕೆ ಹಳೆಗನ್ನಡದ ಈ ಇಲ್ಲೇ ಮೂಲವಂತೆ. ಬಾಯಿ ಇಲ್ಲು ಬಾಗಿಲಾದರೆ, ಇಲ್ಲಿನ ಹಿಂಭಾಗ ಹಿತ್ತಿಲು)

ದರೋಡೆಕೋರ ಪೇಶ್ವೆಗಳು ಧರ್ಮಾತ್ಮರು

ಕರ್ನಾಟಕ ಸರಕಾರ ಈ ವರ್ಷವೂ ಟಿಪ್ಪು ಸುಲ್ತಾನ್ ಜಯಂತಿಯನ್ನು ಅಧಿಕೃತವಾಗಿ ಆಚರಿಸಲು ನಿರ್ಧರಿಸಿದ ನಂತರ ಎಂದಿನಂತೆ ಹಿಂದೂತ್ವ ಸಂಘಟನೆಗಳಿಂದ ವಿರೋಧ ಬರುತ್ತಿದೆ. ಟಿಪ್ಪು ಅಷ್ಟು ಜನರನ್ನು ಕೊಂದ, ಇಷ್ಟು ಜನರನ್ನು ಮತಾಂತರಿಸಿದ ಎಂಬ ಆರೋಪಗಳು ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇವರು ಗಮನಿಸ ಬೇಕಾದುದೇನೆಂದರೆ ಹಿಂದೂ ಪುರಾಣದ ಪ್ರಕಾರ ಪರಶುರಾಮನು ವಿನಾಕಾರಣ ಕೋಟ್ಯಾಂತರ ಮುಗ್ಧ ಕ್ಷತ್ರಿಯರನ್ನು, ಸಣ್ಣ ಮಕ್ಕಳ ಸಹಿತ, ಕೊಂದು ಹಾಕಿದ, ಅದೂ 21 ಬಾರಿ ಭೂಮಂಡಲ ಸುತ್ತಿ ಕ್ಷತ್ರಿಯರನ್ನು ಹುಡುಕಿ ಹುಡುಕಿ ಕೊಂದ. ಇಂತಹಾ ಕ್ರೂರ ಪರಶುರಾಮನನ್ನು ದೇವರ ಅವತಾರವೆಂದು ಜನರು ಪೂಜಿಸುತ್ತಿದ್ದಾರಲ್ಲಾ, ಅದು ಸಮಂಜಸವೇ? (ಇದು ಕಾಲ್ಪನಿಕ ಕತೆಯಾದರೂ ಸಂಘಿಗಳು ಅದನ್ನು ಒಪ್ಪುತ್ತಿಲ್ಲ.)

ಟಿಪ್ಪು ಸಮಕಾಲೀನರಾದ ಮಹಾರಾಷ್ಟ್ರದ ಪೇಶ್ವೆಗಳನ್ನು ರಾಜನ ವೇಷದಲ್ಲಿರುವ ದರೋಡೆಕೋರರು ಎಂದೇ ಇತಿಹಾಸಕಾರರು ಬಣ್ಣಿಸುತ್ತಾರೆ. ಇವರು ತಮ್ಮದೇ ರಾಜ್ಯದಲ್ಲಿ ಹಿಂದೂ ದೇವಳಗಳನ್ನು ಹಾಗೂ ಧನಿಕ ವ್ಯಾಪಾರಿಗಳನ್ನು ಲೂಟಿ ಮಾಡಿ ವಿರೋಧಿಸಿದವರನ್ನು ಕೊಂದರು. ನೆರೆಹೊರೆಯ ರಾಜ್ಯಗಳಿಗೂ ದಾಳಿ ಮಾಡಿ ಅಲ್ಲಿಯ ಹಿಂದೂ ಧನಿಕರನ್ನು ಹಾಗೂ ವೈದಿಕ ದೇವಸ್ಥಾನಗಳನ್ನೂ ಘಜನಿ ಮಹಮ್ಮದ್ ಮಾದರಿಯಲ್ಲಿಯೇ ಲೂಟಿಗೈದರು. ಶೈವ ಬ್ರಾಹ್ಮಣರಾಗಿದ್ದ ಪೇಶ್ವೆಗಳು ನಮ್ಮ ಶೃಂಗೇರಿಗೂ ದಾಳಿ ಮಾಡಿ ಶೈವ ಮಠವನ್ನೇ ಲೂಟಿ ಮಾಡಿ ವಿರೋಧಿಸಿದ ಸ್ಥಳೀಯ ಕನ್ನಡಿಗ ಶೈವರನ್ನು ನಿರ್ದಯವಾಗಿ ಕೊಂದು ಹಾಕಿದರು. ಆದರೂ ಇಂದು ಈ ದರೋಡೆಕೋರ ಪೇಶ್ವೆಗಳನ್ನು ದೊಡ್ಡ ಧರ್ಮಾತ್ಮರು ಹಾಗೂ ಹಿಂದೂ ಧರ್ಮದ ರಕ್ಷಕರು ಎಂದು ಗೌರವಿಸುತ್ತಿರುವುದು ವಿಪರ್ಯಾಸವಲ್ಲವೇ?

ಇನ್ನು ಕೇವಲ ಕ್ಷತ್ರಿಯ (ಮರಾಠ) ರಾಜರ ಮಂತ್ರಿಗಳಾಗಿದ್ದ ಬ್ರಾಹ್ಮಣ ಪೇಶ್ವೆಗಳು ಕ್ಷತ್ರಿಯರನ್ನು ಬದಿಗೆ ಒತ್ತಿ ಹೇಗೆ ರಾಜರಾದರು ಎಂದು ಕೆದುಕಿದರೆ ಅಲ್ಲಿಯೂ ಮೋಸವೇ! ಹೈದರಾಲಿ ಮೈಸೂರು ಒಡೆಯರರಿಗೆ ದ್ರೋಹ ಬಗೆದು ರಾಜನಾದ ಎಂದು ಆರೋಪಿಸುವವರು ಗಮನಿಸ ಬೇಕಾದುದೇನೆಂದರೆ ಮರಾಠ ರಾಜ್ಯ ಸ್ಥಾಪಕ ಶಿವಾಜಿಯ ಮೊಮ್ಮಗನಾದ ಒಂದನೇ ಶಾಹೂ ಮಹಾರಾಜನ ಆಡಳಿತ ದುರ್ಬಲವಾಗುತ್ತಿದ್ದಾಗ ಹಾಗೂ ತನ್ನ ಚಿಕ್ಕಮ್ಮ ತಾರಾರಾಣಿಯೊಟ್ಟಿಗೆ ಶಾಹೂರಾಜ ಮರಾಠಾ ರಾಜ್ಯದ ಪೂರ್ಣ ಅಧಿಕಾರಕ್ಕಾಗಿ ಕುಟುಂಬದೊಳಗೇ ಆಂತರಿಕ ಜಗಳ ನಡೆಸುತ್ತಿದ್ದುದರ ದುರ್ಲಾಭ ಪಡೆದು ಮಂತ್ರಿಯಾಗಿದ್ದ ಒಂದನೇ ಬಾಜಿರಾವ್ ಭಟ್ (ಪೇಶ್ವೆ) ಶಾಹೂ ಮಹಾರಾಜನನ್ನು ಸತಾರ ಅರಮನೆಗೆ ಸೀಮಿತಗೊಳಿಸಿ (ಗೃಹಬಂಧದಲ್ಲಿರಿಸಿ) ಶಿವಾಜಿಯ ಚಿಕ್ಕ ಸೊಸೆ ತಾರಾಬಾಯಿಗೆ ದ್ರೋಹ ಬಗೆದು ಅವಳನ್ನು ಕೊಲ್ಹಾಪುರಕ್ಕೆ ಓಡಿಸಿ ಮರಾಠ ರಾಜ್ಯದ ಆಡಳಿತ ಕೈವಶ ಮಾಡಿಕೊಂಡು ತನ್ನನ್ನು ಶಾಹೂರಾಜನ ಏಕೈಕ ಪ್ರತಿನಿಧಿ (ಪೇಶ್ವೆ) ಎಂದು ಬಾಜಿರಾವ್ ಘೋಷಿಸಿಕೊಂಡನು.

ಪರ್ಷಿಯನ್ ಭಾಷೆಯಲ್ಲಿ ಪೇಶ್ವೆ ಅಂದರೆ ಮಹಾಮಂತ್ರಿ ಅಥವಾ ರಾಜಪ್ರತಿನಿಧಿ ಎಂದಾಗುತ್ತದೆ. (ಇಂಗ್ಲಿಷಿನ ವಾಯ್ಸ್‌ರಾಯ್ ಹುದ್ದೆಗೆ ಸಮನಾದುದು). ಪೇಶ್ವೆಗಳ ಮೂಲ ಕುಲನಾಮ ಭಟ್-ದೇಶಮುಖ್ ಆಗಿತ್ತು, ತಾವು ಮರಾಠ ಸಾಮ್ರಾಜ್ಯವನ್ನು ಪ್ರತಿನಿಧಿಸುವವರು ಎನ್ನುವುದಕ್ಕೆ ಅವರು ಈ ಪರ್ಷಿಯನ್ ಶಬ್ಧ ಪೇಶ್ವೆ ಬಳಸಿದರು. ನಂತರ ಈ ಪರ್ಷಿಯನ್ ಶಬ್ಧ ಪೇಶ್ವೆಯೇ ಹಲವು ಮರಾಠಿ ಚಿತ್ಪಾವನ್ ಬ್ರಾಹ್ಮಣ ಮತ್ತು ದೇಶಸ್ಥ ಬ್ರಾಹ್ಮಣರ ಕುಲನಾಮವಾಯಿತು. ನಂತರದ ಕಾಲದಲ್ಲಿ ಶಿವಾಜಿ ಕುಟುಂಬದ ಮುಂದಿನ ತಲೆಮಾರಿನವರು ಪೇಶ್ವೆಗಳಿಂದ ತಮ್ಮ ರಾಜ್ಯ ಮರಳಿ ಪಡೆಯಬಾರದು ಎಂದು ಮರಾಠಾ ಜಾತಿಯವರನ್ನು ಈ ಬ್ರಾಹ್ಮಣ ಪೇಶ್ವೆಗಳು ಕೇವಲ ಸೈನಿಕರಾಗಿ ಇಟ್ಟರೇ ಹೊರತು ಅವರಿಗೆ ಮೇಲಿನ ಸೇನಾಪತಿ ಅಥವಾ ಮಹಾಮಂತ್ರಿ ಹುದ್ದೆ ಕೊಡಲೇ ಇಲ್ಲ. ಕೇವಲ ಚಿತ್ಪಾವನ್ ಮತ್ತು ದೇಶಸ್ಥ ಬ್ರಾಹ್ಮಣರು ಹಾಗೂ ಕಾಯಸ್ಥ ಜಾತಿಯವರನ್ನು ಮಾತ್ರ ಮೇಲಿನ ಅಧಿಕಾರಿ ಮತ್ತು ದಂಡನಾಯಕ ಹುದ್ದೆಯಲ್ಲಿ ಪೇಶ್ವೆಗಳು ನೇಮಿಸಿದರು.

ಹಿಂದೂಗಳೇ ಹಿಂದೂಗಳಿಗೆ ದ್ರೋಹ ಬಗೆದ ಈ ಎಲ್ಲಾ ಕಹಿ ಸತ್ಯಗಳನ್ನು ಹಿಂದೂತ್ವ ಇತಿಹಾಸಕಾರರು ಮುಚ್ಚಿಟ್ಟು ಕೇವಲ ಟಿಪ್ಪು ಸುಲ್ತಾನ್ ಮತ್ತು ಹೈದರಾಲಿ ಮಾಡಿರುವ ತಥಾಕಥಿತ ವಿಶ್ವಾಸ ದ್ರೋಹಗಳನ್ನು ಮಾತ್ರ ರಾಜಕೀಯ ಉದ್ದೇಶಕ್ಕಾಗಿ ಎತ್ತಿ ತೋರಿಸುತ್ತಿದ್ದಾರೆ ಅಷ್ಟೇ.

ಇವತ್ತು ರೇಷ್ಮೆ ಉತ್ಪಾದನೆಯಲ್ಲಿ ದೇಶದಲ್ಲಿ ಕರ್ನಾಟಕ ನಂಬರ್ ಒನ್ ರಾಜ್ಯವಾಗಿದ್ದರೆ ಅದಕ್ಕೆ ಕಾರ[ಣ ಟಿಪ್ಪು] ಸುಲ್ತಾನ್ ಹಾಕಿದ ಅಡಿಪಾಯ. ಆಗ ಭಾರತದ [...] ಭಾಗದಲ್ಲೂ ರೇಷ್ಮೆ ನೂಲು ತಯಾರಿಸುವ [...] ಯಾರಿಗೂ ಗೊತ್ತಿರಲಿಲ್ಲ, ಒಮ್ಮೆ ಚೀನಾದ ವ್ಯಾಪಾ[ರಿ] ಭಾರತಕ್ಕೆ ಬಂದಿದ್ದಾಗ ಅವನು ದೇಶದ ವಿವಿಧ [...] ಹೋಗಿ ತಾನು ಚೀನಾದಿಂದ ತಂದಿದ್ದ ರೇಷ್ಮೆ [...] ರಾಜರಿಗೆ-ಸುಲ್ತಾನರಿಗೆ ಉಡುಗೊರೆಯಾಗಿ ಕೊ[...] ಭಾರತದಲ್ಲಿದ್ದ ನೂರಾರು ರಾಜರು-ನವಾಬರಲ್ಲಿ [...] ರೇಷ್ಮೆ ಹೇಗೆ ತಯಾರಿಸುತ್ತಾರೆ ಎಂಬ[...] ತಲೆಕೆಡಿಸಿಕೊಳ್ಳಲಿಲ್ಲ. ಕೇವಲ ಟಿಪ್ಪು ಮಾತ್ರ ರೇಷ್ಮೆ [...] ನಮ್ಮ ದೇಶದಲ್ಲಿಯೇ ಯಾಕೆ ಸಾಧ್ಯವಿಲ್ಲ ಎಂದು [...] ಆ ಚೀನಾದ ವ್ಯಾಪಾರಿ ಹಿಂದೆ ಹೋಗುವಾಗ ಅವ[...] ಕನ್ನಡ ನಾಡಿನ ಕೆಲವು ಅಧಿಕಾರಿಗಳನ್ನು ಹಾಗೂ ನೇ[...] ಚೀನಾಕ್ಕೆ ಕಳುಹಿಸಿ ಅಲ್ಲಿ ರೇಷ್ಮೆ ಹುಳು ಸಾಕಾಣಿಕೆ [...] ನೂಲು ತಯಾರಿಕೆ ವಿಧಾನ ಕಲಿತುಕೊಂಡು ಬ[...] ಹೇಳಿ ಕಳುಹಿಸಿದ. (ಮೋದಿಯ ಮೇಕ್ ಇನ್ ಇಂ[ಡಿಯಾ] ಮೂಲ ಪ್ರೇರಣೆ ಟಿಪ್ಪು!) ಆಗಿನ ಕಾಲದಲ್ಲಿ [...] ರೇಷ್ಮೆ ಹುಳು ಸಾವಿರಾರು ಮೈಲಿ ದೂರದ ಚೀ[ನಾದಿಂದ]



ತಿಂಗಳುಗಟ್ಟಲೇ ಪ್ರಯಾಣ ಮಾಡಿ ರಸ್ತೆ ಮಾ[...] ಮೈಸೂರಿಗೆ ತರುವುದು ಸಾಧ್ಯವಿರಲಿಲ್ಲ, ಅ[...] ಹೋಗುವ ಭಯವಿತ್ತು, ಅದಕ್ಕಾಗಿ ಇನ್ನೂ [...] ಅವಸ್ಥೆಯಲ್ಲಿಯೇ ಇರುವ ರೇಷ್ಮೆ ಗೂಡುಗಳ[...] ಚೀನಾದಿಂದ ತರಿಸಿಕೊಂಡನು, ಜತೆಗೆ ಹಿಪ್ಪ[ು ನೇರಳೆ] ಗಿಡದ ಬೀಜಗಳನ್ನೂ ಚೀನಾದಿಂದ ಟಿಪ್ಪು ತ[...] ರಾಜ್ಯದಲ್ಲಿ ರೇಷ್ಮೆ ಬೆಳೆಗೆ ಅಡಿಗಲ್ಲು ಹಾಕಿದನು. [...] ಹಳೆ ಮೈಸೂರು ಭಾಗದ ರೈತರು ಇಂದು ರೇಷ್ಮೆ [...] ಸಮೃದ್ಧಿ ಹೊಂದಿ ನೂರಾರು ಪೀಳಿಗೆಯಿಂದ [...] ಋಣಿಯಾಗಿದ್ದಾರೆ. ಟಿಪ್ಪು ಹೊರತುಪಡಿಸಿ ಬೇರೆ [...] ಭಾರತದ ರಾಜ ತಾನು ಸತ್ತ ನಂತರವೂ [...] ಶತಮಾನಗಳ ಕಾಲ ತನ್ನ ಪ್ರಜೆಗಳ ಸುಖಕರ [...] ಸುವ್ಯವಸ್ಥೆ ಮಾಡಿ ಹೋದ ಬೇರೆ ಉದಾಹರ[ಣೆ ...]

ಇಂದು ಇಡೀ ಭಾರತದಲ್ಲಿ ರೇಷ್ಮೆ ಸೀರೆ[...] ಒಬ್ಬಳಾದರೂ ಮಧ್ಯಮ ವರ್ಗ ಅಥವಾ ಮೇ[...] ಮಹಿಳೆ ಇದ್ದಾಳೆಯೇ? ಯುವತಿಯರಿಗಿಂತ [...] ನಡುವಯಸ್ಸಿನವರು ಹಾಗೂ ವಯಸ್ಸಾದವರಿ[ಗೆ] ಸೀರೆಯ ಹುಚ್ಚು ಇದೆ! ಟಿಪ್ಪು ಕಾಲದಲ್ಲಿ ರೇಷ್ಮೆ [...] ಮೊದಲ ಬಾರಿಗೆ ತಯಾರಾದಾಗ ಬ್ರಾಹ್ಮಣರು[...] ಇತರ ಸ್ವಾಹಾರಿ ಮೇಲ್ಜಾತಿಯವರು, ಈ ರೇಷ್ಮೆ ಬ[...] ಹಾವು ತಿನ್ನುವ ಚೀನಿಯರು ಕಂಡು ಹುಡು[...] ಹಾಗೂ ಲಕ್ಷಾಂತರ ಹುಳುಗಳನ್ನು ಜೀವಂತ [...] ತಯಾರಿಸಿದ್ದರಿಂದ ಆ ಬಟ್ಟೆಯಲ್ಲಿ ಭಯಂಕರ [...] ಗುಣ ತುಂಬಿರುತ್ತದೆ, ಹಾಗಾಗಿ ಅದನ್ನು ಹಿಂದೂ[...] ಯಾವುದೇ ಪವಿತ್ರ ಕಾರ್ಯಕ್ಕೆ ಧರಿಸುವುದು[...] ಎಂದು ಧಾರ್ಮಿಕ ನೇತಾರರು ನಿರ್ಣಯಿಸಿದ್ದರು[...] ಕಾಲಾಂತರದಲ್ಲಿ ಈ ಮಡಿವಂತಿಕೆ ಬಿಟ್ಟುಹೋ[...] ಈಗ ಮಹಿಳೆಯರು ಬಿಡಿ ದೇವಸ್ಥಾನಗಳ ಅ[...] ರೇಷ್ಮೆ ಸೀರೆಯನ್ನು ಎರಡು ತುಂಡು ಮಾಡಿ[...] ಸೊಂಟದ ಕೆಳಗೆ ಪಂಚೆಯಂತೆಯೂ ಉಳಿದರ್ಧ [...] ಶಾಲಿನಂತೆ ಸುತ್ತಿಕೊಂಡೇ ದೇವರ ಪೂಜೆ ಮಾ[...] ದೇವರ ಮೂರ್ತಿಗೂ ಈ ನಾನ್-ವೇಜಿಟೇ[ರಿಯನ್] ಸೀರೆಯನ್ನೇ ಅರ್ಚಕರು ತೊಡಿಸುವುದು. ಗೋ[...] ತಿನ್ನುವ ಮುಸ್ಲಿಮರು ಬೆಳೆದ ರೇಷ್ಮೆಯೂ [...] ಸೇರಿರುತ್ತದೆ. ಇದೆಲ್ಲಾ ಹಿಂದುತ್ವವಾದಿಗಳಿಗೆ ಗೊತ್ತ[...] ರೇಷ್ಮೆ ಬಟ್ಟೆಗಳನ್ನು ಮಂಗಳ ಕಾರ್ಯದಲ್ಲಿ ಉಡ[...] ನಿಷೇಧಿಸಿದರೆ ಈ ಹಿಂದುತ್ವವಾದಿ ಗಂಡಸರಿ[ಗೆ] ಮನೆಯ ಹೆಂಗಸರೇ ಬಹಿಷ್ಕಾರ [...] ಭಯವಿದ್ದುದರಿಂದ ಸಂಘಿಗಳು ಈ ವಿಷಯದಲ್ಲಿ [...] ಧಾರ್ಮಿಕ ನಾಟಕ ಆಡುವ ಧೈರ್ಯ ತೋರುತ್ತಿಲ[್ಲ ...] ವೇಳೆ ರೇಷ್ಮೆ ಉತ್ಪಾದಿಸುವ ರೈತರೆಲ್ಲಾ ನೂರಕ್ಕೆ [ನೂರು] ಮುಸ್ಲಿಮರಾಗಿದ್ದರೆ ಆಗ ಸಂಘಿಗಳ ತಲೆಯಲ್ಲಿ [...] ಕಾರಣ ನೀಡಿ ರೇಷ್ಮೆ ಬಟ್ಟೆ ನಿಷೇಧಿಸಲು ಏನಾದ[ರೂ] ಪ್ರಳಯಾಂತಕ ತಂತ್ರ ಹೊಳೆಯುತ್ತಿತ್ತೇನೋ!

- ಪ್ರವೀಣ್ ಎಸ್ ಶೆಟ್ಟಿ, ಮಂ[ಗಳೂರು]



ಕಾಲ್‌ಗರ್ಲ್ ಪಾತ್ರ ಒಪ್ಪಲಾರೆ: ಹರಿಪ್ರಿಯಾ

ವಿಜಯ ಪ್ರಸಾದ್ ನಿರ್ದೇಶನದ 'ನೀರ್‌ದೋಸೆ' ಸಿನಿಮಾದಲ್ಲಿ ಹರಿಪ್ರಿಯಾ ಕಾಲ್‌ಗರ್ಲ್ ಪಾತ್ರ ನಿರ್ವಹಿಸಿದ್ದರು. ಪಾತ್ರದ ಬಗ್ಗೆ ಮೆಚ್ಚುಗೆಯೂ ವ್ಯಕ್ತವಾಗಿತ್ತು, ಚಿತ್ರವು ಈಗ ಐವತ್ತು ದಿನಗಳನ್ನು ಪೂರೈಸುತ್ತಿದೆ. ಈ ಸಂದರ್ಭದಲ್ಲಿ ಅವರು ಆ ಪಾತ್ರದ ಬಗ್ಗೆ ಮಾತಾಡಿದ್ದಾರೆ. ಮತ್ತೆ ಅಂತಹ ಕ್ಯಾರೆಕ್ಟರ್ ಅನ್ನು ಒಪ್ಪಿಕೊಳ್ಳಲಾರೆ ಅಂದಿದ್ದಾರೆ. ಅವರೊಂದಿಗಿನ ಮಾತುಕತೆ ಇಲ್ಲಿದೆ.

ಜಗ್ಗೇಶ್ ನಟನೆಯ 'ನೀರ್‌ದೋಸೆ' ಚಿತ್ರದಲ್ಲಿ ರಿಪ್ರಿಯಾ ಅವರದ್ದು ಬೋಲ್ಡ್ ಪಾತ್ರ. ಅದು ಕಾಲ್‌ಗರ್ಲ್ ್ಯರೆಕ್ಟರ್ ಆಗಿದ್ದರಿಂದ ಕೊಂಚ ಎಕ್ಸ್‌ಪೋಸ್ ಮಾಡುವುದು ಡ ಅನಿವಾರ್ಯವಾಗಿತ್ತಂತೆ. ಚಿತ್ರ ರಿಲೀಸ್ ಆಗಿ ಈಗ ವತ್ತು ದಿನಗಳನ್ನು ಪೂರೈಸಿದೆ. ಶಿವರಾಜ್‌ಕುಮಾರ್ ರಿದಂತೆ ಅನೇಕ ಸ್ಟಾರ್ ನಟರು ಈ ಪಾತ್ರವನ್ನು ರಿಪ್ರಿಯಾ ನಿರ್ವಹಿಸಿದ್ದಕ್ಕಾಗಿ ಅಭಿನಂದಿಸಿದ್ದಾರೆ. ಚ್ಚುಗೆಯ ಮಾತುಗಳನ್ನೂ ಆಡಿದ್ದಾರೆ. ಆದರೂ, ಇಂತಹ ಾತ್ರಗಳಲ್ಲಿ ಮತ್ತೆ ತಾವು ಎಂದಿಗೂ ಕಾಣಿಸಿಕೊಳ್ಳಲಾರೆ ಂದಿದ್ದಾರೆ ಹರಿಪ್ರಿಯಾ.

* ಸ್ಟಾರ್ ನಟರ ಚಿತ್ರಗಳೇ ಒಂದು ವಾರಕ್ಕೆ ಥಿಯೇಟರ್‌ನಿಂದ ಎತ್ತಂಗಡಿ ಆಗುತ್ತಿವೆ. ನಿಮ್ಮ 'ನೀರ್‌ದೋಸೆ' ಸಿನಿಮಾ ಐವತ್ತು ದಿನಗಳನ್ನು ಪೂರೈಸಿದೆ. ನಿಮ್ಮ ಶ್ರಮ ಸಾರ್ಥಕವಾಯಿತು ಅಂತ ಅನಿಸ್ತಿದೆಯಾ?

ಖಂಡಿತಾ ಶ್ರಮ ಸಾರ್ಥಕವಾಯಿತು ಅನಿಸುತ್ತಿದೆ. ಈ ಪಾತ್ರವನ್ನು ಒಪ್ಪಿಕೊಳ್ಳುವಾಗ ನನಗೂ ಒಂದು ರೀತಿಯಲ್ಲಿ ಭಯವಿತ್ತು. ಅದು ಕಾಲ್‌ಗರ್ಲ್ ಪಾತ್ರವಾಗಿದ್ದರಿಂದ ಜನರು ಹೇಗೆ ಸ್ವೀಕರಿಸುತ್ತಾರೆ ಅನ್ನುವ ಭಯವೂ ಇತ್ತು. ನಿರ್ದೇಶಕರ ಮೇಲಿನ ನಂಬಿಕೆಯಿಂದಾಗಿ ಒಪ್ಪಿಕೊಂಡೆ. ಅವರು ಕೂಡ ತಾವು ಹೇಳಿದಂತೆ ಪಾತ್ರವನ್ನು ಕಟ್ಟಿಕೊಟ್ಟರು.

* ಪಾತ್ರದ ಬಗ್ಗೆ ಇಂಡಸ್ಟ್ರಿ ಅವರ ಪ್ರತಿಕ್ರಿಯೆ ಹೇಗಿತ್ತು?

ನನಗೆ ಭಯ ಇದ್ದದ್ದೇ ಇಂಡಸ್ಟ್ರಿ ಬಗ್ಗೆ. ಈವರೆಗೂ ನಾನು ಹೋಮ್ಲಿ ಪಾತ್ರವನ್ನು ಮಾಡಿಕೊಂಡು ಬಂದವಳು. ಸಡನ್ನಾಗಿ ಕಾಲ್‌ಗರ್ಲ್ ಪಾತ್ರ ಅಂದಾಗ ಅದನ್ನು ಯಾವ ರೀತಿಯಲ್ಲಿ ಸ್ವೀಕರಿಸುತ್ತಾರೆ ಅನ್ನುವ ಗೊಂದಲ ನನ್ನೊಳಗೆ ಇತ್ತು. ಮೊದಲ ಬಾರಿಗೆ ಪಾತ್ರದ ಬಗ್ಗೆ ಬಹಿರಂಗವಾಗಿ ಮಾತಾಡಿದ್ದು ಶಿವರಾಜ್‌ಕುಮಾರ್. ಅವರೇ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದರಿಂದ ಧೈರ್ಯ ಬಂತು. ನಂತರ ಅನೇಕರು ಪಾತ್ರದ ಬಗ್ಗೆ ಹೊಗಳಿದರು. ಒಳ್ಳೆಯ ನಿರ್ಧಾರ ಅಂತಾನೂ ಬೆನ್ನುತಟ್ಟಿದರು.

* ಈ ಚಿತ್ರದ ನಂತರ ಮತ್ತೆ ನಿಮ್ಮನ್ನು ಇಂಥದ್ದೇ ಪಾತ್ರಗಳು ಹುಡುಕಿಕೊಂಡು ಬಂದವಾ?

ಅದು ಸಹಜ. 'ಉಗ್ರಂ' ಸಿನಿಮಾ ರಿಲೀಸ್ ಆದ ಸಂದರ್ಭದಲ್ಲೂ ಇದೇ ರೀತಿಯಾಗಿತ್ತು, ಅದೇ ಪಾತ್ರವನ್ನು ಹೋಲುವಂತಹ ಕತೆಗಳನ್ನು ಕೇಳಬೇಕಾಯಿತು. 'ನೀರ್‌ದೋಸೆ' ಸಿನಿಮಾ ರಿಲೀಸ್ ಆದಾಗ ಪಾತ್ರಗಳು



ಮಾತ್ರವಲ್ಲ, ಒಂದೇ ಒಂದು ಸಾಂಗ್‌ನಲ್ಲಿ ಡಾನ್ಸ್ ಮಾಡಿ ಅಂತಾನೂ ಕೇಳಿದರು. ನಾನು ಒಪ್ಪಲಿಲ್ಲ. ಮತ್ತೆ ಆ ರೀತಿಯ ಪಾತ್ರವನ್ನು ನಾನು ನಿರ್ವಹಿಸಲಾರೆ ಎಂದು ತಿರಸ್ಕಾರ ಮಾಡಿದೆ.

* ಹಾಗಾದರೆ ಮತ್ತೆ ನೀವು ಕಾಲ್‌ಗರ್ಲ್ ಪಾತ್ರ ಮಾಡಲ್ಲವಾ?

ಖಂಡಿತಾ ಮಾಡಲ್ಲ. ಕಾಲ್‌ಗರ್ಲ್ ಪಾತ್ರವನ್ನು ನಿರ್ವಹಿಸುವಲ್ಲಿ ನಾನು ಸೋತಿದ್ದರೆ ಮತ್ತೆ ಆ ಕುರಿತು ಯೋಚನೆ ಮಾಡಬಹುದಿತ್ತು, ನಾನು ಗೆದ್ದಿದ್ದೇನೆ. ಅದೇ ಪಾತ್ರ ಮಾಡಬೇಕೆಂದರೆ ದುಡ್ಡಿಗಾಗಿ ಮಾಡಬೇಕು. ನನಗೆ ಅದರ ಅಗತ್ಯವಿಲ್ಲ, ಸಿನಿಮಾ ಇಂಡಸ್ಟ್ರಿಯಲ್ಲಿ ಇರುವಷ್ಟು ಕಾಲ ವಿಭಿನ್ನ ಪಾತ್ರಗಳನ್ನೇ ಮಾಡಬೇಕು ಅಂದುಕೊಂಡಿದ್ದೇನೆ. ಹಾಗಾಗಿ ರಿಪೀಟ್ ಮಾಡಲಾರೆ.

* ನಿಮಗೆ ಸಕ್ಸೆಸ್ ಸಿಕ್ಕಿದ್ದರೂ ಕೈಯಲ್ಲಿರುವ ಚಿತ್ರಗಳು ಮಾತ್ರ ಒಂದೇ. ಯಾಕೆ ಬಿಝಿ ಆಗಲಿಲ್ಲ?

ನಾನು ಮೊದಲಿನಿಂದಲೂ ಹಾಗೆಯೇ. ಸಿಕ್ಕ ಸಿಕ್ಕ ಪಾತ್ರಗಳನ್ನು ಒಪ್ಪಿಕೊಳ್ಳಲಾರೆ. ಈಗಾಗಲೇ ಅನೇಕ ಕತೆಗಳನ್ನು ಕೇಳಿದ್ದೇನೆ. 'ಭರ್ಜರಿ' ಸಿನಿಮಾದ ಶೂಟಿಂಗ್ ಮಧ್ಯೆಯೂ ನಾನು ಕತೆಗಳನ್ನು ಓದುತ್ತಿದ್ದೇನೆ. ಸಿನಿಮಾ ಮಾಡಲೇಬೇಕು ಅಂತ ಒಪ್ಪಿಕೊಂಡಿದ್ದರೆ, ವಾರಕ್ಕೊಂದು ಸಿನಿಮಾಗೆ ಸಹಿ ಮಾಡುವಷ್ಟು ಕತೆಗಳು ಇದ್ದವು. ನನಗೆ ಆ ರೀತಿಯಲ್ಲಿ ಕೆಲಸ ಮಾಡಲು ಇಷ್ಟವಿಲ್ಲ.

* ಕನ್ನಡ ಸಿನಿಮಾ ರಂಗದಲ್ಲಿ ಈಗ ಹೊಸಬರ ಚಿತ್ರಗಳೇ ಗೆಲುವು ಸಾಧಿಸುತ್ತಿವೆ. ಈ ಕುರಿತು ಏನನಿಸುತ್ತದೆ?

ನಮ್ಮ ಸಿನಿಮಾ ರಂಗದ ಬಗ್ಗೆ ಹೆಮ್ಮೆ ಅನಿಸುತ್ತದೆ. ಹೊಸಬರ ಸಿನಿಮಾಗಳೇ ಸದ್ದು ಮಾಡುತ್ತಿರುವುದನ್ನು ನಾನೂ ಗಮನಿಸಿದ್ದೇನೆ. ಹಾಗಾಗಿ ಹೊಸಬರು ಕತೆ ಹೇಳುತ್ತೇನೆ ಅಂತ ಬಂದಾಗ, ಯಾವುದೇ ಕಾರಣಕ್ಕೂ ಆಗಲ್ಲ ಅಂದಿಲ್ಲ. ಅವರಿಗಾಗಿಯೇ ಸಮಯ ಹೊಂದಿಸಿಕೊಂಡು ಕತೆ ಕೇಳಿದ್ದೇನೆ.

* ಈಗ ಧ್ರುವ ಸರ್ಜಾ ಅವರ 'ಭರ್ಜರಿ' ಸಿನಿಮಾದಲ್ಲಿ ನಟಿಸುತ್ತಿದ್ದೀರಿ. ನಿಮ್ಮದು ಎಂತಹ ಪಾತ್ರ?

ಉತ್ತರ ಕರ್ನಾಟಕದ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಅವಳು ತುಂಬಾನೇ ಮುಗ್ಧೆ. ಎಲ್ಲವನ್ನೂ ನಂಬುವಂತಹ ಕ್ಯಾರೆಕ್ಟರ್. ಇದು ಕೂಡ ಹೊಸ ಬಗೆಯ ಪಾತ್ರ. ■


ಸಂದೇಶ್ 2 ಸೋಲ್ಜರ್ಸ್

ಣ್ಣಾ
್ಯಾಪಿ ದೀಪಾವಳಿ, ನಿಂಗೆ
್ ಜೊತೆ ಇರೊ ಎಲ್ಲಾರಿಗೆ
ಬ್ಬ, ಎರಡ್ ಮಾತ್ ಹೇಳಿ ಸೈನ್ಯದವ್ಕೆ
ಂದ್ರು, ನಂ ಅಧಿನಾಯಕರು
್ಸ ಬಗ್ಸೆ ಮುಗ್ಸಿ ಮೆಸೇಜ್ ಹಾಕಕ್ಕೆ ತಡಾಯ್ತು
ದಾರಸ್ಕ..

ತ್ತೇನಿಲ್ಲ, ನಂದು
ಂದೆಲ್ಡು ಮೂರು ಮಾತವೆ
ಂಗೆಹುಳ್ದಂಗೆ ನನ್ ಕೊರೀತಾ ಅವೆ
್ ತಲ್ಗು ಸಾಗಾಕಿ ಹಗುರಾಯ್ತಿನಿ ಕೇಳು..

ದೇಶ 1899ನೇ ಇಸವಿಲ್ಲಿ
ದ್ದಾರೋ ಬುದ್ಧಿ ಇಲ್ದ್ ಬ್ರಿಟಿಷ್ರು
ಂದು ಸೀಮೆಸುಣ್ಣ ತಗಂಡು
ೆ ಎಳ್ದು
ದ್ರು ಈಚ್ಗೆ ಇಂಡ್ಯ ಆಚ್ಗೆ ಪಾಕಿಸ್ತಾನ
ಾ ಇದೇ ಗಡಿ' ಅಂದ್ರಂತೆ
ಗೆರೆ ಅಂಗೇ ಹರಡ್ಕಂತ ಹರಡ್ಕಂತ
ರುಕೇರಿಸೆಲ್ಲ ಪಾಲು ಮಾಡ್ತ
ಇಂಡ್ಯ ನೀ ಪಾಕಿ ಅಂತ
ಗೊಳ್ಗೆ ಬಡದಾಟ ಹುಟ್ಸಿರುವಾಗ
ದ್ರು ಮನೆ ಕಾಯ್ಗೋಗ,
ಯಾನಣ ಅದು ನೀ ಅದ್ನ ಕಾಯದು?

ಈಚ್ಗೊ ಆಚ್ಗೊ, ಸಕಲ ಜೀವರಾಶಿನು
ಿದ್ ಮೇಲೇ ನಡಿಬೇಕು
ಾಟ್ಗ್ ತಿಂಡ ಬದುಕ್ಬೇಕು



ಹೇತು ಹಗುರಾಗ್ಬೇಕು
ಗೆರೆ ಈಚ್ಗೊ ಆಚ್ಗೊ
ಭಾಂಬು ಬಿದ್ರೆ ಸಕಲ ಜೀವರಾಶಿನು
ಒಮ್ಮುಕ್ಲೆ ಗೊಟಕ್ ಅಂದ್ಬಿಡಬೇಕು
ಗೆರೆ ಈಚ್ಗೊ ಆಚ್ಗೊ
ಬಿತ್ತಿದ್ದೆಲ್ಲ ಬೆಳೆ, ಕೀಳ್ದೆ ಇದ್ದದ್ದು ಕಳೆ
ಅಂತನುಸ್ಕಳ್ಬೇಬೇಕು..
ಅಂಗಿರತ ಆ ಗೆರೆಗೆ
ಆರ್ತವೂ ಇಲ್ಲ, ಉಪಯೋಗ್ವು ಇಲ್ಲ ಅಂತಾದ್ಮೇಲೆ
ಆ ಯಮ್ ಚಳೀಲಿ ಅಲ್ಲೇನ್ಮಾಡಿ ಸುಮ್ನೆ,
ಮನೆಗೋಗಿ ಗೇಯ್ಸು ಉಂಡು ಮಲಿಕಳದಲ್ವೆ?

ತಗಾ, ಇದೊಂದ್ ದೀಪ ಆಚ್ಚು.

ಆಮ್ಯಾಲೆ, ಎರಡ್ನೆ ಇಚಾರ.
ನಂ ದೇಸ್ದ ಅರ್ಧಬರ್ಧ ಜನ್ಕೆ
ಹೊಟ್ಟೆಗಿಲ್ಲ ಬಟ್ಟೆಗಿಲ್ಲ
ಹಾಸಿದ್ದು ಹೊದ್ದಿದ್ದು
ಕಾಲತಕ ಬಂದ್ರೆ ತಲೆ ಮುಚ್ಚಲ್ಲ
ತಲೆಗೆಳಕಂಡ್ರೆ ಕಾಲು ಮುಚ್ಚಲ್ಲ
ಅಂಗಿದ್ರುನು ಸೈತ, ನಮ್ಮೋರು
ಏನೋ ದೇಸ ಕಾಯ್ತ ಅವ್ರೆ
ಹ್ವಲ ಕಾದಂಗಲ್ಲ, ಓಗ್ಲಿ ಅಂತಂದು
ಹೊಟ್ಟೆಬಟ್ಟೆ ಕಟ್ಟಿ ನಿಂಗೆ
ಊಟದ್ ಡಬ್ಬಿ ಬೆಚ್ಚನ್ ಕಂಬ್ಳಿ
ಟೋಪಿ ಬೂಟು ಸಾಕ್ಸು
ಎಲ್ಲದ್ನು ಕಳ್ಸವ್ರೆ.
ಆದ್ರೆ
ನಿನ್ನ ಜ್ವತೆ ಇರೋರೇನೊ ನಂ ಹೆಣ್ ಐಕ್ಳ
ಸ್ಯಾಲೆ ರವ್ಕೆ ಎಳ್ದು
ಪುಂಡಾಟ್ಕೆ ಮಾಡ್ತ ಅವ್ರಂತೆ?
ಯಾರ್ ಮಾತ್ಗು ಕ್ಯಾರೇ ಅಂತಿಲ್ಲವಂತೆ?
ಅಂಗಂತ ನಂ ಶರುಮಿಳ ಉಪಾಸ ಕೂತು
ಏಸೋ ವರ್ಸಾಗಿ ಅದ್ರ ಕೂದ್ಲು ಉದುರೋಗದಂತೆ?

ಅಲ್ಲಣಾ,
ಕಣ್ಣೆಗ್ ಕಾಣ್ದ ಗೆರೆ ಕಾಯ್ಗೋರಂತೆ ನೀವು
ಅಕ್ಕಂಗೇರ ಮರವಾದೆಮಾನ ಸೂರೆ ಮಾಡಿ
ಅದು ಯಾನಣ ಅದು ನೀವ್ ಮೆದ್ಲು ಅಂಟಿಸ್ಕಳದು?
ಸಿಟ್ಗಲ್ಲ, ಸಂಕ್ಟಕ್ ಏಳ್ದ ಮಾತು ಇದು. ಸರಿಗ್ ಕೇಳು..

ಕ್ಯಾ, ಇನ್ನೊಂದ್ ದೀಪ ಆಚ್ಚು.

ಇನ್ ಕೊನೇ ಮಾತು ಇದು,
ಯಾ ತಾಯಿ ಮಗ್ನೊ
ಯಾ ತಂಗಿ ಅಣ್ಣೋ
ಯಾ ಸೋಬ್ತಿ ಗಂಡ್ನೊ
ಯಾರದಣ್ಣ ಅದು ಆ ಹೆಣ?
ಚೆಲ್ಲಾಪಿಲ್ಲಿ ತುಂಡ್‌ತುಂಡು
ಆಚ್ಗದೇನ್ ಎದೆಬಡ್ಕಳ ಸದ್ದು?

ಅಯ್ಯಯ್ಯೋ, ಯುದ್ಧ ಅಂದ್ರೇನ್ ಆಟವೆ?
ಕುರುಕ್ಷೇತ್ರ ಮಾಭಾರತ ಪಾಠ ಕಲಿಸ್ಲಿಲ್ಲೆನು ಇನ್ನೂ?
ಕಳಿಂಗ ಮಗಧ ಪಾಠ ಆನುಸ್ಲಿಲ್ಲೆನು ಇನ್ನೂ?
ಪಾಣಿಪತ್ ತಾಳೀಕೋಟೆ ರಕ್ಕಸತಂಗಡಿ ಪ್ಲಾಸಿ..
ಒಂದೊಂದು ಗುನ್ನೆಯಿಂದ
ಒಂದೊಂದ್ ಅಕ್ಷರ ಕಲುತ್ರು ಸಾಕಿತ್ತು
ಈ ಬಡದಾಟನ ಶುರು ಹಚ್ಕಳದು ಸುಲಭ
ನಿಲ್ಸಕ್ಕೆ ಬೀಳ್ಬೇಕು ಸಾಲ್‌ಸಾಲು ಹೆಣ


ಅದ್ಕೆ, ಬಾ ಆಣೋ ದೀಪ ಹಚ್ಚಣ
ಒಳಗಿನ್ ಜ್ಯೋತಮ್ನ ಮಾತು ವಸಿ ಕೇಳಣ
ನಿನ್ ರಗತ ಮಾಂಸ ಅಲ್ಲೆ
ಈ ಜನ್ರಿಗೆ ಕೊಡಂಥದು ಏಸೊಂತರ ಅವೆ ನಿನ್ನತ್ರ
ನಿನ ಬಂದೂಕ್ನ ಬಾಯಲ್ಲಿ ಗುಬ್ಬಿ ಗೂಡು ಮಾಡ್ಲಿ
ನಿಂಗೂ ಆಚ್ಗೆ ನಿಂತೋನಿಗೂ ನೂರೊರ್ಷ ಆಯುಸ್ಸು ಸಿಗಲಿ
ಜನರೆಲ್ಲ ಇರುವ್ಯಾಗಿ ತಂತಿ ಬೇಲಿ ನುಸುಳಲಿ
ಯುದ್ಧ ಅಂಬೊ ಪದ ಮಾಯಾಗ್ಲಿ.

ಎಲ್ಲರ ದೋಸ್ತ ಆಗು. ನಿನ್ಗೆ ಶತ್ರುನೆ ಇಲ್ಲ ಆಗ್ಲಿ.

■ ಡಾ. ಹೆಚ್.ಎಸ್.ಅನುಪಮಾ

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 16-11-2016 RNI No. KARKAN200

ಮೌನಕ್ಕೆ ಜಾರಿದ ಯಶ್



ಕನ್ನಡ ವಿದ್ಯುನ್ಮಾನ ಮಾಧ್ಯಮಗಳ ಜತೆ ಯುದ್ಧಕ್ಕೆ ಇಳಿದಿದ್ದ ನಟ ಯಶ್ ಈಗ ಮೌನಕ್ಕೆ ಜಾರಿದ್ದಾರೆ. ರೈತರ ವಿಚಾರದಲ್ಲಿ ಕನ್ನಡದ ಅಷ್ಟೂ ವಾಹಿನಿಗಳಿಗೂ ಪಂಥಾಹ್ವಾನ ನೀಡಿದ್ದ ಯಶ್ ಆನಂತರ ಕೆಲವು ಮೀಡಿಯಾ ಸಂಸ್ಥೆಗಳ ಜತೆ ವೈಯಕ್ತಿಕ ದಾಳಿಗೂ ಮುಂದಾಗಿದ್ದರು. ಒಂದೊಂದೇ ಚಾನೆಲ್‌ನವರು ಯಶ್ ಅವರಿಗೆ ವೇದಿಕೆ ಕಲ್ಪಿಸುತ್ತಿದ್ದಂತೆಯೇ ವಿವಾದ ಮತ್ತೊಂದು ದಿಕ್ಕಿನತ್ತ ಸಾಗಿತು.

ಯಶ್ ನಟನೆಯ 'ಸಂತು' ಚಿತ್ರವು ರಿಲೀಸ್‌ಗೆ ಹತ್ತಿರವಿದ್ದ ಕಾರಣ, ಈ ವಿವಾದವನ್ನು ದೊಡ್ಡದು ಮಾಡಲಾಗುತ್ತಿದೆ ಎಂದು ಬಣ್ಣಿಸಲಾಯಿತು. ಅಲ್ಲಿಂದ ಯಶ್ ಆ ಸಿನಿಮಾದ ಬಗ್ಗೆ ಮಾತಾಡುವುದನ್ನೇ ನಿಲ್ಲಿಸಿದರು. ಇದರ ಪರಿಣಾಮ ಆ ಸಿನಿಮಾದ ನಿರ್ಮಾಪಕರ ಮೇಲೆ ಆಗುತ್ತಿದೆಯಂತೆ. ಹಾಗಾಗಿಯೇ ನಿರ್ಮಾಪಕ ಕೆ.ಮಂಜು ನೇರವಾಗಿಯೇ ಅಖಾಡಕ್ಕೆ ಇಳಿದಿದ್ದಾರೆ. ತಮ್ಮ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಖಾಲಿ ಹೊಡೆಯುತ್ತಿಲ್ಲ ಎಂಬ ಹೇಳಿಕೆಯನ್ನು ಪ್ರೇಕ್ಷಕರಿಗೆ ದಾಟಿಸಲು ಅದೇ ಮೀಡಿಯಾವನ್ನು ಬಳಸಿಕೊಂಡಿದ್ದಾರೆ.

ಮೊನ್ನೆಯಷ್ಟೇ ಪತ್ರಿಕಾಗೋಷ್ಠಿ ಮಾಡಿರುವ ಮಂಜು, ತಮ್ಮ ಸಿನಿಮಾದ ಬಗ್ಗೆ ಅಪಪ್ರಚಾರ ಮಾಡಬೇಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಆದರೂ, ಯಶ್ ಮಾತ್ರ ಸಿನಿಮಾದ ಬಗ್ಗೆ ಯಾವುದೇ ಮಾತುಗಳನ್ನು ಆಡುತ್ತಿಲ್ಲ, ಚಿತ್ರದ ನಾಯಕಿ ರಾಧಿಕಾ ಪಂಡಿತ್ ಕೆಲವು ಚಾನೆಲ್‌ಗಳಲ್ಲಿ ಕೂತು ಸಿನಿಮಾ ಪ್ರಚಾರ ಮಾಡುತ್ತಿದ್ದಾರೆಯೇ ಹೊರತು, ಯಶ್ ಸಿನಿಮಾನೇ ಮಾತಾಡಲಿ ಅಂದಿದ್ದಾರೆ. ಈ ಯುದ್ಧ ಎಲ್ಲಿಗೆ ಕೊನೆ ಆಗತ್ತೋ ಕಾದು ನೋಡಬೇಕು.

ಟೈಗರ್ ಸತೀಶ್

ಕನ್ನಡ ಸಿನಿಮಾ ರಂಗದಲ್ಲಿ ಹುಲಿ ಕಾಳಗ ಜೋರಾಗಿದೆ. ಹೆಬ್ಬುಲಿ, ರಾಜಾಹುಲಿ, ಮೈಸೂರು ಹುಲಿ, ಪಡ್ಡೆ ಹುಲಿ ಹೀಗೆ ಅನೇಕ ಶೀರ್ಷಿಕೆಗಳು ಈಗಾಗಲೇ ಬಳಕೆ ಆಗಿವೆ. ಹುಲಿ ಟೈಟಲ್‌ಗಳ ಕುರಿತೇ ಈ ಹಿಂದೆ ವಿವಾದ ಕೂಡ ಆಗಿತ್ತು, ತಾವೇ ಸಿನಿಮಾ ರಂಗದ ಹುಲಿ ಎಂದು ಬಿಂಬಿಸಿಕೊಳ್ಳಲು ಅನೇಕ ನಾಯಕರು ಕೂಡ ಮುಂದಾಗಿದ್ದರು. ಆದರೂ ಹುಲಿ ಮೇಲಿನ ಪ್ರೇಮ ನಿಂತಂತೆ ಕಾಣುತ್ತಿಲ್ಲ, ಸತೀಶ್ ನೀನಾಸಂ ಮುಖ್ಯಭೂಮಿಕೆಯ ಹೊಸ ಚಿತ್ರಕ್ಕೆ 'ಟೈಗರ್' ಎಂದು ನಾಮಕಾರಣ ಮಾಡಲಾಗಿದೆ. ಅಲ್ಲಿಗೆ ಸ್ಯಾಂಡಲ್‌ವುಡ್‌ಗೆ ಮತ್ತೊಂದು ಹುಲಿಯ ಆಗಮನವಾಗಿದೆ.

ರವಿ ಶ್ರೀವತ್ಸ ನಿರ್ದೇಶನದಲ್ಲಿ ಮೂಡಿ ಬರಲಿರುವ ಈ ಚಿತ್ರವನ್ನು ಎಂ.ಎನ್.ಕುಮಾರ್ ನಿರ್ಮಿಸುತ್ತಿದ್ದಾರೆ. ಈ ಕತೆಯು ನೀನಾಸಂ ಸತೀಶ್ ಮ್ಯಾನರಿಸಂಗೆ ಹೇಳಿ ಮಾಡಿಸಿದಂತಿದೆಯಂತೆ. ಸತೀಶ್ 'ಚಂಬಲ್' ಸಿನಿಮಾದ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ. ಈ ಸಿನಿಮಾದ ಚಿತ್ರೀಕರಣದ ಜತೆಜತೆಗೆ 'ಟೈಗರ್' ಚಿತ್ರಕ್ಕೂ ಡೇಟ್ ನೀಡಿದ್ದಾರಂತೆ. ಈ ಪಾತ್ರಕ್ಕಾಗಿ ಅವರೊಂದಿಷ್ಟು ಕಸರತ್ತು ಕೂಡ ಮಾಡಿಕೊಳ್ಳಬೇಕಂತೆ. ಹಾಗಾಗಿ ದಿನದ ನಾಲ್ಕು ಗಂಟೆಗಳ ಕಾಲ ಜಿಮ್‌ನಲ್ಲಿ ಅವರು ಕಾಲಕಳೆಯುತ್ತಿದ್ದಾರೆ.



ಕಿರುತೆರೆಗೆ ಹಾರಿದ ಪಾವನಾ

'ಗೊಂಬೆಗಳ ಲವ್' ಖ್ಯಾತಿಯ ಪಾವನಾ ಸದ್ದಿಲ್ಲದೇ ಕಿರುತೆರೆಗೆ ಹಾರಿದ್ದಾರೆ. ಕಲರ್ಸ್ ಸೂಪರ್ ವಾಹಿನಿಯ ಧಾರಾವಾಹಿಯೊಂದರಲ್ಲಿ ಅವರು ಪ್ರಮುಖ ಪಾತ್ರ ಮಾಡುತ್ತಿದ್ದಾರೆ. "ಹಾಗೆಂತ ನಾನು ಸಿನಿಮಾ ರಂಗವನ್ನು ಬಿಡುತ್ತಿಲ್ಲ" ಅನ್ನುವ ಮಾತುಗಳನ್ನೂ ಆಡಿದ್ದಾರೆ. "ಸೀರಿಯಲ್ ಸದ್ಯ ಸಿನಿಮಾಗಳ ಮಾದರಿಯಲ್ಲೇ ಮೂಡಿ ಬರುತ್ತಿವೆ. ಅಲ್ಲದೇ ಅಪಾರ ಪ್ರೇಕ್ಷಕರು ಕೂಡ ಇದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಧಾರಾವಾಹಿಯಲ್ಲಿ ನಟಿಸಲು ಒಪ್ಪಿಕೊಂಡಿದ್ದೇನೆ" ಅನ್ನುವುದು ಪಾವನಾ ಮಾತು.

ಸೀರಿಯಲ್ ಜತೆಜತೆಗೆ ಮತ್ತೊಂದು ಹೊಸ ಚಿತ್ರವನ್ನು ಅವರು ಒಪ್ಪಿಕೊಂಡಿದ್ದಾರೆ. 'ಕಲರ್‌ಫುಲ್' ಹೆಸರಿನಲ್ಲಿ ಮೂಡಿ ಬರುತ್ತಿರುವ ಚಿತ್ರಕ್ಕೆ ಕಲಾ ನಿರ್ದೇಶಕ ವಿನೀತ್ ಮಂಗಳೂರು ಮತ್ತು ಸೂರ್ಯ ಸಿದ್ಧಾರ್ಥ ನಾಯಕ.

ಈಗಾಗಲೇ ಕಿರುತೆರೆಯಲ್ಲಿ ಗುರುತಿಸಿಕೊಂಡಿರುವ ಸಾಗರ್ ಈ ಸಿನಿಮಾದ ನಿರ್ದೇಶಕರು. ಇದು ಪ್ರೇಮಕತೆಯನ್ನು ಆಧರಿಸಿ ಮಾಡಿರುವ ಸಿನಿಮಾವಂತೆ.



ಪ್ರಾಬ್ಲಮ್‌ನಲ್ಲಿ ಗಡ್ಡಪ್ಪ



"ಏನ್ ನಿನ್ನ ಪ್ರಾಬ್ಲಮ್ಮು" ಎಂಬ ಡೈಲಾಗ್ ಫೇಮಸ್ ಆಗಿರುವ 'ತಿಥಿ' ಚಿತ್ರದ ಗಡ್ಡಪ್ಪ ಹೆಸರಿನ ಸಿನಿಮಾದಲ್ಲಿ ನಾಯಕರಾಗಿ ನಟಿಸು ಸಿನಿಮಾವನ್ನು ನಿರ್ದೇಶನ ಮಾಡುತ್ತಿರುವುದು 'ಗ ನಿರ್ದೇಶಕ ಲಕ್ಕಿ, ಇದೇ ಸದ್ಯ ಸ್ಯಾಂಡಲ್‌ವುಡ್ ತಂದಿರುವ ವಿಷಯ.

ಲಕ್ಕಿ ನಿರ್ದೇಶನದ ಈ ಹಿಂದಿನ ಎರಡೂ ಸಿ ಹೇರಳವಾಗಿ ಡಬಲ್ ಮೀನಿಂಗ್ ಸಂಭಾಷಣೆ ಸಿನಿಮಾದಲ್ಲೂ ಅದು ಮುಂದುವರೆದಿದೆ ಎ 'ತಿಥಿ' ಚಿತ್ರದ ಮೂಲಕ ಕನ್ನಡ ಸಿನಿಮಾರಂಗವನ್ನು ಅಂತಾರಾಷ್ಟ್ರೀಯ ಗುರುತಿಸುವಂತೆ ಮಾಡಿದ್ದ ಗಡ್ಡಪ್ಪ, ಸೆಂಚ್ಯುರಿ ಗೌಡ ಮತ್ತು ಅಭಿ ಈ ದ್ವಂದ್ವಾರ್ಥ ಮಾತುಗಳನ್ನು ಆಡಿದ್ದಾರೆ. ಈ ಕುರಿತು 'ತಿಥಿ' ಸಿನಿಮಾದ ಕತೆಗಾರ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. "ಬೇರೆ ಬೇರೆ ಸಿನಿಮಾಗಳಲ್ಲಿ 'ತಿಥಿ' ಚಿತ್ರದ ಕಾಣಿಸಿಕೊಳ್ಳುತ್ತಿದ್ದಾರೆ. ಅವರು ನಟಿಸುತ್ತಿರುವುದು ತಪ್ಪು ಅಂತ ನಾನು ಹೇ ಆದರೆ, ಅವರನ್ನು ಸಿನಿಮಾ ರಂಗವು ಹೇಗೆ ಬಳಸಿಕೊಳ್ಳುತ್ತಿದೆ ಅನ್ನುವುದು ಆತಂಕ ಅಂದಿದ್ದಾರೆ.


'ಏನ್ ನಿನ್ನ ಪ್ರಾಬ್ಲಮ್' ಸಿನಿಮಾ ಕೂಡ ಹಳ್ಳಿಯೊಂದರಲ್ಲಿ ನಡೆಯುವ ಘ ಆಧರಿಸಿದ ಚಿತ್ರವಂತೆ. ಒಂದೊಳ್ಳೆ ಸಂದೇಶವನ್ನು ಸಿನಿಮಾ ನೀಡಲಿದೆ ಅಂದಿದ್ದಾರೆ ನಿ

ಸಿಕ್ಸ್‌ಪ್ಯಾಕ್ ಸೂರಿ

ನಟರು ಸಿಕ್ಸ್‌ಪ್ಯಾಕ್‌ನಲ್ಲಿ ಕಾಣಿಸಿಕೊಳ್ಳುವುದು ಕಾಮನ್. ಇತ್ತೀಚೆಗೆ ಆ ನಟಿಯರೂ ಕಾಣಿಸಿಕೊಳ್ಳುತ್ತಿದ್ದಾರೆ. ಮಮತಾ ರಾವುತ್ ಎಂಬ ಹುಡುಗಿಯು ಮೊದಲ ಬಾರಿಗೆ ಸಿಕ್ಸ್ ಪ್ಯಾಕ್ ಶರೀರದಲ್ಲಿ ಕಾಣಿಸಿಕೊಂಡು ಅಚ್ಚರಿ ಮ ಆದರೀಗ ನಿರ್ದೇಶಕರೂ ಅದೇ ಹಾದಿ ಹಿಡಿದಿದ್ದಾರೆ. ಯಾಕೆಂದರೆ ಈಗ ದುನಿಯಾ ಸೂರಿ ಅವರೂ ಸಿಕ್ಸ್‌ಪ್ಯಾಕ್ ಮಾಡಿಕೊಂಡು ಕ್ಯಾಮೆರಾಗೆ ಪೋಸ್

ಈ ಸಿಕ್ಸ್‌ಪ್ಯಾಕ್ ಹಿಂದಿನ ರಹಸ್ಯವೇನು ಎಂಬ ಹಲವರ ಪ್ರಶ್ನೆಗೆ ಅವರ ಉತ್ತರ ನಗು ಮಾತ್ರ. ನಿರ್ದೇಶಕರಾಗಿ ಬಿಜಿ ಇರುವ ಸೂರಿ, ಸಿಕ್ಸ್‌ಪ್ಯಾಕ್ ಮಾಡಿಕೊಳ್ಳಲು ಕಾರಣ ಕುಡಿತವಂತೆ. ಕುಡಿಯುವ ಅಭ್ಯಾಸದಿಂದ ದೂರವಿರ ಇನ್ನೊಂದು ಮಾರ್ಗವನ್ನು ಕಂಡು ಹಿಡಿದುಕೊಂಡಿದ್ದಾರಂತೆ. ಜತೆಗೆ 'ಕಾಗೆ ಎಂಬ ಮತ್ತೊಂದು ಕಡಿಮೆ ಬಜೆಟ್‌ನ ಸಿನಿಮಾದಲ್ಲಿ ಇವರು ಪಾತ್ರ ಕೂಡ ಮಾಡ ಹಾಗಾಗಿ ಒಂದೇ ಕಲ್ಲಿಗೆ ಎರಡು ಹಕ್ಕಿಯನ್ನು ಉದುರಿಸುತ್ತಿದ್ದಾರೆ.

"ಸತತ ಆರು ತಿಂಗಳಿಂದ ಇದಕ್ಕಾಗಿ ಕಷ್ಟಪಟ್ಟಿದ್ದೇನೆ. ನನ್ನ ಜೀವನದಲ್ಲಿ ಶಿಸ್ತು ಕೂಡ ಬಂದಿದೆ. ಫಿಟ್‌ನೆಸ್ ಗುರು ಶ್ರೀನಿವಾಸ್ ಅವರು ಬೆಂಡೆತ್ತಿ ಪ್ಯಾಕ್ ಕಾಣುವಂತೆ ಮಾಡಿದ್ದಾರೆ. ಯಾವುದಕ್ಕೂ ಇರಲಿ ಅಂತ ಫೋಟೋ ಶೂಟ್ ಕೂಡ ಮಾಡಿಸಿದ್ದೇನೆ. ಆ ಫೋಟೋ ಈಗ ವೈರಲ್ ಆಗಿವೆ" ಅನ್ನುವುದು ಸೂರಿ ಮಾತು. ಸದ್ಯ 'ಟಗರು' ಚಿತ್ರದ ಶೂಟಿಂಗ್‌ನಲ್ಲಿರುವ ಸೂರಿ ಆನಂತರ 'ಕಾಗೆ ಬಂಗಾರ' ಸಿನಿಮಾವನ್ನು ಕೈಗೆತ್ತಿಕೊಳ್ಳಲಿದ್ದಾರಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com